
# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ 2021




" ಓಹೋ ಚಕ್ರ ಕಂಡುಹಿಡಿದಿದ್ದೀರೋ?
ಆದರಿಂದೇನು ಪ್ರಯೋಜನಾ ಅಂತೀನಿ !"

ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ




# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 39

ಸಂಚಿಕೆ – 1

ಆಕ್ಟೋಬರ್ – 2021


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ದೇವರು ವರವನು ಕೊಟ್ರೆ.... | | |
| ಶ್ರೀ ಕೃಷ್ಣ ಪ್ರತ್ಯಕ್ಷ | ಚಿತ್ರಾ ರಾಮಚಂದ್ರನ್ | 6 |
| ಮುಕ್ತಿ ಬಿಡ್ತಾರೋ | ಹೆಚ್. ಗೋಪಾಲಕೃಷ್ಣ | 8 |
| ಮೂರು ವರಗಳು | ಶ್ಯಾಮಲಾ ಸತ್ಯ | 9 |
| ಗಾಯಬ್ ಆದ ಭಗವಂತ | ಆನಂದ | 10 |
| ನನ್ನ ಬೇಡಿಕೆ | ವಸುಧಾ ಸುಬ್ರಹ್ಮಣ್ಯ | 11 |
| ಮಾಧ್ಯಮಾವತಾರ | ಸಂಕೇತ ಅಶೋಕ ಪೂಜಾರ | 12 |
| ಸರ್ವಂ ಸಂಗೀತಮಯಂ | ಸಂಧ್ಯಾ ರಮೇಶ್ | 16 |
| ಏಕ್ಸಾಂ ಹಾಲ್ ತೊರೆದು..... | ಮಾಲ ಮ. ಅಕ್ಕಿಶೆಟ್ಟಿ | 21 |
| ವೈರಸ್ ಆಫ್ ದ ಇಯರ್ | ಇ..ಆರ್. ರಾಮಚಂದ್ರನ್ | 25 |
| ತುಂತುರು | ದನಂಅ | 29 |
| ಒಬ್ಬಟ್ಟಿನ ಬೊಂಬಾಯಿ ಪ್ರಯಾಣ | ಕೆ.ಎನ್. ಸುಬ್ಬರಾವ್ | 31 |
| ನೀನೂ ಅವನ ಹಾಗಾಗಬೇಡ | ಸುಕೇಶವ | 34 |
| ಪ್ರಯಾಣ ಪ್ರಸಂಗಗಳು | ರವಿ ಶಿವರಾಯಗೊಳ | 36 |
| ಪುಸ್ತಕ ಪರಿಚಯ | ಆರತಿ ಘಟಿಗಾರ್ | 40 |



**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಮುಖಪುಟ : **ಇಂಟರ್‌ನೆಟ್ ಕೃಪೆ**

ವ್ಯಂಗ್ಯಚಿತ್ರ: **ಶೃಂಗೇರಿ ಸತೀಶ್, ಆದರ್ಶ ಪೈ**

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,

ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,

ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,

ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST

Current Account No.: 109804180000056, IFS Code : SVCB0000098

SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್



## ಅಪರಂಜಿ ಕಿಡಿ

●ಪ್ರಕಾಶ್

ಡಿವಿಜಿ ಮನೆ ನೆಲಸಮ – ಮುಳುಬಾಗಿಲು ಸುದ್ದಿ

**ಪರದಲ್ಲು ಸುಖವುಂಟೆ ಮಂಕುತಿಮ್ಮ !!**

* * *

ಹತ್ತು ಲಕ್ಷ ಮನೆಗಳಿಗೆ ಬೆಳಕು – ಇಂಧನ ಸಚಿವರು

**' ಲಕ್ಷ ' ಲಕ್ಷ್ಯ ವಾಗಿಯೇ ಉಳಿಯದಿರಲಿ !!**

* * *

ಇಷ್ಟಪಟ್ಟು ಓದಿದರೆ ಯಶಸ್ಸು ನಿಶ್ಚಯ – ಚಿನ್ನದ ಹುಡುಗಿ ಹರ್ಷಿತ

**ಬಂಗಾರದಂತಹ ಮಾತು !!**

* * *

ಪೆಟ್ರೋಲ್ ದರ ಏರಿಕೆ ವಿವಾದ ಎದುರಿಸಲು ಸಿದ್ಧ – ಮಾನ್ಯ ಸಚಿವರು

**ಸಧ್ಯ, ಕಿಡಿ ಹಾರದಿದ್ದರೆ ಸಾಕು !!!**

* * *

ಹಿಂದಿ ದಿವಸ ಆಚರಣೆಗೆ ವಿರೋಧ – ಸುದ್ದಿ

**ಕ್ಯಾ ಬಾತ್ ಕರ್ ರಹೇ ಹೈ ?!!**

* * *

ದೇಗುಲದ ಆಸ್ತಿಗೆ ದೇವರೇ ಮಾಲೀಕ – ಸುಪ್ರೀಂ ಕೋರ್ಟ್

**ಜಗನ್ನಿಯಾಮಕ ಬೆದರಿದನಂತೆ !?!**

* * *

ಪಕ್ಷಗಳ ಆದಾಯ ............. ಅನಾಮಧೇಯ – ಸುದ್ದಿ

**ಇದು ಅನೂಚಾನ ಸಂಪ್ರದಾಯ !!**

* * *

ಉಗ್ರರ ನೆಲೆಯಾಗದಿರಲಿ ಆಫ್ಘಾನಿಸ್ತಾನ – ಹೇಳಿಕೆ

**ಅರಣ್ಯ ರೋದನಕ್ಕೆ ಕೆಟ್ಟ ಉದಾಹರಣೆ !!!**

* * *

# ನಮ್ಮ ನಿಮ್ಮಲ್ಲಿ

♦ **ಶಿವಕುಮಾರ್**

ಬಹು ವರ್ಷಗಳ ಹಿಂದಿನ ಮಾತು. ಅಪರಂಜಿ ಪತ್ರಿಕೆಯ ಪ್ರಾರಂಭದ ದಿನಗಳವು. ಶೇಷಗಿರಿ ಆಗ ಚಿತ್ರದುರ್ಗದಲ್ಲಿದ್ದರು. ಅ.ರಾ ಸೇ ಇದ್ದದ್ದು ದುರ್ಗದ ಹತ್ತಿರವೇ ಇದ್ದ ಭರಮಸಾಗರದಲ್ಲಿ. ಅಪರಂಜಿಯ ಲೇಖನಗಳನ್ನೆಲ್ಲಾ ಇವರಿಬ್ಬರೂ ಪ್ರತಿ ತಿಂಗಳೂ ಕಲೆಹಾಕಿ ಮೈಸೂರಿನಲ್ಲಿದ್ದ ಪಂಚಾಕ್ಷರಿಗೆ ಮುದ್ರಣಕ್ಕೆ ಕಳುಹಿಸುತ್ತಿದ್ದರು. ಆತ ಅವನ್ನು ಮುದ್ರಿಸಿ ಪತ್ರಿಕೆಗಳನ್ನು ವಿತರಣೆಗಾಗಿ ಬೆಂಗಳೂರಿಗೆ ರವಾನಿಸುತ್ತಿದ್ದ. ಪತ್ರಿಕೆಗಳಿಗೆ ಅಂಚೆಚೀಟಿಗಳನ್ನು ಅಂಟಿಸಿ, ಚಂದಾದಾರರ ವಿಳಾಸಗಳನ್ನು ನಮೂದಿಸಿ ಅಂಚೆಗೆ ತಲುಪಿಸುವುದು ನನ್ನ ಜವಾಬ್ದಾರಿಯಾಗಿತ್ತು. ಈ ದ್ರಾವಿಡ ಪ್ರಾಣಾಯಾಮ ನಡೆಯುತ್ತಿದ್ದ ಆ ಕಾಲಘಟ್ಟದಲ್ಲಿ ಒಮ್ಮೆ ಅ.ರಾ.ಸೇ.ಯವರನ್ನು ಭೇಟಿಯಾಗಲು ಲೀಲಕ್ಕ ಮತ್ತು ನಾನು ಬೆಂಗಳೂರಿನಿಂದ ಕಾರಿನಲ್ಲಿ ಹೊರಟೆವು. ತುಮಕೂರು ಸಿರಾ ದಾಟಿ ದುರ್ಗ ತಲುಪಿದಾಗ ಬೆಳಗ್ಗೆ ಹತ್ತೂವರೆಯಾಗಿತ್ತು. ಅಲ್ಲಿ ಶೇಷಗಿರಿಯನ್ನು ಹತ್ತಿಸಿಕೊಂಡು ಭರಮಸಾಗರಕ್ಕೆ ಪಯಣ. ಚಿತ್ರದುರ್ಗದಿಂದ ದಾವಣಗೆರೆ ದಾರಿ ಹಿಡಿದರೆ ಅರ್ಧದೂರ ದಾಟುವಷ್ಟರಲ್ಲಿ ಬಲಕ್ಕೆ ಭರಮಸಾಗರ ಸಿಗುತ್ತದೆ. ಅ.ರಾ.ಸೇ ಈ ಊರಿನ ಬಗ್ಗೆ ಒಂದು ಕವನ ಬರೆದು ಈ ಊರಿನ ಹೆಸರನ್ನು ಜನಮಾನಸದಲ್ಲಿ ಚಿರಸ್ಥಾಯಿಯಾಗುವಂತೆ ಮಾಡಿದ್ದಾರೆ. ಇರಲಿ.

ಅ.ರಾ.ಸೇ ಅವರ ಮನೆ ಇದ್ದದ್ದು ಊರೊಳಗಿನ ನಾಲ್ಕನೆಯ ಬೀದಿಯಲ್ಲಿ. ಹೆಂಚಿನ ಮನೆ. ಮನೆಯ ಮುಂದೆ ಒಂದು ಪುಟ್ಟ ತೋಟ. ಮಲ್ಲಿಗೆ ಬಳ್ಳಿ, ಪಾರಿಜಾತದ ಗಿಡ, ಕುಂಬಳ ಬಳ್ಳಿ ಇವೆಲ್ಲಾ ಇದ್ದ ಆ ತೋಟ ನಮ್ಮ ಬೆಂಗಳೂರು ಕಣ್ಣುಗಳಿಗೆ ತಂಪೆರೆಯುವ ದೃಶ್ಯವಾಗಿತ್ತು. ಗುರುದತ್ತ (ಅ.ರಾ.ಸೇ ಅವರ ಮಗ) ನಮ್ಮನ್ನು ಇದುರುಗೊಂಡು ಒಳಕ್ಕೆ ಕರೆದುಕೊಂಡು ಹೋದ. "ಅಪ್ಪ ದೇವಸ್ಥಾನಕ್ಕೆ ಹೋಗಿದ್ದಾರೆ, ಬರೋ ಸಮಯ. ಕೂತುಕೊಳ್ಳಿ ಅಂತ ಉಪಚರಿಸಿದ. ನಾನು ಸುತ್ತ ಕಣ್ಣಾಡಿಸಿದೆ. ಬಲಗಡೆ ಒಂದು ಪುಸ್ತಕಗಳ ಬೀರು. ಅದರ ಪಕ್ಕದಲ್ಲೇ ಒಂದು ಮೇಜು, ಕುರ್ಚಿ. ಮೇಜಿನ ಮೇಲೆ ಪುಸ್ತಕಗಳು, ಕರಡು ಬರವಣಿಗೆಗಳು ಪೆನ್ನು ಎಲ್ಲಾ ಚೆಲ್ಲಾಪಿಲ್ಲಿಯಾಗಿ ಹರಡಿದ್ದವು. ಕುರ್ಚಿಯ ಬೆನ್ನನ್ನು ಒಂದು ನೀಲಿ ಸ್ವೆಟರ್ ಅಲಂಕರಿಸಿತ್ತು.

ಅ.ರಾ.ಸೇ. ಬಂದರು. ಕುಶಲ ಪ್ರಶ್ನೆಗಳು ಮುಗಿದನಂತರ ಶೇಷಗಿರಿ, "ಮುಂದಿನ ತಿಂಗಳ ಲೇಖನ ಸಿದ್ಧ ಅಂತ ಹೇಳಿದ್ದರಲ್ಲಾ ಕೊಡುತ್ತೀರಾ?" ಅಂತ ಕೇಳಿದರು. ಅ.ರಾ.ಸೇ ಮೇಜಿನ ಮೇಲಿದ್ದ ಕಾಗದ ಪತ್ರಗಳನ್ನೆಲ್ಲಾ ತಡಕಾಡಿದರು. ಅವರ ಲೇಖನ ಸಿಗಲಿಲ್ಲ. "ಈ ರೀತಿ ಚೆಲ್ಲಾಪಿಲ್ಲಿಯಾಗಿದ್ದರೆ ಏನು ತಾನೇ ಸಿಗುತ್ತದೆ, ಸ್ವಲ್ಪ ವಿಚಕ್ಷಣೆಯಿಂದ ಜೋಡಿಸಿಟ್ಟುಕೊಳ್ಳಿ ಅಂತ ನಾನು ಹೇಳ್ತಾನೇ ಇರ್ತೀನಿ" ಅಂತ ಒಳಗಿನಿಂದ ಗೊಣಗುಟ್ಟಿದ್ದು ಕೇಳಿಬಂತು. "ಹಾಗಲ್ಲಾ ಕಣೇ, ಆ ಲೇಖನಕ್ಕೆ ನಿಜವಾದ ಸತ್ವ ಇದ್ರೆ ಅದು ತಾನಾಗೇ ಮೇಲೆ ಬರುತ್ತೆ" ಅಂತ ಅ.ರಾ.ಸೇ ಕುಹಕವಾಡಿದರು. ಲೀಲಕ್ಕೆ ಮಧ್ಯೆ ಬಾಯಿಹಾಕಿ, "ಅದು ಹಾಗಲ್ಲ ಸರಸ್ವತಿ, ವಾಬಿಸಾಬಿ ಮಹತ್ವ ಅದು" ಅಂತ ಹೇಳಿದರು.

" ವಾಬಿಸಾಬಿ ? ಅದೇನು ಲೀಲಕ್ಕ ಅದು?" ಅಂತ ಟವಲಿನಲ್ಲಿ ಕೈ ಒರೆಸಿಕೊಳ್ಳುತ್ತಾ ಸರಸ್ವತಿ ಬಂದು ನಮ್ಮೊಡನೆ ಕುಳಿತರು.

" ಅದು ಜಪಾನಿನಲ್ಲಿ ಆಚರಣೆಯಲ್ಲಿರುವ ಜೆನ್ ಮತದ ಒಂದು ಮುಖ್ಯ ಸೂತ್ರ. ವಾಬಿ ಎಂದರೆ ಸರಳತೆಯ ಸೊಗಸು, ಪರಂಪರೆಯಿಂದ ಬಂದ ವಿವೇಕ, ಸಾಬಿ ಎಂದರೆ ಸಾಂಪ್ರದಾಯಿಕ ಆಚರಣೆಗಳ ಮೂಲಕ ಚಿತ್ತಶುದ್ಧಿಯನ್ನು ಸಾಧಿಸುವ ಪ್ರಕ್ರಿಯೆ. ವಾಬಿ ಸಾಬಿ ದರ್ಶನವನ್ನು ಪದಗಳಲ್ಲಿ ಸೆರೆ ಹಿಡಿಯುವುದು ಕಷ್ಟ. ಅದು ಒಂದು ಜೀವನ ಶೈಲಿ. ಅಪೂರ್ಣತೆಯಲ್ಲಿನ ಸೌಂದರ್ಯ ಅನ್ನಬಹುದು, ಯಾವುದು ಅಶಾಶ್ವತವೋ ಅಪರಿಪೂರ್ಣವೋ ಅದರಲ್ಲಿನ ಕ್ಷಣಿಕತೆಯಲ್ಲಿ ದೈವತ್ವವನ್ನು ಕಾಣುವುದು. ಸೃಜನಶೀಲ ಮನಸ್ಸು ತನ್ನ ಕಾರ್ಯಕ್ಕೆ ಸ್ವೇಚ್ಛೆಯಾದ ಚೆಲ್ಲಾಪಿಲ್ಲಿ ಮನೋಭಾವವನ್ನೇ ಬಯಸುತ್ತದೆ. ಎಲ್ಲವು ಅಚ್ಚುಕಟ್ಟಾಗಿ ಯಾವುದೇ ದೋಷವಿಲ್ಲದೇ ಜೋಡಿಸಿ ಇಟ್ಟರೆ ಸೃಜನಶೀಲತೆಯೇ ಮಾಯವಾಗಬಹುದು.

ವಾಬಿಸಾಬಿ ಒಂದು ಮನಃಸ್ಥಿತಿ. ಜಗತ್ತಿನಲ್ಲಿ ನಾವು ಗಮನಿಸುವ ಅಪರಿಪೂರ್ಣತೆ, ತಾತ್ಕಾಲಿಕತೆ ಇವುಗಳನ್ನೆಲ್ಲಾ ಮುಕ್ತಮನಸ್ಸಿನಿಂದ ಸ್ವೀಕರಿಸಿ ಸಂಭ್ರಮಿಸುವುದು, ಮೂಲಭೂತವಾಗಿ ಕ್ಷಣಿಕವಾಗಿರುವ ಜಗತ್ತಿನಲ್ಲಿ ಪರಿಪೂರ್ಣತೆಯನ್ನು ಅರಸುವ ನಿರರ್ಥಕ ಪ್ರಯತ್ನವನ್ನು ತೊರೆದು ಅಪರಿಪೂರ್ಣತೆಯೂ ಸಹಾ ದೈವಸೃಷ್ಟಿಯೇ ಎಂಬ ಸತ್ಯವನ್ನು ಮನಗಾಣುವುದು ವಾಬಿಸಾಬಿ................" ಅನ್ನುವಷ್ಟರಲ್ಲಿ ಶೇಷಗಿರಿ,

"ಹಾಗಾದರೆ ಶುದ್ಧ, ಪರಿಪೂರ್ಣ ಎಂಬ ಪದಗಳಿಗೆ ಮಹತ್ವವೇ ಇಲ್ಲ ಎನ್ನುತ್ತೀರ ಲೀಲಕ್ಕ?" ಅಂತ ಕೇಳಿದ.

"ಖಂಡಿತ ಇದೆ. ಆದರೆ ಅದಕ್ಕೂ ಸಾಂದರ್ಭಿಕತೆ ಇರುತ್ತದೆ. ಒಂದು ಉದಾಹರಣೆ ಕೇಳಿ. ಜಪಾನಿನಲ್ಲಿ ಒಬ್ಬ ಬೌದ್ಧ ಭಿಕ್ಕು ಇದ್ದನಂತೆ. ಅವನು ಒಮ್ಮೆ ಅವನು ತನ್ನ ಶಿಷ್ಯನನ್ನು ಕರೆದು, ತೋಟದಲ್ಲಿರುವ ಚೆರ್ರಿ ಬ್ಲಾಸಮ್ ಮರದಲ್ಲಿ ಹೂವುಗಳು ಅರಳಿವೆ. ನೀನು ಅಲ್ಲಿ ಹೋಗಿ ಆ ಜಾಗವನ್ನು ಸ್ವಲ್ಪ ಸ್ವಚ್ಛ ಮಾಡು. ನಾನು ಅಲ್ಲಿ ಆ ಮರದ ಕೆಳಗೆ ಕುಳಿತು ಧ್ಯಾನಮಾಡುವನಿದ್ದೇನೆ " ಅಂತ ಹೇಳಿದನಂತೆ. ಆ ಶಿಷ್ಯ ಬಹು ಸಡಗರದಿಂದ ಆ ಮರದ ಬಳಿಹೋಗಿ ಮರದಿಂದ ಉದುರಿದ್ದ ಹೂವುಗಳನ್ನೆಲ್ಲಾ ಚೆನ್ನಾಗಿ ಗುಡಿಸಿ ತೆಗೆದು ಆ ಜಾಗವನ್ನೆಲ್ಲಾ ಶುಭ್ರಮಾಡಿ ತನ್ನ ಗುರುವನ್ನು ಮರವನ್ನು ನೋಡಲು ಆಹ್ವಾನಿಸಿದನಂತೆ. ಗುರು ಮರದ ಬಳಿಬಂದು, ಒಮ್ಮೆ ನಿಧಾನವಾಗಿ ಸುತ್ತ ನೋಡಿ ಅನಂತರ ಮರದ ಬಳಿಗೆ ಹೋಗಿ ಮರವನ್ನು ಜೋರಾಗಿ ಅಲುಗಾಡಿಸಿದನಂತೆ. ಅವನು ಅಲುಗಾಡಿಸಿದ ಜೋರಿಗೆ ಒಂದು ಸಣ್ಣ ಪುಷ್ಪವೃಷ್ಟಿಯೇ ಆಯಿತಂತೆ. ಶಿಷ್ಯನ ಮುಖದಲ್ಲಿನ ಪ್ರಶ್ನಾರ್ಥಕ ಭಾವವನ್ನು ನೋಡಿ ಗುರು ಉತ್ತರಿಸಿದನಂತೆ "ಸೌಂದರ್ಯ ಕೇವಲ ಅರಳಿರುವ ಹೂವುಗಳಲ್ಲಿ ಮಾತ್ರ ಇರುವುದಿಲ್ಲ. ಮೊಗ್ಗು, ಅರಳಿರುವ ಹೂವು, ಬಾಡಿರುವ ಹೂವು ಇವೆಲ್ಲಾ ಸೇರಿದಾಗ ಮಾತ್ರ ಸೌಂದರ್ಯ. ಬಾಡಿರುವ ಹೂವಿಲ್ಲದೇ ಅರಳಿರುವ ಹೂವಿನ ಸೌಂದರ್ಯ ಪರಿಪೂರ್ಣವಾಗುವುದಿಲ್ಲ. ಕತ್ತಲೆಯ ಅನುಭವವಿಲ್ಲದೆ, ಬೆಳಕಿನ ಮಹತ್ವದ ಅರಿವು ಅಲಭ್ಯ."

ಇದನ್ನೆಲ್ಲಾ ಅ.ರಾ.ಸೇ. ತದೇಕ ಚಿತ್ತದಿಂದ ಕೇಳುತ್ತಿದ್ದರು. ಸಾಮಾನ್ಯವಾಗಿ ಅವರಿದ್ದಲ್ಲಿ ಇತರರಿಗೆ ಮಾತನಾಡಲು ಅವಕಾಶವೇ ಸಿಗುತ್ತಿರಲಿಲ್ಲ. ಎಲ್ಲ ಕೇಳಿಸಿಕೊಂಡು ಅ.ರಾ.ಸೇ., "ಲೀಲಕ್ಕ, ಈ ವಾಬಿಸಾಬಿ ಪ್ರಕೃತಿ ಸೌಂದರ್ಯಕ್ಕೆ ಮಾತ್ರ

ಸೀಮಿತವಾದದ್ದೋ?" ಅಂತ ಪ್ರಶ್ನಿಸಿದರು.

"ಹಾಗೇನೂ ಇಲ್ಲ. ಸಮಾಜದಲ್ಲಿನ ಸಂಪರ್ಕ, ಸಂವಹನಗಳಲ್ಲೂ ಇದರ ಪಾತ್ರ ಮಹತ್ವದ್ದು. ಇತರರಲ್ಲಿರುವ ಕುಂದು ಕೊರತೆಗಳನ್ನು ದೋಷಗಳೆಂದು ಭಾವಿಸದೇ ಅವರ ಸಂಪರ್ಕವನ್ನ, ಸ್ನೇಹವನ್ನ ಮುಕ್ತ ಮನಸ್ಸಿನಿಂದ ಗೌರವಿಸುವುದು ವಾಬಿಸಾಬಿ ಮನಃಸ್ಥಿತಿ ಎನ್ನಬಹುದು. ಈ ಕುರಿತು ನಮ್ಮ ವಿಮಲಕ್ಕ ಒಂದು ಹೈಕು ಬರೆದಿದ್ದರು......." ಅನ್ನುತ್ತಿದ್ದಾಗಲೇ ಸರಸ್ವತಿ, "ಹೈಕು? ಹಾಗೆಂದರೇನು?" ಅಂತ ಪ್ರಶ್ನಿಸಿದರು.

"ಅದೊಂದು ಜಾಪನೀಯರ ಶೈಲಿಯ ಹನಿಗವನ. ಅದೊಂದು ತ್ರಿಪದಿ. ಮೊದಲ ಸಾಲಿನಲ್ಲಿ ಐದು ಅಕ್ಷರ, ಎರಡನೆಯ ಸಾಲಿನಲ್ಲಿ ಏಳು ಮತ್ತು ಕೊನೆಯ ಸಾಲಿನಲ್ಲಿ ಮತ್ತೆ ಐದು ಅಕ್ಷರಗಳು. ನಮ್ಮಕ್ಕ ಈ ಪದ್ಯಗಳನ್ನು ಬಹುವಾಗಿ ಮೆಚ್ಚಿಕೊಂಡು ಹೈಕು ಬಗ್ಗೆ ಒಂದು ಪುಸ್ತಕವನ್ನೇ ಬರೆದಿದ್ದಾರೆ. "ಎಲ್ಲದರಲ್ಲಿಯೂ ಯಾವುದೋ ಒಂದು ಬಿರುಕು ಇರುತ್ತದೆ. ಬಿರುಕಿದ್ದರೆ ತಾನೆ ಬೆಳಕು ಬರುವುದು ಸಾಧ್ಯ" ಅಂತ ವಾಬಿಸಾಬಿ ಹೇಳುತ್ತದೆ. ಈ ಬಗ್ಗೆ ನಮ್ಮಕ್ಕ ವಿಮಲಾ ಒಂದು ಹೈಕು ಬರೆದಿದ್ದರು.

**ಗೋಡೆ ಬಿರುಕು**
**ಸೂರ್ಯನ ಹೊಂಬೆಳಕು**
**ನುಸುಳಿ ಬಂತು.**

ಪರಂಪರೆಯಿಂದ ಬಂದ ವಸ್ತುಗಳನ್ನು ಗೌರವಿಸಿ ಅವನ್ನು ಜೋಪಾನ ಮಾಡುವ ಮೂಲಕ ಮನಸ್ಸಿನ ಅನಗತ್ಯ ಒಳಹರಟೆಯನ್ನು ನಿಯಂತ್ರಿಸ ಬಹುದು ಎಂದು ಜೆನ್ ಹೇಳುತ್ತದೆ. ಇದಕ್ಕಾಗಿಯೇ ಜಾಪನೀಯರು ಟೀ ಸೆರಮನಿಯನ್ನು ಅಷ್ಟು ಶ್ರದ್ಧೆಯಿಂದ ಆಚರಿಸುತ್ತಾರೆ."

ಅದೊಂದು ಅವಿಸ್ಮರಣೀಯ ದಿನ. ಲೀಲಕ್ಕನ ಉಪಾಖ್ಯಾನದ ನಂತರ ಅ.ರಾ.ಸೇ. ಕುಮಾರವ್ಯಾಸನ ಬಗ್ಗೆ ಬಹು ಸೊಗಸಾದ ವ್ಯಾಖ್ಯಾನ ನೀಡಿದರು. ಅದರ ಬಗ್ಗೆ ಮುಂದೆಂದಾದರೂ ಬರೆಯುವೆ. ಅವತ್ತು ಊಟಕ್ಕೆ ಸರಸ್ವತಿ ಕುಂಬಳ ಕಾಯಿ ಹುಳಿ ಮಾಡಿದ್ದರು. ಅದೆಷ್ಟು ರುಚಿಯಾಗಿತ್ತು ಅಂತೀರಿ. ಲೀಲಕ್ಕ, "ಅದು ಹೇಗೆ ಇಷ್ಟು ರುಚಿ ಬಂತು?" ಅಂತ ಕೇಳೇ ಬಿಟ್ಟರು.

"ಅಂಥಾದ್ದೇನಿಲ್ಲಾ ಲೀಲಕ್ಕ. ಮಾಮೂಲು ಹುಳಿ ಅಷ್ಟೇ. ಹುರುಳೀ ಕಾಯಿ ಮತ್ತು ಬೂದುಗುಂಬಳ ಎರಡೂ ಮನೇ ತೋಟದ್ದೇ. ಸ್ವಲ್ಪ ಘಮ ಇರಲಿ ಅಂತ ಏಲಕ್ಕಿ ಸಿಪ್ಪೆ ತಿರುವಿ ಹಾಕಿದ್ದೀನಿ ಅಷ್ಟೆ" ಅಂತ ಸರಸ್ವತಿ ಉತ್ತರಿಸಿದರು.

ಶೇಷಗಿರಿ, "ಅದು ವಾಬಿಸಾಬಿ ಹುಳಿ. ಸೌದೆ ಒಲೇಲಿ ಕುದಿಸಿದ್ದು. ಬಳಸಿರೋದು ಮನೆ ತರಕಾರಿ. ಅಪರೂಪದ ಅತಿಥಿಗಳು ಅಂತ ಸರಸ್ವತಿ ಅಷ್ಟು ಪ್ರೀತಿಯಿಂದ ಮಾಡಿದ್ದಾರೆ. ಅದರ ರುಚಿಯ ಮಟ್ಟ ಯಾವ ಪಂಚತಾರಾ ಹುಳಿಗೂ ನಿಲುಕದು" ಅಂತ ಹುಳಿಯನ್ನ, ಅದರ ಸೃಷ್ಟಿಕರ್ತೆಯನ್ನು ಪ್ರಶಂಸಿಸಿದರು.

ಭೇಟಿ ಮುಗಿಸಿ, ಎಲ್ಲರೂ ದುರ್ಗಕ್ಕೆ ಹೋಗಿ, ಓಬವ್ವನ ಕಿಂಡಿ ನೋಡಿಕೊಂಡು ವೀರ ಮದಕರಿನಾಯಕನ ಗಾಥೆಯನ್ನು ಶೇಷಗಿರಿಯವರ ಬಾಯಿಂದಲೇ ಕೇಳಿಸಿಕೊಂಡು ಊರಿನ ದಾರಿ ಹಿಡಿದೆವು.

■

ದೇವರು ವರವನು ಕೊಟ್ರೆ?...

# ಶ್ರೀ ಕೃಷ್ಣ ಪ್ರತ್ಯಕ್ಷ !

**●ಚಿತ್ರಾ ರಾಮಚಂದ್ರನ್**

" ತುಳಸಿ ! ತುಳಸೀ ! "

" ಏನು ಬೇಕಮ್ಮಾ ? " ಎನ್ನುತ ಓಡಿ ಬಂದಳು ತುಳಸಿ .

"ವಿದೇಶದಿಂದ ಗುರುಗಳು ಸಂದೇಶ ಕಳ್ಸಿದ್ದಾರೆ ನೋಡು ! " ದೇವಕಿಗೆ ಎಲ್ಲಿಲ್ಲದ ಸಂತೋಷ, ಸಂಭ್ರಮ !

ಆಧುನಿಕ ಅಧ್ಯಾತ್ಮ ಗುರುಗಳ ತೀವ್ರ ಶಿಷ್ಯೆಯಾದ ತನಗೆ ಗುರುಗಳಿಂದ ಸಂದೇಶ ಎಂದರೆ ಸಾಧಾರಣ ವಿಷಯವೇ ?

" ಸೆಪ್ಟೆಂಬರ್ 15ನೇ ತಾರೀಖಿನೊಳಗೆ ಅವರ ಶಿಷ್ಯರೆಲ್ಲರ ಮುಂದೆ ದೇವರು ಪ್ರತ್ಯಕ್ಷನಾಗಲಿದ್ದಾನಂತೆ! ಪ್ರತಿಯೋರ್ವ ಭಕ್ತನಿಗೂ ಮೂರು ಮೂರು ವರಗಳನ್ನು ದಯಪಾಲಿಸುವೆನೆಂದು ದೇವರೇ ಅವರಿಗೆ ಹೇಳಿದ್ನಂತೆ! ಶಿಷ್ಯ ವೃಂದದವರೆಲ್ಲ ಚೆನ್ನಾಗಿ ಯೋಚಿಸಿ ಒಳ್ಳೊಳ್ಳೆ ವರಗಳನ್ನ ಕೇಳಿ ಪಡ್ಕೊಳ್ಳಿ ಅಂದಿದ್ದಾರೆ ಗುರುಗಳು!"

"ದೇವರಂದ್ರೆ ನಿಮ್ಮ ಪ್ರೀತಿಯ ಕೃಷ್ಣನೇನಮ್ಮಾ?" ತುಳಸಿಗೆ ಕುತೂಹಲ.

"ಅವನೇ ಇರ್ಬೇಕು ಕಣೆ ! ನನ್ ಪೂಜೆಗೆ ಮೆಚ್ಚಿ ಜನ್ಮಾಷ್ಟಮಿಯಂದೇ ಅವನು ಬರ್ತಾನೋ ಏನೋ ? ಅಷ್ಟಲ್ಲಿ ಎಲ್ಲ ಏರ್ಪಾಟುಗಳನ್ನೂ ಸಾಂಗವಾಗಿ ಮಾಡ್ಕೋಬೇಕು !"

ಏನೇನು ವರಗಳನ್ನು ಕೇಳಬೇಕೆಂದು ಬೇಗ ತೀರ್ಮಾನಿಸಿಕೊಳ್ಳಬೇಕು! ಘೋರ ತಪಸ್ಸು ಮಾಡಿದ ಕುಂಭಕರ್ಣ, ಪ್ರತ್ಯಕ್ಷನಾದ ಬ್ರಹ್ಮ ದೇವನಲ್ಲಿ ಏನೋ ಕೇಳಲು ಹೋಗಿ, ಇನ್ನೇನನ್ನೋ ಕೇಳಿ ವರ್ಷದಲ್ಲಿ ಆರು ತಿಂಗಳ ನಿದ್ರಾವಸ್ಥೆಯ ವರವನ್ನ ಪಡೆದುಕೊಂಡಹಾಗೆ ಆಗಬಾರದು!

ಕುಚೇಲ ಒಂದು ಹಿಡಿ ಅವಲಕ್ಕಿ ಕೊಟ್ಟು ಒಂದು ಸುವರ್ಣ ನಗರಿಯನ್ನೇ ಪಡೆದುಕೊಂಡ! ಪ್ರತಿ ವರ್ಷ ಅದೆಷ್ಟು ವಿಧವಾದ ನೈವೇದ್ಯಗಳನ್ನು ತಾನು ಆತನಿಗೆ ಸಮರ್ಪಿಸಿಲ್ಲ? ಹಾಗಾಗಿ ಆತ ತನಗೆ ಭಾರಿ ವರಗಳನ್ನು ದಯೆಪಾಲಿಸುವುದರಲ್ಲಿ ಸಂಶಯವೇ ಇಲ್ಲ!

ಜನ್ಮಾಷ್ಟಮಿಯ ಹಿಂದಿನ ದಿನ – ತುಳಸಿಯ ಸಹಾಯದೊಂದಿಗೆ ವಿಧವಿಧವಾದ ಭಕ್ಷ್ಯಗಳನ್ನು ತನ್ನ ಕೈಯ್ಯಾರೆ ತಯಾರಿಸುತ್ತಿದ್ದ ದೇವಕಿಗೆ ವರಗಳ ಬೆಗ್ಗೆ ಯೋಚಿಸಿ ಯೋಚಿಸಿ ತಲೆ ಸಿಡಿಯುವಂತಿತ್ತು .

"ತುಳಸಿ! "

"ಏನು ಬೇಕಮ್ಮಾ? " ಎಂದಳು ಪಾಕವನ್ನು ಕೆದಕುತ್ತಿದ್ದ ತುಳಸಿ .

"ತುಂಬ ತಲೆ ನೋವು ಕಣೆ! ಒಂದು ಸ್ಟ್ರಾಂಗ್ ಕಾಫಿ ಮಾಡ್ಕೊಡ್ತಿಯಾ?" ಚಕ್ಕಲಿಯನ್ನು ಎಣ್ಣೆಗೆ ಬಿಡುತ್ತಲೇ ಕೇಳಿದಳು ದೇವಕಿ .

"ಆಯ್ತುಮ್ಮಾ !"

ಕಾಫಿ ಕುಡಿಯುತ್ತ "ಅಯ್ಯೋ ! "ಎಂದಳು ದೇವಕಿ .

"ಇನ್ನೇನು  ಬೇಕಮ್ಮ ? "

"ಗ್ಯಾಸ್ ತೀರಿಹೋಗೋ ಹಾಗಿದೆ ! ಆರ್ಡರ್ ಮಾಡಿರೋ ಸಿಲಿಂಡರ್ ಬೇಗಬಂದ್ರೆ ಚನ್ನ ! ಇನ್ನೂ ತುಂಬಾ ತಿಂಡಿಗಳು ಮಾಡೋದಿದ್ಯಲ್ಲಾ !" ಎಂದಳು ದೇವಕಿ.

ಮಾತು ಮುಗಿಸುವ ಹೊತ್ತಿಗೆ ಸಿಲಿಂಡರ್ ಗಡ ಗಡ ಉರುಳಿಸಿಕೊಂಡು ಹುಡುಗ  ಬಂದಾಗ ನೆಮ್ಮದಿಯಾಯಿತು .

ಊಟದ  ಸಮಯ ! ಇನ್ನೂ ಕೇಳ ಬೇಕಾದ ವರಗಳ ಚಿಂತೆಯಲ್ಲೇ ಇದ್ದ ದೇವಕಿ "ಅಯ್ಯೋ ! ಅಮ್ಮಾ !" ಎನ್ನುತ್ತಾ ದವಡೆ ಹಿಡಿದುಕೊಂಡಳು .

" ಏನಾಯಿತಮ್ಮಾ  ! " ಎನ್ನುತ್ತ ಓಡಿಬಂದಳು ತುಳಸಿ .

"  ಊಟದಲ್ಲಿ ಕಲ್ಲು ಕಣೆ ! ಹಲ್ಲು ಹೋಯಿತು ! "

" ಓ ದೇವ್ರೇ ! ಏನು ಬೇಕು ಹೇಳಿಯಮ್ಮಾ ! "

" ಸುಂಸುಮ್ನೆ ಏನು ಬೇಕಮ್ಮ ಅಂತ ಕೇಳ್ಕೊಂಡು ಇವಳೊಬ್ಬಳು  ! ನನಗೆ ಎಂತದ್ದೂ ಬೇಡ ಹೋಗೆ ! " ಉರಿದು ಬಿದ್ದಳು ದೇವಕಿ .

ಮಾರನೆಯ ದಿನ ಜನ್ಮಾಷ್ಟಮಿ ಆಚರಣೆ ಬಹಳ ಸಂಭ್ರಮದಿಂದ ನಡೆಯಿತು. ಆರತಿಗೆ ಬಂದವರೆಲ್ಲ ಹಿಂದಿರುಗಿದ್ದರೂ ಕೃಷ್ಣನ ಸುಳಿವೇ ಇಲ್ಲ !

ಕೃಷ್ಣ ! ನಿನ್ನ ಆಗಮನಕ್ಕಾಗಿ ಎಷ್ಟೆಲ್ಲಾ ತಯಾರಿ ನಡೆಸಿರುವೆ ! ಕೇಳಬೇಕಾದ ವರಗಳನ್ನ ಮನದಲ್ಲೇ ತೀರ್ಮಾನಿಸಿಕೊಂಡಿರುವೆ ! ಇನ್ನೂ ಏಕೆ ನೀ ಬಂದಿಲ್ಲ?'.

" ವತ್ಸೇ ! ಜನ್ಮಾಷ್ಟಮಿಯಂದು ನನಗೆ ತುಂಬಾ ಟೈಟ್ ಷೆಡ್ಯೂಲ್ ! ಆದ್ದರಿಂದ ನಿನ್ನೆಯೇ ನಾನು ನಿನಗೆ ವರಕೊಟ್ಟು ಹೋದೆನಲ್ಲಾ !"  ಅಶರೀರವಾಣಿ ಕೇಳಿ ದೇವಕಿಗೆ ಆಘಾತವಾಯಿತು !

"ಹಾ ! ನಾನು ನೋಡ್ಲೇ ಇಲ್ವಲ್ಲ  ಸ್ವಾಮಿ !"

"ನಿನ್ನ ದೃಷ್ಟಿಯನ್ನು ನಿನ್ನೊಳಗೆ ತಿರುಗಿಸಿ ನೋಡಿದ್ದರೆ ಅಲ್ಲೇ ನನ್ನನ್ನು ಕಾಣಬಹುದಿತ್ತು ! ಆದರೆ ನೀನು ನನ್ನನ್ನು ಹೊರಗಡೆಯೇ ಹುಡುಕುತ್ತಿದ್ದೆ ! ಹಾಗಿದ್ದೂ ತುಳಸಿಯಲ್ಲಿದ್ದ ನನ್ನನ್ನು ನೀನು ಗುರ್ತಿಸಲೇ ಇಲ್ಲ ! "

" ಆಹಾ ! ? "

" ಹೌದು ! ಮೂರು ಬಾರಿ ಏನು ಬೇಕು ಎಂದು ಕೇಳಿದೆ ! ಒಮ್ಮೆ ಕಾಫಿ  ! ಎರಡನೇ ಬಾರಿ ಗ್ಯಾಸ್ ಸಿಲಿಂಡರ್ ! ಮೂರನೇ ಬಾರಿ ಏನು ಬೇಕೆಂದಾಗ ನನಗೆ ಎಂತದ್ದೂ ಬೇಡ ಹೋಗು ಎಂದೇ ! ನಾನು  ಹೊರಟು ಹೋದೆ ! ಇವತ್ತು ತುಂಬಾ ಬ್ಯುಸಿ ಇದ್ದರೂ ನೀನು ನನ್ನ ಹಾರ್ಡ್ ಕೋರ್ ಭಕ್ತೆಯಾದ್ದರಿಂದ ನಿನ್ನೊಡನೆ ಇಷ್ಟು ಸಂವಹನ ನಡೆಸುವ ಹಾಗಾಯಿತು !

"ಬರಲೇ ! ?"

ಕಣ್ ಕಣ್ ಬಿಟ್ಟಳು ಪೆಚ್ಚಾದ ದೇವಕಿ ! ■

# ಮುಕ್ಕಿ ಬಿಡ್ತಾರೋ

●ಹೆಚ್. ಗೋಪಾಲಕೃಷ್ಣ

ಕೃಷ್ಣಾಷ್ಟಮಿ ಅಂದರೆ ಕೇಳ್ತೀರಾ...ಸುತ್ತಮುತ್ತಲಿನವರು, ನಂಟರು ಇಷ್ಟರು ತಂದು ಕೊಟ್ಟಿರುವ ತಿಂಡಿಗಳು.. ಚಕ್ಕಲಿ, ಕೋಡುಬಳೆ, ಮುಚ್ಚೋರೆ, ಚೌ ಚೌ, ಪುಳ್ಳಂಗಾಯಿ ಉಂಡೆ, ಪುರಿ ಉಂಡೆ, ಕಡ್ಲೆ ಬೀಜದ ಉಂಡೆ..... ಇವು ಒಂದು ಕಡೆ ಆದರೆ ಲಾಡು, ಜಿಲೇಬಿ, ಸೋಹನ್ ಪಪ್ಡಿ, ಮೈಸೂರು ಪಾಕು, ದೂದ್ ಪೇಡಾ.... ಇನ್ನೂ ಹೆಸರೇ ಗೊತ್ತಿಲ್ಲದ ಹಲವು ಸಿಹಿ ಖಾರಗಳು.

ಯಾವುದೂ ತಿನ್ನೋಕ್ಕೆ ಆಗದೇ ಇರೋ ಪರಿಸ್ಥಿತಿ ನನ್ನದು.

ದವಡೆ ಹಲ್ಲು ಸೇರಿದ ಹಾಗೆ ಬಾಯಲ್ಲಿನ ಇಪ್ಪತ್ತಾರು ಉದುರಿ ಮಿಕ್ಕ ಆರು ಎಲ್ಲೆಲ್ಲೋ ಚದುರಿವೆ, ಒಂದಕ್ಕೊಂದು ಸಿಮಿಟ್ರಿ ಇಲ್ಲ.

ಇದು ಚಕ್ಲಿ ಕೋಡುಬಳೆ ತಿನ್ನಲು ಆಗದೇ ಇರೋದು ಆದರೆ ಬಾಯಲ್ಲಿ ಹಾಕಿ ಕೊಂಡು ಕರಗಿಸಿ ನುಂಗ ಬಹುದಾದ ಲಾಡು, ಜಿಲೇಬಿ, ತಂಬಿಟ್ಟು...ಮುಂತಾದ ಸಿಹಿಗಳನ್ನು ಕನಸಲ್ಲೂ ನೆನೆಸಬಾರದ ಡಯಾಬಿಟಿಸು!

ನಮ್ಮನ್ನು ಹುಟ್ಟಿಸಿದ ದೇವರು, ದೇವರ ಮೇಲೆ ಕೋಪ ಬರಲು ಇದಕ್ಕಿಂತ ಒಳ್ಳೇ ಕಾರಣ ಬೇಕೇ?

ಇಷ್ಟು ದಿವಸ ನೀನು ನನ್ನ ನೆನೆಸಿ ಕೊಳ್ಳಲಿಲ್ಲ, ಈಗ ನೆನೆಸಿ ಕೊಂಡೆ. ವರಕೇಳು ಕೊಡ್ತೀನಿ ಅನ್ನಬೇಕೇ ದೇವರು? ಖುಷಿ ಆಯ್ತು.

ದೇವರೇ ಬದುಕಿರುವ ವರೆಗೆ ಯಾರಿಗೂ ಹಲ್ಲು ಬೀಳ ಬಾರದು. ಅಕಸ್ಮಾತ್ ಬಿದ್ದರೂ ಮತ್ತೆ ಒಂದೇ ದಿವಸದಲ್ಲಿ ಹುಟ್ಟಿ ಬಿಡಬೇಕು.

ದೇವರು ಎಸ್ ಅಂದಿತು. ನೆಕ್ಸ್ಟ್?

ದೇವರೇ ಕಣ್ಣು ಕಿವಿ ಕೈಕಾಲು ಎಲ್ಲಾ ಜತೆ ಜತೆ ಕೊಟ್ಟೆ ಅದೇರೀತಿ ಹೊಟ್ಟೆ, ತಲೆ, ಕಿಡ್ನಿ, ಮೆದುಳು ಇವೆಲ್ಲಾ ಎರಡೆರಡು ಇರಲಿ, ಒಂದು ಪೂರ್ತಿ ನಿಷ್ಕ್ರಿಯ ಆದನಂತರ ಎರಡನೆಯದು ಆಕ್ಟಿವ್ ಆಗಬೇಕು. ಯಾಕೆ ಅಂದರೆ ಡಯಾಬಿಟಿಸ್ ಕೊಟ್ಟೆ, ಆದರೆ ನೀನೇ ಸೃಷ್ಟಿ ಮಾಡಿರೋ ನಿನ್ನದೇ ಪ್ರಸಾದ ತಿನ್ನಲು ಆಗದೇ ಇದ್ದರೆ ಹೇಗೆ? ಹಾಗೇ ಹೊಟ್ಟೆ ಕೊಟ್ಟೆ, ಅದಕ್ಕೆ ಏನಾದರೂ ಆದರೆ ಇನ್ನೊಂದು ಬೇಕು ತಾನೇ? ಕಿಡ್ನಿ ಕೊಟ್ಟಿದ್ದಿ ಆದರೆ ಅದೋ ತುಂಬಾ ಬೇಗ ಕೆಟ್ಟು ಹೋಗುತ್ತೆ.....

ಇನ್ನ ಮೆದುಳು ದೇವರೇ, ಅದರ ಪೂರ್ತಿ ಉಪಯೋಗಿಸುವ ಮೊದಲೇ ಮರವು ಅಮರುತ್ತೆ..

ಹಾಗೇ ಮಿಕ್ಕ ಅಂಗಗಳೂ ಅಲ್ವೇ... ಅದಕ್ಕೆ ಎಲ್ಲವೂ ಸ್ಪೇರ್ ಇರಲಿ ಸರ್...

ದೇವರು ಎಸ್ ಅಂದಿತು. ನೆಕ್ಸ್ಟ್...?

ದೇವರೇ ಯಾರಿಗೂ ಕಾಹಿಲೆ ಕಸಾಲೆ ಬರಬಾರದು.. ನೂರು ವರುಷ ಅವರಿಗೆ ಬೇಕಾದ್ದು ತಿಂದು ಉಂಡು ಸುಖವಾಗಿರಬೇಕು....

ದೇವರು ಮಧ್ಯೆ ಬಾಯಿ ಹಾಕಿದರು.

ಅಯ್ಯೋ ಮನುಜಾ, ಅಷ್ಟೊಂದು ಡೊನೇಷನ್ ಕೊಟ್ಟು ಓದಿರೋ ಡಾಕ್ಟರು ನನ್ನ ಹುರಿದು ಮುಕ್ತಾರೆ ಇಂಥಹ ವರ ಕೊಟ್ರೆ ಅಂತ ನಿಂತ ನಿಲುವಿನಲ್ಲಿ ಮಾಯ ಆಗಿ ಬಿಡೋದೇ.... ದೇವರು ಮತ್ತೆ ಬಂದು ವರ ಕೊಡ್ತೀನಿ ವತ್ಸ ಅಂದರೆ ಬೇರೆ ಆತ ಕೊಡಬಹುದಾದ ವರ ಮಾತ್ರ ಕೇಳೋದು....

■

# ಮೂರು ವರಗಳು; ನನ್ನ ಬೇಡಿಕೆ

●ಶ್ಯಾಮಲಾ ಸತ್ಯ

ದೇವರೇ!!! ಮೂರು ವರಗಳನ್ನು ಕೊಡುತ್ತೀಯ ಅಂತ ಗೊತ್ತಾಯಿತು. ನನಗೆ ಧನ, ಕನಕ, ವಸ್ತು, ವಾಹನಾದಿಗಳು ಬೇಡವೇ ಬೇಡ;

ನನ್ನ ಬೇಡಿಕೆ ಏನಪ್ಪಾ ಅಂದರೆ:

1. ಅನಾದಿ ಕಾಲದಿಂದಲೂ ಅತ್ತೆ ಸೊಸೆ ಜಗಳ ಜನಜನಿತ. ಮಾವ ಯಾವತ್ತೂ ಸೊಸೆಯ ಕಣ್ಣುಗಳಲ್ಲಿ ಒಳ್ಳೇ ವ್ಯಕ್ತಿಯೇ! ದೇವರೇ, ನಾನು ನಿನ್ನಲ್ಲಿ ಕೇಳುವುದು ಇಷ್ಟೆ. ಅತ್ತೆ ಸೊಸೆ ಜಗಳದ ಬದಲು ಪ್ರಪಂಚದಲ್ಲಿ ಮಾವ –ಸೊಸೆ ಜಗಳಗಳು ಹುಟ್ಟಿಕೊಳ್ಳಲಿ. ಇನ್ನು

ಮೇಲೆ ಅತ್ತೆ ( ನಮ್ಮಂತಹ ಅನೇಕರು) ಸಹೃದಯಿ ಆಗಿ ಪ್ರೀತಿ ವಾತ್ಸಲ್ಯವಿರುವ ಹೆಂಗಸಾಗಲಿ. ಅವಳ ಮೇಲಿನ ಅಪವಾದಗಳು ಇಂದೇ ಕಣ್ಮರೆಯಾಗಲಿ. ಮಾವನ ದುಷ್ಟತನವು ಹೊರಬರಲಿ.

2. ಬೆಳಿಗ್ಗೆ ವಾಕಿಂಗ್ ಮುಗಿಸಿ ಮನೆಗೆ ಬಂದರೆ, ನಾಯಿಗಳನ್ನು ಸಾಕಿರುವವರು ನಮ್ಮಂತಹ ಮನೆಯವರ ಮುಂದೆಯೇ ನಾಯಿಗಳಿಂದ ಮಲಮೂತ್ರ ವಿಸರ್ಜನೆ ಮಾಡಿಸಿರುತ್ತಾರೆ.ಇದನ್ನು ಸ್ವಚ್ಚಗೊಳಿಸುವುದು ಮಹಾ ಕಷ್ಟ. ಇದಕ್ಕೆ ನಾನು ಪರಿಹಾರ ಕೇಳುವುದು ಇಷ್ಟೇ. ಈ 'ಪೆಟ್' ನಾಯಿಗಳುತಮ್ಮ ವಿಸರ್ಜನೆಗಳನ್ನು ತಮ್ಮ ಓನರ್ ಗಳ ಮನೆಗಳ ವರಾಂಡದಲ್ಲೇ ಕಡ್ಡಾಯವಾಗಿ ಮಾಡಲಿ ಎಂದು ನನಗೆ ವರ ಕೊಡು.

3. ನಮ್ಮಂತಹ ವಯಸ್ಸಾದ ನಾಗರೀಕರು ರಸ್ತೆಯಲ್ಲಿ ನಡೆಯಬೇಕಾದಾಗಲೆಲ್ಲಾ, ತಲೆ ಬಗ್ಗಿಸಿಕೊಂಡು, ರಸ್ತೆಯಲ್ಲಿನ ಹಳ್ಳ ಕೊಳ್ಳ ಗಳ ಮೇಲೆಯೇ ಗಮನಕೊಡುತ್ತಾ, ಹೆದರಿಕೆಯಿಂದ ನಡೆಯುತ್ತೀವಿ. ಏನಾದರೂ ಬಿದ್ದರೆ, ನಮ್ಮ ಗತಿಯೇ ಮುಗಿಯುತ್ತದೆ. ಅಷ್ಟೇ ಅಲ್ಲ, ಬಗ್ಗಿ ಬಗ್ಗಿ ನಮಗೆ ಗೂನು ಬೆನ್ನು ಆಗುತ್ತಿದೆ. ಬಿ.ಬಿ.ಎಂ.ಪಿ ಗೆ ಬುದ್ದಿ ಕೊಟ್ಟು ನಮ್ಮ ಮಹಾನಗರದ ಪಾದಚಾರಿ ಮಾರ್ಗಗಳ ಹಾಗೂ ರಸ್ತೆಗಳ ಪಾಟ್ ಹೋಲ್ಸ್ ಗಳನ್ನು ಸರಿಯಾಗಿ ಮುಚ್ಚಿಸಪ್ಪ ( ಮಂತ್ರಿಗಳ ಮನೆ ಮುಂದೆ ಮಾಡುತ್ತಾರಲ್ಲ, ಹಾಗೆ). ತಲೆ ಎತ್ತಿಕೊಂಡು ನೆಟ್ಟಗೆ ಧೈರ್ಯದಿಂದ ನಡೆಯುವ ವರವನ್ನು ಕೊಡು.

■

---

**"ಅತಿ ಚಿಕ್ಕ ಹಾಸ್ಯ ಕತೆ"**

ಗಂಡನ ಊಟದ ತಟ್ಟೆಯಲ್ಲಿ ಒಂದು ಕೂದಲು ಸಿಕ್ಕಿತು.

ಹೆಂಡತಿ ಅದನ್ನು ನೋಡಿ – ಓಹ್, ಸಂಬಂಧ ಗಟ್ಟಿಯಾಗುತ್ತೆ ಅಂದಳು.

ಇದನ್ನು ಗಮನಿಸುತ್ತಿದ್ದ ಅಡಿಗೆಯಾಕೆ ಮಾಲೀಕರತ್ತ ನೋಡಿ ನಸುನಕ್ಕಳು.

**ಎ. ವಿಜಯೇಂದ್ರ ರಾವ್**

# ಗಾಯಬ್ ಆದ ಭಗವಂತ

●ಆನಂದ

ದೇವರು ಪ್ರತ್ಯಕ್ಷನಾದ ಅಂತ ಇಟ್ಕೊಳ್ಳಿ..

ಇಟ್ಕೊಳ್ಳೋದೇನು ಬಂತು. ಆಗೇ ಬಿಟ್ಟ. ಥೇಟ್ ತೆಲುಗು ಸಿನಿಮಾದಲ್ಲಿ ಆಗುತ್ತಿದ್ದಂತೆ. ಈಗೀಗ ಆಗುತ್ತಿಲ್ಲ. ಏಕೆಂದರೆ ಆ ತರಹ ಸಿನಿಮಾ ಬರ್ತಾನೇ ಇಲ್ಲ.

'ಕಮಾನ್ ಬಿ ಕ್ವಿಕ್..' ಅಂತ ಗಡಿಬಿಡಿ ಮಾಡತೊಡಗಿದ. ಒಟ್ಟಿಗೇ 4–5 ಸಭೆಗಳಿಗೆ ಒಪ್ಪಿಕೊಂಡು ಒಂದು ಮುಗಿಸಿ ಇನ್ನೊಂದಕ್ಕೆ ಧಾವಿಸಲು ತರಾತುರಿ ಮಾಡುವ ಜ(ಧ)ನಪ್ರಿಯ ಮಂತ್ರಿಗಳಂತೆ.

'ಕೂಲ್ ಕೂಲ್ ಭಗವಂತಾ..' ಅಂದೆ.

'ನೊ.. ನೊ.. ಸುಮಾರು ಜನ ಕಾಯ್ತಾ ಇದಾರೆ ನನಗೋಸ್ಕರ. ನೀನೊಬ್ಬನೇ ಅಲ್ಲ. ಸೊ ಬಿ ಕ್ವಿಕ್' ಎಂದ ಮತ್ತೊಮ್ಮೆ.

'ಸರಿ ಈಗ ನಾನೇನು ಮಾಡಬೇಕು ಹೇಳು' ಎಂದು ಭಗವಂತನನ್ನೇ ಕೇಳಿದೆ.

'ವಾಟ್ ಯು ಆರ್ ನಾಟ್ ಪ್ರಿಪೇರ್ಡ್?' ಎಂದು ಅಸಮಾಧಾನ ಸೂಚಿಸಿದ.

ಇದೇನು ಸಿಇಟಿ, ಕಾ–ಮೆಡ್, ನೀಟ್ ಪರೀಕ್ಷೆಯೇ ಪ್ರಿಪೇರ್ ಆಗಿರೋದಿಕ್ಕೆ?

'ಈಗ ನೀನು ಮೂರು ಪ್ರಶ್ನೆಗಳನ್ನು ಕೇಳಬಹುದು' ಎಂದ.

ಅರೆ! ಮೂರು ವರ ಕೇಳು ಎಂದು ಹೇಳೋ ಬದಲು ಮೂರು ಪ್ರಶ್ನೆ ಕೇಳಬಹುದು ಅಂತಿದಾನಲ್ಲ ಎಂದು ಗೊಂದಲದಲ್ಲಿ ಬಿದ್ದೆ.

'ಎನಿ ತ್ರೀ?' ಎಂದು ಕೇಳಿದೆ. ಕ್ಲಾರಿಫಿಕೇಷನ್‌ಗಾಗಿ.

'ಹೌದು ಈಗ ಎರಡು ಪ್ರಶ್ನೆ ಮಾತ್ರ ಉಳೀತು' ಎಂದಾಗ ನನಗೆ '!!'

'ನಾನು ಕೇಳಿದ್ದು ನಡೆಸಿಕೊಡ್ತೀಯಾ? ಎಂದೆ.

'ಲೆಟ್ ಮಿ ಸೀ. ಲಾಸ್ಟ್ ಕ್ವೆಶ್ಚನ್ ಪ್ಲೀಸ್' ಎನ್ನೋದೆ.

'ಪ್ರಾಮಾಣಿಕ ರಾಜಕಾರಿಣಿಗಳನ್ನು ನೀನೇಕೆ ಸೃಷ್ಟಿಸಿಲ್ಲ?' ಎಂದೆ.

ಅರೇ! ಭಗವಂತ ಗಾಯಬ್.

ಪ್ರಶ್ನೆ ಪ್ರಶ್ನೆ ಆಗೇ ಉಳಿತು. ರಾಜಕಾರಣದಲ್ಲಿ ಅಪ್ರಮಾಣಿಕತೆ ಉಳಿದಿರುವಂತೆ.

■

# ಮೂರು ವರಗಳು; ನನ್ನ ಬೇಡಿಕೆ

**●ವಸುಧ ಸುಬ್ರಮಣ್ಯ**

ಝುಗ್ಗೆಂದು  ಬೆಳಕೊಂದು ಕೋರೈಸಿದಾಗ ಬೆಚ್ಚಿ, ಕಣ್ಣುಜ್ಜಿ ನೋಡಿದೆ. ಏನಾಶ್ಚರ್ಯ !!! ಶಂಖ, ಚಕ್ರ, ಗದಾಧರ  ಮಹಾ ವಿಷ್ಣು ನಗುತ್ತಾ ನಿಂತಿದ್ದಾನೆ!. ನಗುನಗುತ್ತಲೇ ಕೇಳಿದ " ಮಗಳೇ, ನಿನಗೆ ಬೇಕಾದ ಯಾವುದಾದರೂ ಮೂರು ವರಗಳನ್ನು ಬೇಡಿಕೋ ಪ್ರಸಾದಿಸುತ್ತೇನೆ " ಎಂದಾಗ ನನ್ನ ಕಿವಿಗಳನ್ನು ನಾನೇ ನಂಬದಾದೆ. ಆದರೂ ಧೈರ್ಯ ಮಾಡಿ ಕೇಳಿದೆ "ದೇವಾ ಈ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಅವುಗಳು ಉಗುಳುವ ಹೊಗೆಯಿಂದ ಜನರು ನಾನಾ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಹಾಗಾಗಿ ದೇವಾ ವಾಹನಗಳು ಪೆಟ್ರೋಲ್, ಡೀಸಲ್ ಬದಲಾಗಿ ನೀರಿನಿಂದಲೇ ಸಂಚರಿಸುವಂತೆ ಮಾಡಿಬಿಡು "ಕ್ಷಣವೂ ತಡಮಾಡದೆ "ತಥಾಸ್ತು" ಎಂದ ದೇವಾ.

ಇದರಿಂದ ಮತ್ತಷ್ಟು ಧೈರ್ಯಗೊಂಡು ಮತ್ತೊಂದು ವರ ಕೇಳಿದೆ, "ಜಗದ್ರಕ್ಷಕಾ, ಇತ್ತಿತ್ತಲಾಗಿ ಅರಣ್ಯ ನಾಶ ಬಹಳವಾಗಿ ಪರಿಸರ ಕೆಡುತ್ತಿದೆ, ಇದನ್ನು ತಡೆಗಟ್ಟಲು ಒಂದು ಮರ ಕಡಿದಾಗ ಕೂಡಲೇ ಆ ಜಾಗದಲ್ಲೇ ನೂರು ಮರಗಳು (ರಕ್ತಬೀಜಾಸುರನಂತೆ ) ಸ್ವಯಂ ಉದ್ಭವ ಆಗುವಂತೆ ಮಾಡು ಸ್ವಾಮಿ. ಹಿಂದು ಮುಂದು ನೋಡದೆ ದೈವವಾಣಿ  ಕೇಳಿಸಿತು "ತಥಾಸ್ತು " .

ಮೂರನೇ  ವರ ಕೇಳುವ ಮೊದಲು ಬಹಳ ಯೋಚಿಸಿದೆ, ಏನಾದರೊಂದು ಮಹತ್ವವಾದುದ್ದನು  ಪಡೆಯಬೇಕೆಂದುಕೊಂಡು.  "ಜಗತ್ಪಾಲಕಾ, ಸ್ವಾಮಿ, ಈ ತಕ್ಷಣದಿಂದಲೇ ಎಲ್ಲಾ ರಾಜಕಾರಣಿಗಳಿಗೂ ಅವರ ಅಧಿಕಾರದಾಹ, ಹಣದಾಹ ಇಂಗಿಸಿಬಿಟ್ಟು ಅವರೆಲ್ಲಾ ಸದಾ ಪ್ರಾಮಾಣಿಕವಾಗಿ ದೇಶಸೇವೆ, ಜನಸೇವೆಯಲ್ಲಿ ತೊಡಗುವಂತೆ ಮಾಡು." ಎಂದು  ಕೈ ಮುಗಿದು ಬೇಡಿಕೊಂಡೆ. ಏಕೋ ಈಗ ಸ್ವಲ್ಪ ಪೆಚ್ಚಾಗಿ ತಡವರಿಸುತ್ತ  ನುಡಿದ ಆ ಸರ್ವಶಕ್ತ " ಪುತ್ರಿ, ಈ ಕಲಿಗಾಲದಲ್ಲಿ ಇದೊಂದು ಮಾತ್ರ ನನ್ನಿಂದಲೂ  ಅಸಾಧ್ಯವಾಗಿದೆ, ಆದರೆ ಇದಕ್ಕೆ ಬದಲಾಗಿ ನಾನೇ ನಿನಗೆ ಎರಡು ವರಕೊಡುತ್ತೇನೆ ಮಗಳೇ, ನಿನ್ನ ಮನೆಯಲ್ಲಿ ಅರೋಗ್ಯ, ನೆಮ್ಮದಿ ನೆಲೆಸಿರಲಿ" ಎಂದವನೇ ಕಣ್ಮರೆಯಾಗಿಬಿಟ್ಟ.

"ಇರು ದೇವಾ, ಸ್ವಲ್ಪ ಇರು" ಎನ್ನುತ್ತಾ ಕೈ ಚಾಚಿ, ಮುಂದೆ ಬಾಗಿದೆ, ಅಷ್ಟೇ ಕನಸೊಡೆಯಿತು, ಬೆಳಗಾಗಿತ್ತು.

■

# ಮಾಧ್ಯಮಾವತಾರ

**●ಸಂಕೇತ ಅಶೋಕ ಪೂಜಾರ**

"ಇದೇನಪ್ಪಾ ಶೀರ್ಷಿಕೇನ ಅರ್ಥವಾಗ್ವಲ್ಲು" ಅಂತಿರೇನು ಮತ್ತ?? ನಾನ ಶ್ಯಾಣ್ಯಾ ಇದನ್ನ ವಿಚಾರ ಮಾಡ್ಲಿಕ್ಕೆ ಹತ್ತು ನಿಮಿಷ ಮ್ಯಾಲ್ ತೊಗೊಂಡಾಗ, ನಿಮಗ್ ನೋಡಿದ್ ಕೂಡ್ಲೆ ಅರ್ಥಾಗ್ಲಿ ಅಂದರ ಹೆಂಗ? ನನ್ನ ಈ ಶ್ಯಾಣ್ಯಾತನ ಎದಕ ಬಂದ್ಹಂಗ ಆತು? ಇನ್ನ, ಯಾರಿಗಾದ್ರೂ ಇದೇನು ಅಂತ ಥಟ್ ಅಂತ ಹೊಳದಿದ್ರ, ನೀವ್ ನೀವ ನಿಮ್ಮ ನಿಮ್ಮ ಪುಸ್ತಕಾನ್ನ ನಾ (ಅಂದ್ರ ನಾನಲ್ರ್ಯಾ ಮತ್ತ) ನಾ. ಸೋಮೇಶ್ವರ್ ಹತ್ರ ಕೇಳಿ ಇಸ್ಕೊಳ್ರಿ.

ಇವ ಶೀರ್ಷಿಕೆ ಮ್ಯಾಲೇ ಇಷ್ಟ ಪೀಠಿಕೆ ಹಾಕ್ತಾನ ಅಂದ್ರ ಹೇಳಾವರ ಏನಿದ್ದಾನ ಅಂತ ಅನಿಶಿರ್ಬೋದು, ಈಗ ಬಂದೆ ನೋಡ್ರಿ.

ಇದಕ್ಕ ಎರಡು ಅರ್ಥ ಕೊಡಬಹುದು. ಮಾಧ್ಯಮದವ್ರು ಯಾವ್ ಯಾವಾಗ ಯಾವ್ ಯಾವ್ ಸಂದರ್ಭದಾಗ ಎಂಥಾ ಅವತಾರ ತೊಗೋತಾರ ಅಂತ ತಿಳಸೋ ಅಂಥ ಅಂಶ ಒಂದಾದ್ರ, ಒಂದು ಹೆಜ್ಜಿ ಮುಂದಿಟ್ಟು, ಅಷ್ಟ ಅಲ್ಲ, ಒಂದು ಪೂಜಿ ನಡುವಿಟ್ಟು ಮಾಧ್ಯಮದವರು ಮಾಡೋ ಆವಾಂತರಗಳು ಎಂಥಾವು ಅಂತ ತಿಳಿಸೋ ಅಂಶ ಇನ್ನೊಂದು. ಈಗ ಸ್ವಲ್ಪ ಕ್ಲಿಯರ್ ಆತಲ್ಲಾ? ನನಗೀಗ ಇದನ್ನ ಬರೀಲಿಕ್ಕೆ ಪ್ರೇರಣೆ ಏನು ಅಂದ್ರೇನು? ನಾ ಮೊನ್ನೆ ಮೊನ್ನೆ ಟಿವಿ ಹಚ್ಚಿದಾಗ, ಮಾಧ್ಯಮ ವಾಹಿನಿಯೊಂದ್ರೊಳಗ ಒಂದು ಅದ್ಭುತ ಕಾರ್ಯಕ್ರಮ ನೋಡಿದೆ. ಆ ಕಾರ್ಯಕ್ರಮನ ಈಗ ನನ್ನ ಹತ್ರ ಇದನ್ನ ಬರಸ್ಲಿಕ್ಕೆ ಹಚ್ಯದ.

ಅಂದ್ಹಂಗ ಇದೊಂದು ವಿಷಯ ನಾ ಹೇಳಬೇಕು. ಈ ಕೊರೋನಾ ತಂದ ವರ್ಕ್ ಫ್ರಾಮ್ ಹೋಮ್ ಭಾಗ್ಯದ ಫಲಾನುಭವಿಗಳಾದ ಹಲವಾರು ಸಂತುಷ್ಟ/ ನತದೃಷ್ಟ ಮಂದಿಯೊಳಗ ನಾನೂ ಒಬ್ಬವ. ನತದೃಷ್ಟ ಯಾಕ ಅನ್ನೋದನ್ನ ನಾ ಇಲ್ಲೇ ಹೇಳ್ಲಿಕ್ಕೆ ಹೋಗುದಿಲ್ಲ ನೀವ್ ನೀವ ಏನೇನಿರ್ಬೋದು ಅಂತ ಅಂದಾಜು ಹಾಕ್ಕೋರಿ. ಸಂತುಷ್ಟ ಯಾಕ್ಪಾ ಅನ್ನೋದರ ಒಂದೆರಡು ಕಾರಣ ಹೇಳ್ತೀನಿ ಟ್ರ್ಯಾವಲ್ ಟೈಮ್, ಟ್ರಾಫಿಕ್, ಏರ್ ಪೊಲ್ಯೂಷನ್, ಫ್ರಸ್ಟ್ರೇಶನ್, ಇವನ್ನೆಲ್ಲಾ ಬಿಟ್ಟು ಒಂದಿಷ್ಟು ಕಾರಣವ.

ನಮ್ಮ ಜನರೇಶನ್‌ಗೆ ನಾ ಕಂಡ್ಹಂಗ ನಿದ್ದಿ ಎಷ್ಟು ಮಾಡಿದ್ರೂ ಸಾಲಂಗಿಲ್ಲ. ಅಂಥಾದ್ರಾಗ ಈ ಕೊರೋನಾ ವರ್ಕ್ ಫ್ರಾಮ್ ಹೋಮ್ ಭಾಗ್ಯ ನಮಗ, ಅಗದೀ ಇನ್ನೇನ ಕಾಲ್ ಶುರು ಆಗ್ಲಿಕ್ ಹತ್ತು ನಿಮಿಷದ ಅಂದಾಗ ಏಳ್ಲಿಕ್ ಅವಕಾಶ ಮಾಡಿಕೊಟ್ಟದ. ಅದೂ ಸ್ವಲ್ಪ ಸ್ವಚ್ಛ ಇರೋ ಮಂದಿಗೆ. ಮಾರಿ ತೊಳಕೊಂಡು, ಹಲ್ ತಿಕ್ಕೊಂಡು ಕೂಡವ್ರಿಗೆ. ಇನ್ನ ಕ್ಯಾಮಾರೀಲೇನೂ ಕೂಡವ್ರು ಇದ್ದಾರ್ ಬಿಡ್ರಿ, ಇರಲಿ.

ಇನ್ನೊಂದು ಅಂದ್ರ ನಮ್ಹಂಗ ಅಪ್ಪ ಅವ್ವನ ಜೊತೆ ಇರೋರಿಗೆ ಇದೊಂದು ಸುವರ್ಣ ಯುಗ ಅಂದ್ರೂ ತಪ್ಪಿಲ್ಲ. ಎಲ್ಲಿ ಸಿಗಬೇಕ್ರಿ ಇಂಥ ಅವಕಾಶ? ನಾವು ಆಫೀಸ್‌ಗೆ ಹೋಗೋ ದಿನದಾಗ, ಪಾಪ ನಮಗ ಯಾವಾಗರ ಆಗ್ಲಿ ಕಾಲ್ ಮಾಡಿ,

"ಊಟ ಮಾಡಿಯಿಲ್ಲೋ" ಅಂತ ಕೇಳ್ಲಿಕ್ಕೂ ಹಿಂದ ಮುಂದ ನೋಡ್ತಿದ್ರು. ಎಲ್ಲೆ ಮಗನಿಗೆ ಡಿಸ್ಟರ್ಬ್ ಮಾಡ್ತೀನೋ ಅನ್ಕೊಂಡು. ನಾವೂ ಹಂಗ ನಾಚಿಗ್ಗೆಟ್ಟ ಇರ್ತಿದ್ವಿ ಬಿಡ್ರೀ. ಯಾವಾಗರ ಒಮ್ಮೊಮ್ಮೆ ನೆನಪು ಮಾಡ್ಕೊಂಡು ಕಾಲ್ ಮಾಡ್ತಿದ್ವಿ. ಮತ್ತ ಮುಂದಿನ ಮಾತು ನಾವು ಮನೀಗೆ ಬಂದ ಮ್ಯಾಲೇನ. ಅದೂ ಆ ಆಫೀಸ್ ಕಿರಿ ಕಿರಿ ಹೊತಗೊಂಡ ಬರ್ತಿದ್ವಿ. ಎಲ್ಯರ ಹೋದಲ್ಲೆ ಏನರ ಚಿಪ್ಸು, ಚಾಕಲೇಟು, ತಿಂದ್ರ ಮನೀತನ ಆ ಹಾಳೀನ ಕಿಶೇದಾಗ ಇಟಗೊಂಡು ಬಂದು ಒಗೀತಿದ್ವಲ್ಲ, ಹಂಗ ಆಫೀಸ್‌ದು ಎಲ್ಲಾ ಕಿರಿ ಕಿರಿ ಮನೀ ತನಕ ತರೋಧ. ಇದು ಸರೀನೋ ತಪ್ಪೋ ಗೊತ್ತಿಲ್ಲ. ಆದ್ರ ಹಂಗಿದ್ರಷ್ಟ ಖರೇನೂ ಮನಿ ನಂದಪಾ ಇದು ಅನಸ್ತದ.

ಈಗ ನಾವು ಕೆಲಸದ ನಡುವ ಪುಟ್ಟ ಪುಟ್ಟ 2 – 3 ನಿಮಿಷದ ವಿರಾಮ ತೊಗೊಂಡು ಹೊರಗ ಬಂದು ಅಪ್ಪ ಅವ್ವನ್ನ ನೋಡಿ, ಅವರ ಜೊತೆ ಒಂದೆರಡು ಚಾಷ್ಟಿ ಮಾತಾಡಿ ಮತ್ತ ಒಳಗ ನಡದ್ರ ಏನೋ ಒಂದು ಸಂತೃಪ್ತಿ. ನಮ್ಮಪ್ಪಾರಂತೂ "ಏನಪ್ಪಾ, ಎಷ್ಟು ನಿಮಿಷದ್ ಬ್ರೇಕ್" ಅಂತ ಕೇಳ್ತಾರ. "ಒಂದು ಹತ್ತು ನಿಮಿಷಣ್ಣಾ" ಅಂದ್ರ ಸಾಕು "ಕೊಡು ನಿಮ್ಮಮ್ಮ ಚಹಾನೋ ಕಾಫೀನೋ ಕಾಡೇನೋ(ಥ್ಯಾಂಕ್ಸ್ ಟು ಕೊರೋನಾ) ಮಾಡ್ತಾಳ. ಕುಡುದು ಹೋಗುವಂತಿ." ಅಂತಾರ. ಅಷ್ಟರೊಳಗ ಲಘು ಹರಟಿ, ಒಂದಿಷ್ಟು ನಕಲಿ ಸಿನಿಮಾ ಡೈಲಾಗ್ ನೆನಪಿಸ್ಕೊಂಡು ನಕ್ಕೋತ ಚಹಾ/ಕಾಫೀ/ಕಾಡೇ ಕುಡುದು ಹೋಗೋದು. ಇಷ್ಟಾದ್ ಮ್ಯಾಲೆ ಲ್ಯಾಪ್ಟಾಪ್ ಮುಂದ ಕೂತು ನಮ್ಮ ಸಹೋದ್ಯೋಗಿಗಳಿಗೆ ಕಾಲ್ ಮಾಡ್ದಾಗ ಈ ಉಲ್ಲಾಸ ತಟ್ಟಲಾರದಿರ್ತದೇನು? ಅವರ ಜೊತೀನೂ ಒಂದಿಷ್ಟು ನಕ್ಕು ಮುಂದಿನ ಕೆಲಸದ್ ಮಾತು. ಇನ್ನೊಂದು ವಿಷಯ ತಿಳ್ಕೋರಿ. ನೀವು ಮನ್ಯಾಗಿದ್ದು ನಿಮ್ಮವ್ವ ನಿಮಗ ದಿನಾ ಮಧ್ಯಾಹ್ನ ಊಟಕ್ ಬಡಸ್ಲಿಕ್ಹತ್ತಾರ ಅಂತಿದ್ರ, ಒಂದು ಕ್ಷಣ, ಈಗ ಜೀವನದಾಗ ಒಂದು ಸಣ್ಣ ವಿರಾಮ ತೊಗೊಂಡು, ಆ ಭಗವಂತಗ ಮನಸ್ಸಿಂದ ನಮನ ಮಾಡ್ರಿ. ಅತೀ ಪುಣ್ಯ ಮಾಡಿದವರಿಗೆ ಮಾತ್ರ ಇಂಥ ಭಾಗ್ಯ. ಇರಲಿ, ಭಾಳ ಭಾವುಕ ಆಗೋದ್ ಬ್ಯಾಡ. ಆಮೇಲೆ "ಇದರೊಳಗೆಲ್ಲ 'ಮಾಧ್ಯಮಾವತಾರ' ಎಲ್ಲೆ ಬಂತು?" ಅಂತ ಪ್ರಶ್ನೆ ಮಾಡೋದ್ರೊಳಗ ನಾ ಅಲ್ಲೇ ಹೊಂಟೆ.

ಹಿಂಗ ಒಮ್ಮೆ ಚಹಾ ಕುಡಕೋತ ಟಿವಿ ನೋಡುವಾಗ ಈ ಕಾರ್ಯಕ್ರಮ ಬಂತು. ಆಗಿಷ್ಟ ಬಸವರಾಜ ಬೊಮ್ಮಾಯಿಯವರು ಪ್ರಮಾಣ ವಚನ ಸ್ವೀಕಾರ ಮಾಡಿದ್ರು. ಹಂಗಾಗಿ "ರಾಜಕೀಯ ಚಲನವಲನಗಳಿಗೆಲ್ಲಾ, ಮುಂದಿನ ಸಿಎಂ ಯಾರಾಗ್ತಾರ ಅನ್ನೂ ತಳಮಳಕ್ಕೆಲ್ಲಾ" ತೆರೆ ಬಿದ್ದಾಗಿತ್ತು. ನಾ ನೋಡಿದ ಹಂಗ ನಮ್ಮ ಮಾಧ್ಯಮ ಮಿತ್ರರಿಗೆ ಗೊಂದಲಗಳೇಳುವುದು ಹೆಚ್ಚು ಸೇರ್ತದ. ಇವರಿಗೆ ಫೈನಲ್ ಡಿಸಿಷನ್ ತಡ ಆದಷ್ಟೂ ಛಲೋ ಅಂತನಸ್ತದ. 'ಅವ ದಿಲ್ಲಿಗೆ ಓಡಿದ', 'ದಿಲ್ಲಿಯವರು ಇಲ್ಲೇ ಬಂದ್ರು', 'ಇವ ಅವ್ರ ಮನೆಗೆ ಹೋಗಿದ್ದ', 'ಆಥ ಈ ಗುಡಿಗೆ ಬಂದ', 'ಇವ ಆ ಸಭೆಗೆ ಗೈರು ಆಗಿದ್ದ' ಆವ ಇದಕ್ಕ ಪ್ರತ್ಯುತ್ತರ ಕೊಡಲಿಲ್ಲ' 'ಕುತೂಹಲ ಮೂಡಿಸಿದೆ' 'ಗೊಂದಲ ಸೃಷ್ಟಿ ಮಾಡಿದೆ' ಪ್ರಶ್ನೆ ಹುಟ್ಟು ಹಾಕಿದೆ. 'ಸಿಡಿತಾರಾ ಒಲಿತಾರಾ ಕಾದು ನೋಡಬೇಕಿದೆ.' ಇಥ ಶಬ್ದ ಗುಚ್ಛಗಳನ್ನ ಹೊಳ್ಳ ಮಳ್ಳ ಬ್ಯಾರೇ ಬ್ಯಾರೇ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ಹಾಕಿ ತೋರಿಸ್ತಿರ್ತಾರ. ಆಮೇಲೆ ಇವರ ಕಾರ್ಯಕ್ರಮದ ಹೆಸರುಗಳನ್ನ ನೋಡಬೇಕು. ಎಲ್ಲಾರೂ ಏನ್ ಪ್ರೊ. ಜಿ ವೆಂಕಟಸುಬ್ಬಯ್ಯನವರ ದತ್ತು ಪುತ್ರರು ಅನ್ನೋ ಹಾಂಗ ತಮ್ಮನ್ನ ತಾವು ಕನ್ನಡ

ಪಂಡಿತರು ಅನ್ನೋತಾರ. ನಾ ನೋಡಿದ್ದ ಕಾರ್ಯಕ್ರಮದ ಹೆಸರು "ಬೊಮ್ಮಾಯಿ ಭಯ". ಸಿಎಂ ಅಂತ ಪ್ರಮಾಣ ವಚನ ಸ್ವೀಕಾರ ಮಾಡಿದ ಮ್ಯಾಲೆ ಅವರಿಗೆ ಮುಂದ ಯಾವ ಯಾವ ಸವಾಲುಗಳು ಎದುರಾಗಬಹುದು ಅನ್ನೋ 2 – 3 ನಿಮಿಷದ ವಿಚಾರನ್ನ 30 ನಿಮಿಷ ಎಳದ್ ತೋರ್ಸೋ ಅಂಥಾ ಕಾರ್ಯಕ್ರಮ. ಮತ್ತ ಇವರು ಭಾಷಾಮ್ಯಾಲೆ ಪ್ರಭುತ್ವ ಸಾಧಿಸ್ಯಾರ ಅಂತ ತೋರಿಸ್ಕೋಬೇಕು ಅನ್ನೋ ಮಂದಿ. ಬ್ಯಾರೇ ಬ್ಯಾರೇ ಮಂದಿಗೆ ಬ್ಯಾರೇ ಬ್ಯಾರೇ ಹೆಸರಿಡ್ತೀವಿ ಅಂತಾರ. ಮತ್ತ, ಈಶ್ವರಪ್ಪನವರು ಸಿಎಂ ಆಗಿದ್ರ 'ಈಶ್ವರಪ್ಪ ಇಕ್ಕಟ್ಟು' ಅಂತ, ಲಕ್ಷ್ಮಣ ಸವದಿ ಯವರಾಗಿದ್ರ 'ಸವದಿ ಸವಾಲ್' ಅಂತ, ಪ್ರಹ್ಲಾದ್ ಜೋಶಿ ಅವರಾಗಿದ್ರ 'ಜೋಶಿ ಜೋಕೆ' ಅಂತ, ಹಿಂಗ ಬೇಕಾದವ್ರು ಬರಲಿ ನಾವು ಅವರಿಗೆ ಒಂದು ವಿಶೇಷ ಪದ ಇಡತೀವಿ ಅನ್ನೋರ ಹಂಗಿರ್ತಾರ. ಅದ್ರೊಳಗ ಮತ್ತ ನಂಬರಿಂಗ್ ಸಿಸ್ಟಮ್ ಬ್ಯಾರೇ. 'ಬೊಮ್ಮಾಯಿ ಭಯ 1 ' . 'ಬೊಮ್ಮಾಯಿ ಭಯ 2' ಅಂತ. ಇನ್ನೊಂದು ಪ್ರಮುಖ ಸಂಗತಿ. ಈ ಮಧ್ಯಮದೊಳಗಿರವ್ರು ಎಲ್ಲಾರೂ (ಅಂದ್ರ ದೃಶ್ಯ ಮತ್ತು ಮುದ್ರಣ) ತಮ್ಮ ತಮ್ಮ ಸಾಲ್ಯಾಗ ವಿಭಕ್ತಿ ಪ್ರತ್ಯಯಗಳನ್ನು ಹೇಳಿಕೊಟ್ಟಾಗೆಲ್ಲಾ ಮಾಸ್ ಬಂಕ್ ಹೊಡದಾರ ಅನಸ್ತದ. ಈ ಕಾರ್ಯಕ್ರಮದ ಹೆಸರು ನೋಡಿ ಬೊಮ್ಮಾಯಿಯವರಿಗೆ ಭಯ ಅದ ಅಂತನ್ನೋಬೇಕೋ, ಅಥವಾ ಈಗ ಜಗತ್ನೊಳಗ "ಕರೋನಾ" ಬಿಟ್ರ ಮುಂದಿನ ದೊಡ್ಡ ಭಯ ಬೊಮ್ಮಾಯಿಯವರಿಂಧನ ಅನ್ನೋಬೇಕೋ ಗೊತ್ತಿಲ್ಲ. ಅಂದ್ಹಂಗ ನೀವು ಬೊಮ್ಮಾಯಿಯವರನ್ನ ಸ್ವತಃ ಕೇಳಿದ್ರ ಅವರು ಬಹುಶಃ "ಏನಿಲ್ರಪಾ ಅರಾಮು ಇದ್ದೀನಿ, ಮತ್ತ ಸಿಎಂ ಕುರ್ಚಿ ಮ್ಯಾಲೆ ಕೂತ್ರ ಎಲ್ಲಾನೂ ಸರಳ ಇರಂಗಿಲ್ಲಾ." ಅನ್ನೋ ಉತ್ತರ ಕೊಡತಾರ ಅನಸ್ತದ. ಆದ್ರ ಅವ್ರೇನರ ಈ "ಬೊಮ್ಮಾಯಿ ಭಯ 1 ರಿಂದ 7" ನೋಡಿದ್ರ ಇವು ಏಳೂ ಕೂಡ್ಸಿ ಎಂಟನೇದು ಶುರು ಆಗ್ತದ. ಈ ಮಾಧ್ಯಮ ವಾಹಿನಿಗಳನ್ನ ದಿನಾ ನೋಡ್ಬೇಕಲ್ವ ಅನ್ನೋ ಭಯ.

ಮಾಧ್ಯಮ ವಾಹಿನಿಗಳಗೆ ತಮ್ಮ ತಮ್ಮ ಟಿಆರ್‌ಪಿ ಟಾರ್ಗೆಟ್ ಇರ್ತಾವ. ಆದ್ರ ಇದನ್ನ ಅಚೀವ್ ಮಾಡೋದ್ರೊಳಗ ನಾವು ಏನನ್ನ ಕಳ್ಕೋತೀವಿ ಅನ್ನೋದನ್ನೂ ಸ್ವಲ್ಪ ಗಮನದಾಗ ಇಟ್ಕೋಬೇಕಲ್ಲಾ. ಬರಬರತ ನಾ ಕಂಡ್ಹಂಗ ನಮ್ಮ ಮೆಂಟಲ್ ಹೆಲ್ತ್ ಬಗ್ಗೆ ಹೆಚ್ಚಾಗಿ ಕಾಳಜಿವಹಿಸ್ಕೋಬೇಕಾಗೆದ ಅಂತ ಅನಸ್ತದ. ಆರೋಗ್ಯ ಅಂದ ಕೂಡಲೇ ಬರೇ ಫಿಸಿಕಲ್ ಫಿಟ್ನೆಸ್ ಬಗ್ಗೆ ಯೋಚನೆ ಮಾಡ್ತೀವಿ ಆದ್ರ "ಕಂಡಿಶ್ನಿಂಗ್ ಅವರ್ ಮೈಂಡ್ ಟು ಬಿ ಮೆಂಟಲಿ ಫಿಟ್ ಆಲ್ವೇಸ್ ಇಸ್ ಅಟ್ಮೋಸ್ಟ್ ಇಂಪಾರ್ಟೆಂಟ್." ಈಗಾಗ್ಲೆ ನಮ್ಮೆಲ್ಲಾರ್ ಜೀವನ್‌ದಾಗ ಸಾಕಷ್ಟು ಔದ್ಯೋಗಿಕ, ವೈಯಕ್ತಿಕ ಸಮಸ್ಯೆಗಳ ಜೊತೆ ಹೋರಾಡ್ತಿರ್ತೀವಿ. ಹಂಗಿದ್ದಾಗ ಏನೇನರ ತೋರಿಸಿ ಹೆಚ್ಚಿಗಿ ಚಿಂತಿ ತುರುಕೋದ್ರೊಳಗ ಏನರ್ಥದ.

ಮತ್ತ ಯಾರರ ಏನರ ಅಂದಿದ್ದನ್ನ ಸೈತ ಎಂಥೆಂಥಾ ದೊಡ್ಡ ಸುದ್ದಿ ಮಾಡ್ತಾರ ಅಂತೀರಿ. ಮುಂದೊಂದು ದಿನ ಹಿಂಗೂ ಬರಬಹುದು, ಯಾರರ ಸೆಲೆಬ್ರಿಟಿ ಒಂದು ಸನ್ನಿವೇಶದಾಗ, "ನಾನು ಆದಷ್ಟು ರೈಸ್ ಅವಾಯ್ಡ್ ಮಾಡ್ತೀನಿ" ಅಂತಾರ ಅನ್ನೋರಿ. ತಮ್ಮ ಫಿಟ್ನೆಸ್‌ನ ಗಮನ್ದಾಗಿಟ್ಗೊಂಡು ಅವರು ಮಾತಾಡಿರ್ತಾರ. ಆಗ "ರೈತರ ಆತ್ಮಹತ್ಯೆಗಳಿಗೆ ಈ ಸೆಲೆಬ್ರಿಟಿಗಳ ಶೋಕಿ ಕಾರಣವೇ?" ಅಂತ ಅಂದ್ರೂ ಏನೂ ಆಶ್ಚರ್ಯವಿಲ್ಲ. ಮತ್ತ ಇವರೂ ಶ್ಯಾಣ್ಯಾರ. ಕ್ವೆಸ್ಚನ್ ಮಾರ್ಕ್ ಹಾಕಿ ಸುಮ್ನ ಕೂಡ್ತಾರ. "ನಾವೆಲ್ಲಿ ಹೇಳೀವ್ರಿ .. ಬರೇ ಪ್ರಶ್ನೆ ಹಾಕೀವಿ .. ಹಾಕೋದು ನಮ್ಮ ಕರ್ತವ್ಯ"

ಅಂತಾರ. ಒಮ್ಮೆ ಈ ಸುದ್ದಿ ಮಾಧ್ಯಮದಾಗ ಬಂತು ಅನ್ನೋರಿ, ಇನ್ನೊಂದು ಹೆಮ್ಮಾರಿ ಅದ ಅಲ್ಲ, "ಸೋಶಿಯಲ್ ಮೀಡಿಯಾ", ಅದು ಬೆಂಕಿ ಒಳಗ ತುಪ್ಪ ಸುರಿಯೋ ಕೆಲಸ ಮಾಡ್ತದ. ಅದ್ರೊಳಗ ಪಟ್ಟಂತ ಎರಡು ಗುಂಪುಗಳಾಗ್ತಾವ, ಪರ ವಿರೋಧ ಅಂತ್ಹೇಳಿ. ಒಂದು ಹ್ಯಾಷ್ ಟ್ಯಾಗ್ ಹಾಕಿ ಟ್ರೆಂಡಿಂಗ್ ಮಾಡಿಬಿಟ್ರ ಏನೋ ಒಂದು ಯುದ್ಧ ಗೆದ್ದ್ಹಂಗ. ಮನ್ಯಾಗ ಹೆಂಡ್ತಿ "ಅಲ್ರೀ, ಕಿರಾಣಿ ಖಾಲಿ ಆಗೇದ, ಆರ್ಡರ್ ಮಾಡ್ರಿ ಆನ್‌ಲೈನ್" ಅಂದ್ರ, "ತಡೀಯ ಇಲ್ಲೆ ಒಬ್ಬಾವ 'ಇದನ್ ಭಾಳ ದೊಡ್ಡದು ಮಾಡೋದ್ ಬ್ಯಾಡ' ಅಂತ ಟ್ವೀಟ್ ಮಾಡ್ಯಾನ. ಆತಂಗ ಮಸ್ತ 'ಯಾಕ್ಪಾ ನಿನಗ್ ದೇಶದ ರೈತರ ಮ್ಯಾಲೆ ಕಾಳಜಿ ಇಲ್ಲೇನು?' ಅಂತ ರಿಪ್ಲೈ ಮಾಡಿ ಆಮೇಲೆ ಆರ್ಡರ್ ಮಾಡ್ತೇನಿ" ಅಂತಾನ ಗಂಡ. ಹಿಂಗ ತಲ್ಯಾಗ ಹುಳ ಬಿಟ್ಟು, "ಈಗ ನೋಡು ಇವು ಹೆಂಗ ಜಗಳಾಡ್ತಾವು." ಅಂತ ಮಜಾ ತೊಗೋಳೋ ಮಂದಿ ಭಾಳಾಗ್ಯಾರ.

ಇಷ್ಟೆಲ್ಲಾ ಆಗಿ, ಮತ್ತ ನಾವು ನೋಡೋದ್ ಬಿಡ್ತೇವೇನು? ಇಲ್ಲ. ಯಾಕಂದ್ರ ನಮಗ ಸುದ್ದಿ ಬೇಕು. ಆದ್ರ ಆ ಸುದ್ದೀನ ಆರಿಸಿ ನೋಡಬೇಕು. ಒಂದು ದೊಡ್ಡ ಬದಲಾವಣೆ ಅವರ ಕಡೆಯಿಂದ ಬೇಕಾಗೆದೋ, ಇಲ್ಲೋ ಗೊತ್ತಿಲ್ಲ. ಆದ್ರ ನಮ್ಮೊಳಗಂತೂ ಖರೇನ ಬೇಕಾಗೇದ. ಯಾವುದನ್ನ ಎಷ್ಟು ನೋಡಬೇಕು, ಯಾವದಕ್ಕ ಎಷ್ಟು ಮಹತ್ವ ಕೊಡಬೇಕು ಅನ್ನೋದು ನಮಗ ಸ್ಪಷ್ಟಾಗ್ಬೇಕು. ನಮ್ಮ ಸುತ್ತ ಮುತ್ತ ಮಂದಿಗೆ ಒಂದಷ್ಟು ಸಮಸ್ಯೆ ಅವ. ಕೇಳಿಸ್ಕೋರಿ ಸಾಕು. ತಮ್ಮ ತಾವ ಬಗಿಹರಿಸ್ಕೋತಾರ. ಒಂದಿಷ್ಟು ಚಾಷ್ಟಿ ಮಾಡ್ಕೋತ, ನಕ್ಕೋತ, ನಗಿಸ್ಕೋತ ಇರೋಣ, ಈ ವಿಷಜಾಲಕ್ಕ ಬೀಳೊದು ಬ್ಯಾಡ.


ನನ್ನ ಮಾತುಗಳಿಂದ ಯಾರರ ಮಾಧ್ಯಮ ವರ್ಗದವರಿಗೆ ನೋವಾಗಿದ್ರ, ನಾ ಈ ಲೇಖನ ಬರೆದಿದ್ದಕ್ಕೂ ಒಂದು ಸಣ್ಣ ಸಾರ್ಥಕ್ಯ ಸಿಕ್ಹಂಗ ಆಗ್ತದ ಅನ್ಕೋತೀನಿ.

ಎಲ್ಲಾರೂ ನಕ್ಕೋತ ಅರಾಮಿರ್ರೆಪಾ. ■

**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



**"ಸ್ವಾಮಿ ಇಷ್ಟೆಲ್ಲ ಮಾಡ್ತೀರಲ್ಲ, ಈ ಪೆನ್ನನ್ನ ಸ್ವಲ್ಪ ಬಿಚ್ಚಿಕೊಡಿ ನೋಡೋಣ"**

# ಸರ್ವಂ ಸಂಗೀತಮಯಂ!

**● ಸಂಧ್ಯಾ ರಮೇಶ್**

'ಕನ್ನಡವೆನೆ ಕುಣಿದಾಡುವುದೆನ್ನೆದೆ' ಕುವೆಂಪುರವರ ಕವನದ ಸಾಲುಗಳನ್ನು ನನ್ನ ಮಟ್ಟಿಗೆ ಹೇಳುವುದಾದರೆ, ಅದನ್ನು ಸ್ವಲ್ಪ ಬದಲಿಸಿ 'ಸಂಗೀತವೆನೆ ಕುಣಿದಾಡುವುದೆನ್ನೆದೆ, ಕರ್ನಾಟಕ ಸಂಗೀತವೆನೆ ಕಿವಿ ನಿಮಿರುವುದು' ಎನ್ನಬಹುದೇನೋ? ಅಷ್ಟರಮಟ್ಟಿಗೆ ನನ್ನ ಕರ್ನಾಟಕ ಸಂಗೀತದ ಮೇಲಿನ ಪ್ರೀತಿ, ಅಭಿರುಚಿ ಅನ್ನುವುದಕ್ಕಿಂತಲೂ ಸ್ವಲ್ಪ 'ಹುಚ್ಚೇ' ಎಂದರೂ ತಪ್ಪಾಗಲಾರದು.

ಈ ಸಂಗೀತದ ಗೀಳು ಹುಟ್ಟಿದಾರಭ್ಯ ಬಂದುದೇನಲ್ಲ ಬಿಡಿ. ಅಳುವಾಗ ಆರೋಹಣ, ಅವರೋಹಣಗಳೂ ಎಲ್ಲಾ ಮಕ್ಕಳಂತೇ ಇತ್ತಂತೆ. ಎರಡನೇ ತರಗತಿಯಲ್ಲಿ ಓದುತ್ತಿರುವಾಗ ಅಮ್ಮನ ಬಲವಂತಕ್ಕೆ, ನನ್ನ ಗೆಳತಿ ಚಿತ್ರಾಳೊಂದಿಗೆ ಮನೆಯ ಬಳಿಯಲ್ಲಿಯೇ ಸಂಗೀತ ಶಾಲೆ ನಡೆಸುತ್ತಿದ್ದ ವಿದ್ವಾನ್ ವೆಂಕಟರಮಣ ಶಾಸ್ತ್ರಿಗಳ ಶಿಷ್ಯೆಯಾದೆ. ನಮಗೇನೋ ಇದು ಬಲವಂತದ ಮಾಘ ಸ್ನಾನ. ನಮ್ಮ ಓರಗೆಯವರೆಲ್ಲರೂ ಕಣ್ಣಾಮುಚ್ಚಾಲೆ, ಜೂಟಾಟ, ಕುಂಟೆಬಿಲ್ಲೆ ಆಡುವಾಗ 'ನಮಗ್ಯಾಕಪ್ಪಾ ದೇವರೆ ಈ ಶಿಕ್ಷೆ' ಎಂದುಕೊಂಡು ಗೊಣಗುತ್ತಲೇ ಹೋಗುತ್ತಿದ್ದೆವು. ಆದರೆ ನಮ್ಮ ಗುರುಗಳು ಊರಲ್ಲಿರುತ್ತಿದ್ದುದೇ ಅಪರೂಪ. ಸದಾ ಕಛೇರಿಗಳಿಗೆಂದು ಬೇರೆ ಊರುಗಳಿಗೆ, ಜಾಗಗಳಿಗೆ ಹೋಗುತ್ತಲೇ ಇರುತ್ತಿದ್ದರು. 'ಇವತ್ತು ಮೇಷ್ಟ್ರು ಊರಲ್ಲಿಲ್ಲ. ಆನೇಕಲ್ ಗೆ ಕಛೇರಿಗೆ ಹೋಗಿದ್ದಾರೆ' ಎಂದು ತಿಳಿದುಬರುತ್ತಲೇ ನಮಗೆ ಸ್ವರ್ಗಕ್ಕೆ ಮೂರೇ ಗೇಣು! 'ಮೇಷ್ಟ್ರು ಇಲ್ಲಂತೆ. ಬಾರೇ ಐಸ್ ಪೈಸ್ ಆಡ್ಬೋದು' ಅಂತ ಇಬ್ಬರೂ ಮನೆಯತ್ತ ಓಡುತ್ತಿದ್ದೆವು. ಅವರು ಊರಲ್ಲಿ, ಸಂಗೀತ ಶಾಲೆಯಲ್ಲಿ ಇದ್ದಾಗ ಮಾತ್ರ ನಮ್ಮಿಬ್ಬರದೂ ಪೆಚ್ಚು ಮುಖ! ಸಾ, ಪಾ, ಸಾ ಪ್ರಾರಂಭಿಸಿದ ನನ್ನ ಪ್ರಥಮ ಗುರು ಅವರು. ಆದರೆ ನಮ್ಮ ಹುಡುಗುಬುದ್ಧಿಗೆ ಕೋಪ ಬರುತ್ತಿತ್ತು ಅವರಿಗೆ. ಒಮ್ಮೆ ನಮ್ಮ ತಾಯಿಯ ಬಳಿ ಹೇಳಿದ್ದರಂತೆ. 'ನೋಡೀಮ್ಮ, ನಿಮ್ಮ ಮಗಳ ಕಂಠ ಚೆನ್ನಾಗಿದೆ. ಒಳ್ಳೇ ಸಂಸ್ಕಾರ ಇದೆ. ಸ್ವಲ್ಪ ಶ್ರದ್ಧೆಯಿಂದ ಕಲೀಲಿಕ್ಕೆ ಹೇಳಿ. ಆದ್ರೆ ಅವಳ ಜೊತೆ ಬರೋ  ಹುಡುಗಿ, ಅವಳ ಹೆಸರೇನು, ಹಾಂ, ಚಿತ್ರಾ, ಅವಳ ದನಿಯಂತೂ ವಿಚಿತ್ರವೇ ಸರಿ. ಸಂಗೀತ ಸಂಸ್ಕಾರವೂ ಇಲ್ಲ. ಅವಳಿಂದ ನಿಮ್ಮ ಮಗಳ ಸಂಗೀತಕ್ಕೂ ತೊಂದರೆ'ಎಂದಿದ್ದರಂತೆ. ನಮ್ಮ ಗುರುಗಳು ಕಟ್ಟುತ್ತಿದ್ದ ಜುಟ್ಟು, ಅದರ ಕಡೆಯೇ ನಮ್ಮ ಗಮನ. ಅವರು ಹಾಡುವ ಭರಾಟೆಯಲ್ಲಿ ಜೋರಾಗಿ ತಲೆಯಾಡಿಸಿದಾಗ ಕೆಲವೊಮ್ಮೆ ಆ ಜುಟ್ಟು ಬಿಚ್ಚಿ ಹೋಗುತ್ತಿತ್ತು. ನಾವು ಅವರೆದುರಿಗೇ ಘೊಳ್ಳೆಂದು ನಕ್ಕು, 'ಹುಡುಗ್ಮುಂಡೇವಾ, ಇನ್ನು  ಪಾಠಕ್ಕೆ ಬರಬೇಡಿ' ಅಂತ ಸಾಕಷ್ಟು ಬೈಸಿಕೊಂಡಿದ್ದೂ ಇದೆ.

ಬಾಲ್ಯದಲ್ಲಿ, ನಂತರದ ದಿನಗಳಲ್ಲಿ ಅಷ್ಟಾಗಿ ಇಲ್ಲದ ಸಂಗೀತಾಸಕ್ತಿ, ಏಕೋ ಏನೋ ನನ್ನ ಮಕ್ಕಳು ಹುಟ್ಟಿದ ನಂತರ ಇದ್ದಕ್ಕಿದ್ದಂತೆಯೇ ಪ್ರತ್ಯಕ್ಷವಾಗಿಬಿಟ್ಟಿತು. ಬಳ್ಳಾರಿಯ ಮೆಡಿಕಲ್ ಕ್ವಾರ್ಟರ್ಸ್ ನಲ್ಲಿದ್ದಾಗಲಂತೂ ನಮ್ಮದೊಂದು ಪುಟ್ಟ 'ಸಂಗೀತಾಭಿಮಾನಿಗಳ ಸಂಘ' ದಂತೆಯೇ ಇತ್ತು. ಡಾ. ರಘು ಅಂತ ಸರ್ಜರಿ ಪ್ರೊಫೆಸರ್ ಅವರ ಕಾರಿನಲ್ಲಿ, ಅವರ ಪತ್ನಿ ಹಾಗೂ ನನ್ನ ಅಕ್ಕನಂತೆಯೇ ಇದ್ದ

ಗೆಳತಿ ಶಾಂತಾ ರಘು, ಡಾ. ಆರ್ಮುಗಂ, ಅವರ ಪತ್ನಿ, ಅವರ ಹೆಸರು ಇಂದಿಗೂ ಗೊತ್ತಿಲ್ಲದೇ ಆರ್ಮುಗಂ ಮಾಮಿಯೇ ಆಗಿದ್ದಾರೆ, ಹಾಗೂ ನಾನು , ನನ್ನ ಮಕ್ಕಳು ಅಲ್ಲಿಯ ಸಂಗೀತ ಸಭೆಯೊಂದರ ಕಛೇರಿಗಳಿಗೆ ಹೋಗುತ್ತಿದ್ದೆವು. ನನ್ನ ಪತಿ ಇನ್ನೂ ಮೆಡಿಸಿನ್ ಲೆಕ್ಚರರ್ ಆಗಿದ್ದರಿಂದ ಯಾವಾಗಲೂ ಆಸ್ಪತ್ರೆ ಡ್ಯೂಟಿ ಮೇಲೆ ಇರಬೇಕಾಗಿ ನಾನೊಬ್ಬಳೇ ಮಕ್ಕಳೊಂದಿಗೆ ಹೋಗಬೇಕಾದ ಸಂದರ್ಭ. ಒಂದು ಪುಟ್ಟ ಚೀಲದಲ್ಲಿ ಬಿಸ್ಕತ್ತು ಇತ್ಯಾದಿಗಳೊಂದಿಗೆ ಕಾರಿನಲ್ಲಿ ಎಲ್ಲರೊಂದಿಗೆ ಹೊರಡುತ್ತಿದ್ದೆ. ಕಛೇರಿ ಪ್ರಾರಂಭವಾಗಿ ಇನ್ನೂ ಅರ್ಧ ಗಂಟೆಯೂ ಆಗುತ್ತಿರಲಿಲ್ಲ, ಮಕ್ಕಳ ಚಡಪಡಿಕೆ ಪ್ರಾರಂಭ. 'ಅಮ್ಮಾ ಹಸಿವು, ನಿದ್ರೆ ಬರ್ತಾ ಇದೆ'. ಎಷ್ಟೋ ಬಾರಿ ಡಾ. ಆರ್ಮುಗಂ ಮಾಮಾ ಅವರು ಮಕ್ಕಳನ್ನು ಹಿಂದಿನ ಸೀಟಿನಲ್ಲಿ ಕುಳಿತು ಮಲಗಿಸಿಕೊಂಡಿದ್ದಿದೆ. ಒಮ್ಮೆಯಂತೂ ಒಬ್ಬ ಹಿರಿಯ ಪ್ರಖ್ಯಾತ ಸಂಗೀತ ವಿದುಷಿ ಇನ್ನೂ 'ವರ್ಣ' ಹಾಡಿ ಮುಗಿಸಿದ್ದರಷ್ಟೇ. ನನ್ನ ಮಗ 'ಮುಗಿತಾ ಪ್ರೋಗ್ರಾಂ. ಮನೆಗೆ ಹೋಗೋಣ' ಎಂದು ಜೋರಾಗಿ ಕೇಳಿ ಮರ್ಯಾದೆ ತೆಗೆದಿದ್ದ. ನನ್ನ ಪಕ್ಕದಲ್ಲೇ ಕುಳಿತಿದ್ದ ಶಾಂತಾಗೂ ಬಹಳ ಮುಜುಗರವಾಗಿತ್ತು. ಯಾರೋ ದಂಪತಿ ನನಗೆ ಕೇಳುವಂತೆ, 'ಮಕ್ಕಳನ್ನ ಯಾಕೆ ಕರ್ಕೊಂಡು ಬರ್ತಾರೋ ಈ ಪ್ರೋಗ್ರಾಂಗಳಿಗೆ. ನಮಗೂ ಸಂಗೀತ ಕೇಳದಿರೋ ಹಾಗೆ ಮಾಡ್ತೋದಿಕ್ಕೆ' ಅಂತ ನನ್ನತ್ತ ದುರುಗುಟ್ಟಿ ನೋಡಿದ್ದರು. ಆದರೂ ಇಷ್ಟೆಲ್ಲಾ ಸಹಿಸಿಕೊಂಡೂ ಛಲ ಬಿಡದ ತ್ರಿವಿಕ್ರಮನಂತೆ ಕಛೇರಿಗಳಿಗೆ ಹೋಗುವುದನ್ನು ಮಾತ್ರ ತಪ್ಪಿಸಲಿಲ್ಲ.

ಇದೇ ಬಳ್ಳಾರಿಯ ಕ್ವಾರ್ಟರ್ಸ್‌ನಲ್ಲಿದ್ದಾಗ, ನನಗೆ, ಆರ್ಮುಗಂ ಮಾಮಿಗೆ 'ಪಂಚರತ್ನ ಕೀರ್ತನೆ ಕಲಿಯಬೇಕೆಂಬ ಆಸೆ ತೀವ್ರವಾಯಿತು. ಶಾಂತಾ ರಘು ಅವರಿಗೆ ಪಾಠವಾಗಿದ್ದು, ನಮಗೆ ಹೇಳಿಕೊಡುತ್ತೇನೆಂದಾಗ ನಮ್ಮ ಸಂತೋಷಕ್ಕೆ ಎಣೆಯೇ ಇಲ್ಲ. ಪ್ರತಿದಿನ ಬೆಳಿಗ್ಗೆ ಅಡುಗೆ ಕೆಲಸ ಎಲ್ಲಾ ಮುಗಿಸಿ ಬೆಳಿಗ್ಗೆ 11 ಘಂಟೆಗೆ ಶಾಂತಾ ಅವರ ಮನೆಯಲ್ಲಿ ಇಬ್ಬರೂ ಹಾಜರ್. 'ಜಗದಾನಂದಕಾರಕ' ಹೇಳಿಸಿಕೊಳ್ಳಲು ಒಂದು ತಿಂಗಳು ಬೇಕಾಯಿತು. 'ಇಷ್ಟು ನಿಧಾನ ಆದ್ರೆ ಹೇಗ್ರೀ ಶಾಂತಾ, ಬೇಗ ಬೇಗ ಹೇಳಿಕೊಡಿ' ಎಂದರೆ, 'ಏನು ತಮಾಷೆ ಮಾಡ್ತೀರಾ ಸಂಧ್ಯಾ, ಇದು ಪಂಚರತ್ನ ಕೀರ್ತನೆ, ಬೇರೆಯವರಾದರೆ ನಾಲ್ಕು ತಿಂಗಳು ತೆಗೆದುಕೊಳ್ಳುತ್ತಿದ್ದರು' ಅಂತಿದ್ದರು. ಅದೂ ನಿಜಾನೇ, ನಮ್ಮ ಹರಟೆ, ನಗುವೇ ಪ್ರಧಾನವಾಗಿರುತ್ತಿದ್ದ ಕ್ಲಾಸಿನಲ್ಲಿ ಒಂದು ತಿಂಗಳಲ್ಲಿ ಕಲಿತಿದ್ದು credit ಶಾಂತಾಗೋ ಅಥವಾ ನಮಗೋ ತಿಳಿಯುತ್ತಿಲ್ಲ. ಗೌಳದ 'ದುಡುಕುಗಲ' ಸಾಹಿತ್ಯದಲ್ಲಿ 'ಮೊದಟಿಕುಲಜುಡಕುಜು ಭುವಿನಿ' ಹಾಡುವಾಗ, ಮಾಮಿ 'ಜುಕುಡು, ಡಜುಕು' ಅಂತೆಲ್ಲಾ ಅಪಭ್ರಂಶ ಮಾಡಿ 'ಇದೇನ್ರೀ ಈ ಡುಗುಡುಗು' ಈ ತ್ಯಾಗರಾಜರು ಇಷ್ಟು ಕಷ್ಟ ಕೀರ್ತನೆ ಮಾಡಿ ನಮಗ್ಯಾಕೆ ಹೀಗೆ punishment ಕೊಟ್ಟಿದ್ದಾರೆ ಎಂದು ನಗುವಂತೆ ಮಾಡುತ್ತಿದ್ದುದು ಮರೆಯುವಂತೆಯೇ ಇಲ್ಲ.

ಬಳ್ಳಾರಿ ಕ್ವಾರ್ಟರ್ಸ್ ನಲ್ಲೇ ಇದ್ದ ನನ್ನ ಆತ್ಮೀಯ ಗೆಳತಿ ಡಾ. ವತ್ಸಲ ಮತ್ತು ನನಗೆ ಹಿಂದೂಸ್ತಾನಿ ಕಲಿಯುವ ಆಶೆಯಾಗಿತ್ತು. ಅದೇ ಊರಲ್ಲಿದ್ದ ಪಂಡಿತ್ ಚಂದ್ರಶೇಖರ ಗವಾಯಿಗಳನ್ನು ಬಿನ್ನವಿಸಿಕೊಂಡೆವು. ವತ್ಸಲ ದೇವರ ನಾಮಗಳನ್ನು ನಾನು ಭಜನ್ ಗಳನ್ನು ಹಿಂದೂಸ್ತಾನಿ ಶೈಲಿಯಲ್ಲಿ ಕಲಿಯಲಾರಂಭಿಸಿದೆವು. ಗವಾಯಿಗಳೋ ಮಹಾ strict ಗುರುಗಳು. ಒಂದಿಷ್ಟೂ ಶೃತಿ ಬಿಟ್ಟು ಹಾಡುವಂತಿಲ್ಲ.

'ದಾ' ಎಂದು ಹಾಡುವಾಗ 'ಯಾಕಮ್ಮಾ ಇವತ್ತು ಊಟ ಮಾಡಿಲ್ವಾ, ಉಸಿರೇ ಹೊರಡ್ತಿಲ್ಲ.'ಧಾ' ಅಂತ ಒತ್ತು ಕೊಟ್ಟು ಹಾಡು' ಅನ್ನುವರು. ವತ್ಸಲಾ ಅವರ ಪತಿ ಡಾ. ಧ್ರುವನಾರಾಯಣ್ ನನ್ನನ್ನು ಕಂಡ ತಕ್ಷಣ ಕೇಳುತ್ತಿದ್ದುದು 'ನಿಮ್ಮ 'ಧಾ'ಹ್ಯಾಗಿದ್ದಾರೆರೀ' ಎಂದೇ.

ನನ್ನ ದೊಡ್ಡಮ್ಮನ ಮಗಳ ಮದುವೆಯ ಸಂಜೆ ಆರತಕ್ಷತೆ ಸಮಾರಂಭದಲ್ಲಿ ಪ್ರಸಿದ್ಧ ವೈಣಿಕ ವಿದ್ವಾಂಸರೊಬ್ಬರ ಕಛೇರಿ ಏರ್ಪಡಿಸಿದ್ದರು. ವಿದ್ವಾಂಸರೇನೋ ಸೊಗಸಾಗಿ ತನ್ಮಯತೆಯಿಂದ ನುಡಿಸುತ್ತಿದ್ದರು. ಆದರೆ ಮದುವೆ ಮನೆ ಗಲಾಟೆ, ಅರ್ಧ ಘಂಟೆಯೂ ಕಳೆದಿರಲಿಲ್ಲ, ಯಾರೋ ಹೇಳಿದರಂತೆ, 'ಮಂಗಳ ನುಡಿಸಲಿಕ್ಕೆ ಹೇಳ್ರೀ, ಈ ಗಲಾಟೇಲಿ ಏನೂ ಕೇಳಿಸ್ತಿಲ್ಲ' ಅಂತ. ಕಲಾವಿದರೋ ನುಡಿಸುವಿಕೆಯಲ್ಲಿ ಎಷ್ಟು ತಲ್ಲೀನರಾಗಿದ್ದರೆಂದರೆ 'ನಿಲ್ಲಿಸಿಬಿಡಿ' ಎಂದು ಕಣ್ಸನ್ನೆ, ಕೈಸನ್ನೆ, ಹಾವಭಾವಗಳು ಏನೂ ಪ್ರಭಾವ ಬೀರಲಿಲ್ಲ. ಕೊನೆಗೆ ಒಂದು ಚೀಟಿಯಲ್ಲಿ 'ಮಂಗಳ ನುಡಿಸಿ' ಎಂದು ದೊಡ್ಡದಾಗಿ ಬರೆದು ಅವರ ಮುಂದಿಟ್ಟಾಗ, ಅವರ ಪರಿಸ್ಥಿತಿ ಹೇಗಾಗಿರಬಹುದು?

ಮತ್ತೊಮ್ಮೆ ನಾಡಿನ ಪ್ರಸಿದ್ಧ ಗಾಯಕರ ಕಛೇರಿ ಬಳಗದ ಹುಡುಗಿಯ ಮದುವೆಯಲ್ಲಿ ಸಂಜೆ ಹಮ್ಮಿಕೊಂಡಿದ್ದರು. ನಾನು ಮುಂದಿನ ಸಾಲಿನಲ್ಲೇ ಅವರ ಪತ್ನಿಯ ಜೊತೆ ಕುಳಿತಿದ್ದೆ. ಅವರು ನನಗೆ ಚಿರಪರಿಚಿತರು. ಎಂತಹ ಅದ್ಭುತ ಗಾಯನ! ಆದರೇನು? ಎಂದಿನಂತೆ ಮದುವೆ ಮನೆ ಗಲಾಟೆ, ಮಕ್ಕಳ ಆಟ, ನಗು, ಬಂಧು ಬಳಗದವರು ಎಷ್ಟೋ ಸಮಯದ ನಂತರ ಭೇಟಿಯಾದವರ ಹರಟೆ, ಉಭಯ ಕುಶಲೋಪರಿ ಒಂದೇ ಎರಡೇ? ಅಷ್ಟರಲ್ಲಿ ಬೀಗರ ಪೈಕಿ ಒಬ್ಬಾಕೆ ನನ್ನ ಬದಿ ಬಂದು ಕುಳಿತರು. ಆ ಬೀಗರೋ ಗುಲ್ಬರ್ಗಾ ಕಡೆಯವರು. ಅಷ್ಟಕ್ಕೂ ಸಂಗೀತದ ಗಂಧಗಾಳಿಯಿಲ್ಲದವರು. ಆಕೆ ನನ್ನ ಜೊತೆ ಮಾತನಾಡುತ್ತಾ, 'ಯಾಕ್ಬೇಕಿತ್ರೀ ಈತನ ಗಾನಾ? ಮೊದ್ಲಾ ಈ ನಮೂನಿ ಗಲಾಟಿ, ತಲಿ ಚಿಟ್ಟು ಹಿಡಿಧಾಂಗದ. ಅದ್ರ ಮ್ಯಾಲ ಈತನ ಗಾನ. ಇನ್ನಾ ಯಾವಾಗ ಮುಗಿಸ್ತಾನೋ?' ಎಂದು ಜೋರಾಗಿ ಅಂದಾಗ, ನನ್ನ ಈಚೆ ಬದಿ ಕುಳಿತ ವಿದ್ವಾಂಸರ ಪತ್ನಿಯ ಮುಖ ಹೇಗಾಗಿರಬಹುದು? ನನಗಂತೂ ಅವರತ್ತ ನೋಡಲೂ ಧೈರ್ಯವಾಗಲಿಲ್ಲ.

ಒಮ್ಮೆ ಇಂತಹುದೇ ಒಂದು ಕಛೇರಿಯಲ್ಲಿ ಕಲಾವಿದರು, 'ವೀರಿಬೋಣಿ' ವರ್ಣ ಪ್ರಾರಂಭಿಸಿದರಂತೆ. ಮೃದಂಗದವರ ಬಳಿ ಚಕ್ಕುಲಿ, ಕೋಡುಬಳೆ, ಮೈಸೂರು ಪಾಕು ಇನ್ನೂ ಏನೇನೋ ತಿಂಡಿಗಳನ್ನು ತಟ್ಟೆಗಳಲ್ಲಿ ಅಲಂಕಾರಕ್ಕೆಂದು ಇಟ್ಟಿದ್ದರು. ಮೃದಂಗ ಕಲಾವಿದರಿಗೆ ಹಸಿವಾಗಿತ್ತೋ ಅಥವಾ ಗಲಾಟೆಗೆ ಕೋಪ ಬಂದಿತ್ತೋ, ಮೆಲ್ಲಗೆ ಒಂದೊಂದೇ ತಿಂಡಿಗಳನ್ನು ಮೆಲ್ಲಗೆ ತಮ್ಮ ಚೀಲದಲ್ಲಿ ಹಾಕಿಕೊಳ್ಳುತ್ತಿದ್ದರಂತೆ. ಇದನ್ನು ಗಮನಿಸಿದ ಮುಖ್ಯ ಕಲಾವಿದರು, 'ಸಾರಿಗಸರಿಗಾರಿ' ಎಂದು ಪುನರಾವರ್ತನೆ ಮಾಡಿ ಹಾಡುತ್ತಲೇ 'ನೀ ಪನಿ ಸರಿಪೋಯಾ' ಎಂದು ಇವರತ್ತ ನೋಡಿ ನಕ್ಕರಂತೆ.

ಇನ್ನು ಸಭಾಕಛೇರಿಗಳಲ್ಲಿ ವೇದಿಕೆಯುಲ್ಲಿ ಮೈಕಿನ ಮುಂದೆ ಉಪಸ್ಥಿತರಾಗುತ್ತಿದ್ದಂತೆಯೇ ಕಲಾವಿದರ ಭರತನಾಟ್ಯ ಪ್ರಾರಂಭ. ಶೃತಿ ಹೊಂದಿಸಿಕೊಳ್ಳುತ್ತಲೇ ತಂತ್ರಜ್ಞನೊಂದಿಗೆ ಹಾವಭಾವಗಳ ಅಭಿನಯ. ಕೈ ಮೇಲೆ ಮಾಡಿದರೆ volume ಜಾಸ್ತಿ ಮಾಡು, ಕೆಳಗೆ ಮಾಡಿದರೆ ಕಡಿಮೆ ಮಾಡು, ಮುಖ್ಯ

ಕಲಾವಿದರು green signal ಕೊಟ್ಟರೂ ಪಕ್ಕವಾದ್ಯದವರು ತಾಳೆಯಾಗಬೇಕಲ್ಲ? ಭರತನಾಟ್ಯದ ಎಲ್ಲಾ ಹಸ್ತಮುದ್ರೆಗಳನ್ನು ವೇದಿಕೆಯ ಮೇಲೆ ಕಾಣಬಹುದು. ಎಲ್ಲಾ ಸಿಂಕ್ರೊನೈಸ್ ಆಯ್ತು ಅಂತ ಕಛೇರಿ ಶುರುವಾಯಿತೆಂದರೆ ಮತ್ತೆ ಅಸಮಾಧಾನ. ಈಗ ಹಸ್ತ ಮುದ್ರೆಗಳಿಗೆ ಆಸ್ಪದ ಇರುವುದಿಲ್ಲವಾಗಿ, ಮುಖದಲ್ಲಿನ ಅಭಿನಯ!. ಸರಿ ಇಲ್ಲವೆಂದು  ತಲೆಯಾಡಿಸುವುದು, ಹುಬ್ಬುಗಂಟಿಕ್ಕಿ ಕಣ್ಣುಗಳಿಂದಲೇ ಮೈಕಿನವನ ಮುಂದೆ ಅಸಮಾಧಾನ ವ್ಯಕ್ತಪಡಿಸುವುದು. ನಿಜವಾದ ಅರ್ಥದಲ್ಲಿ ಒಳ್ಳೆಯ ಸಂಗೀತ ಸವಿಯಲು ಅರ್ಧ ಗಂಟೆಯಾದರೂ ಕಾಯಬೇಕು.

ನನ್ನ ಸೋದರಮಾವ ಹಿಂದೂಸ್ತಾನಿ ಸಂಗೀತದ ಮಹಾ ಅಭಿಮಾನಿ ಆಗಿದ್ದ. ಅವನಿಗೆ ಕರ್ನಾಟಕ ಸಂಗೀತ ಎಂದರೆ ಅಷ್ಟಕಷ್ಟೆ. ನಮ್ಮಿಬ್ಬರಿಗೂ ಭಿನ್ನಾಭಿಪ್ರಾಯ ಬರುತ್ತಿದ್ದುದು ಅದೇ ವಿಷಯದಲ್ಲಿ. 'ನಿಮ್ಮ ಕರ್ನಾಟಕ ಸಂಗೀತದಲ್ಲಿ ಶೃತಿಗೆ ಪ್ರಾಧಾನ್ಯ ಕೊಡುವುದೇ ಇಲ್ಲ ಕಣೆ. ನಮ್ಮಲ್ಲಿ  ನೋಡು, ಎರಡು ತಂಬೂರಿ ಇಟ್ಟುಕೊಂಡು ಒಂದು  ಚೂರೂ ಶೃತಿ ಬಿಡದಂತೆ ಹಾಡ್ತಾರೆ. ಶೃತಿ ಸೇರಿಸಿ ಹಾಡಿದಾಗಿನ ಅನುಭವ ಆಹಾ, ಅದ್ಭುತ. ಅದು ನಿಜವಾದ ಸಂಗೀತ' ಎನ್ನುತ್ತಿದ್ದ. ನನಗೂ ಒಮ್ಮೆ ತಾಳ್ಮೆ ಮೀರಿ, 'ನೋಡು, ಕರ್ನಾಟಕ ಸಂಗೀತ ಎಂದರೆ ಮದುವೆ ಮನೆ ಭೂರಿ ಭೋಜನ ಸವಿದಂತೆ. ಹಿಂದೂಸ್ತಾನಿ ಏನಿದ್ದರೂ ಲಘು ಉಪಹಾರದಂತೆ' ಎಂದು ಯಾರೋ ಹೇಳಿದ್ದನ್ನು ಹೇಳಿಬಿಟ್ಟೆ. ಆ ದಿನ ಅವನಿಂದ ನನಗೆ ಕಪಾಳಮೋಕ್ಷ ಆಗದಿದ್ದುದೇ ನನ್ನ ಪುಣ್ಯ.

ನನ್ನ ದೊಡ್ಡಮ್ಮನ ಮಗನೂ ನನ್ನ ಹಾಗೆ ಮಹಾ ಕರ್ನಾಟಕ ಸಂಗೀತ ಪ್ರೇಮಿ. ಆದರೆ, ಅವನದು ಯಾವಾಗಲೂ ಒಂದೇ complaint. 'ನೋಡೇ, ಕರ್ನಾಟಕ ಸಂಗೀತದಲ್ಲಿ ತಮಿಳುನಾಡಿನವರದೇ ಮೇಲುಗೈ. ಎರಡು ಮಾತಿಲ್ಲ. ಸಂಗೀತ ಶಾರದೆ ಮೊದಲು ಅವರಿಗೇ ಒಲಿದು ಬಿಟ್ಟಿದ್ದಾಳೆ. ಆದರೆ ದೇವರನಾಮಗಳನ್ನು ಹಾಡುವಾಗ ನನ್ನ ಎದೆ ಹೊಡೆದುಕೊಳ್ಳುತ್ತಾ ಇರುತ್ತೆ' ಎಂದಿದ್ದ. ಒಬ್ಬ ಹೆಸರಾಂತ ಸಂಗೀತ ವಿದುಷಿ ಅಮೋಘ  ಕಛೇರಿ ನೀಡಿ, ಇವನು ಧನ್ಯನಾದೆ ಎಂದುಕೊಳ್ಳುತ್ತಿರುವಾಗಲೇ, ದೇವರನಾಮ ಆರಂಭಿಸಿದರಂತೆ. 'ಕೆರೆದರೆ ಬರಬಾರದೇ ಕುರುವೇ' ಎಂದು. ಇವನಿಗೆ ಪಾತಾಳಕ್ಕೇ ತಳ್ಳಿದಂತಹ ಅನುಭವ. ಮತ್ತೊಮ್ಮೆ ನಮ್ಮ ಬಳಗದವರ ಮನೆಯಲ್ಲಿ ಒಬ್ಬ ಆಂಧ್ರ ಕಡೆಯ ಸಂಗೀತ ವಿದುಷಿ ವಾಸ್ತವ್ಯ ಹೂಡಿದ್ದರಂತೆ. ಮಾರನೆ ದಿನ  ಕಛೇರಿಗೆ ತಾಲೀಮು ನಡೆಸಿದ್ದರು. ಯಾವುದೋ ದೇವರ ನಾಮ ಹಾಡುತ್ತಾ ಮಧ್ಯೆ 'ಮಲಬಾಧೆ ತಾಳಲಾರದೆ' ಎಂದು ಎರಡು ಮೂರು ಸಾರಿ ಸಂಗತಿಗಳೊಂದಿಗೆ ಹಾಡುತ್ತಿದ್ದುದನ್ನು ಕೇಳಲಾಗದೇ, ಮನೆಯಾಕೆ ಅದರ ಬಗ್ಗೆ ಸರಿಯಾಗಿ  ಕೇಳಿ ತಿಳಿದುಕೊಂಡಾಗ ಅದು 'ಯಮನ ಬಾಧೆ ತಾಳಲಾರದೆ' ಎಂಬುದಾಗಿದ್ದು ಸರಿಪಡಿಸಿಕೊಂಡರಂತೆ.

ಇಲ್ಲಿಯ ಸಭೆಯೊಂದರ ಜಂಟಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದಾಗ, ತನಿಯ  ನಂತರದ ಭಾಷಣ ನಮ್ಮ ಕಾರ್ಯದರ್ಶಿಯವರದಾಗಿರುತ್ತಿತ್ತು. ವಯಸ್ಸಿನಲ್ಲಿ ಹಿರಿಯರು. ಅಷ್ಟೇನೂ ಸಂಗೀತದ ಬಗ್ಗೆ ಗೊತ್ತಿಲ್ಲದ್ದಿದ್ದರಿಂದ ಕೇವಲ  biodata  ಓದಿಬಿಡುತ್ತಿದ್ದರು. ನಂತರ ನಾನು ಮೈಕು  ತೆಗೆದುಕೊಂಡು ಅವರು ನೀಡಿದ ಕಾರ್ಯಕ್ರಮದ ಉತ್ತಮಾಂಶಗಳ ಬಗ್ಗೆ ಹೇಳಿ ಸಮಾಧಾನ  ಹೊಂದುತ್ತಿದ್ದೆ. ಒಮ್ಮೆ ಪಿಟೀಲು ಪಕ್ಕವಾದ್ಯ ನೀಡಿದ ಒಬ್ಬ


ಯುವ ಕಲಾವಿದೆ ಬಗ್ಗೆ ನಮ್ಮ ಕಾರ್ಯದರ್ಶಿಯವರು ಹುರುಪಿನಿಂದ ಮಾತನಾಡಲಾರಂಭಿಸಿದರು. ಆಕೆಯ ಪಕ್ಕವಾದ್ಯ ವೈಖರಿಯ ಬಗ್ಗೆ ಅಲ್ಲ. ಅವರು ಹೊಗಳಿದ್ದು ಬೇರೆ ರೀತಿಯಲ್ಲಿ. 'ನೋಡಿ, ನಾನು ಇವಳ ಮದುವೆಗೆ ಹೋಗಿದ್ದೆ. ಎಂತಹ ಭರ್ಜರಿ ಊಟ ಮಾಡಿದ್ದೆ ಮದುವೆಯಲ್ಲಿ!. ಅದೇನು ಚಿರೋಟಿ, ಬೇಸಿನ್ ಲಾಡು, ಪುಳಿಯೋಗರೆ, ಇನ್ನೂ ಆ ಸಾರಿನ ಘಮಲು, ಬೆಣ್ಣೆ ಕಾಯಿಸಿದ ತುಪ್ಪದೊಂದಿಗೆ ಸವಿದದ್ದು ನೆನೆಸಿಕೊಂಡರೆ ಈಗಲೂ ಬಾಯಲ್ಲಿ ನೀರು ಬರುತ್ತೆ' ಎಂದೆಲ್ಲಾ ವರ್ಣಿಸಿದಾಗ ನಾನು ಎದ್ದು ನಿಂತು 'ನೀವು ಭರ್ಜರಿ ಮದುವೆ ಊಟ ಸವಿದಿರಬಹುದು. ನಮಗೆಲ್ಲಾ ಭರ್ಜರಿ ಸಂಗೀತದ ರಸದೌತಣ ಉಣಬಡಿಸಿದ್ದಾರೆ ಈ ಕಲಾವಿದೆ' ಅಂತ ಹೇಳಿ ಮುಗಿಸಿದ್ದೆ.

ಬೆಂಗಳೂರಿನ ಸಭೆಯೊಂದರಲ್ಲಿ ಪ್ರಖ್ಯಾತ ವಿದ್ವಾಂಸರ ಕಛೇರಿ. ತನಿ ಮುಗಿದ ಬಳಿಕ ಕಾರ್ಯದರ್ಶಿಯವರ ಭಾಷಣ. ಅವರು ಮುಖ್ಯ ಕಲಾವಿದರ ಬಗ್ಗೆ ಹೊಗಳಿ ಮಾತನಾಡಿ, ನಂತರ ಪಿಟೀಲು ಕಲಾವಿದರನ್ನು ಪರಿಚಯಿಸುತ್ತಾ, 'ಇವರು ನಮ್ಮ ಸಭೆಗೆ ಮೊದಲ ಬಾರಿ ಬರುತ್ತಿದ್ದಾರೆ. ವಿದ್ವಾನ್ ತಿರುಪ್ಪಾಕಡಲ್ ವೀರ ರಾಘವನ್ ಅವರು' ಎನ್ನುತ್ತಿದ್ದಂತೆಯೇ ಯಾರೋ ಓಡಿ ಬಂದು ಅವರ ಕಿವಿಯಲ್ಲಿ ಏನೋ ಉಸುರಿದರು. ತಕ್ಷಣ ಕಾರ್ಯದರ್ಶಿಯವರು 'ಅಯ್ಯೋ, ಇವರು ನಮ್ಮವರೇ, ತ್ಯಾಗರಾಜನ್ ಅವರು. ನಮ್ಮ ಸಭೆಯಲ್ಲಿ ಅದೆಷ್ಟು ಬಾರಿ ಪಿಟೀಲಿನಲ್ಲಿ ಸಹಕರಿಸಿದ್ದಾರೆ' ಎಂದು ತಪ್ಪು ಸರಿಪಡಿಸಿಕೊಂಡರು. ಕಲಾವಿದರ ಪರಿಸ್ಥಿತಿ ನೀವೇ ಊಹಿಸಿಕೊಳ್ಳಿ.

ಪ್ರಖ್ಯಾತ ವಿದುಷಿ ಗೌರಿ ಕುಪ್ಪುಸ್ವಾಮಿ ಕಛೇರಿಗೆ ನನ್ನ ಕಸಿನ್ ಒಬ್ಬಳ ಜೊತೆ ಹೋಗಿದ್ದೆ. ಅವಳು ಕೇವಲ ನನಗೆ ಕಂಪೆನಿ ಕೊಡಲು ಬಂದಂತಿತ್ತು. ಅವಳ ಅಮ್ಮ ಆಗಿನ ಕಾಲಕ್ಕೆ ವೀಣೆ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ವಿಜೇತೆ. ಹಾಗಿದ್ದರೂ ಇವಳಿಗೇನೋ ಸಂಗೀತ ಅಷ್ಟಕಷ್ಟೆ. ವಿದುಷಿಯವರ 'ಕಲ್ಯಾಣಿ' ರಾಗಾಲಾಪನೆ ಎಷ್ಟು ಅದ್ಭುತವಾಗಿತ್ತೆಂದರೆ, 'ವ್ಹಾ, ಏನು ಕಲ್ಯಾಣಿನೇ' ಎಂದು ಪಕ್ಕದಲ್ಲಿದ್ದ ಅವಳೊಡನೆ ನನ್ನ ಸಂತಸ ವ್ಯಕ್ತಪಡಿಸಲು ಹೋದರೆ, ತೂಕಡಿಸುತ್ತಿದ್ದ ಅವಳು ಧಿಡೀರನೆ ಎಚ್ಚೆತ್ತು, 'ಅಯ್ಯೋ, ಕಲ್ಯಾಣಿ ಬಗ್ಗೆ ಮಾತಾಡ್ಬೇಡವೆ, ವಿಪರೀತ ಜಂಭ ಅವಳಿಗೆ' ಎಂದು ತನ್ನ ಗೆಳತಿಯ ಬಗ್ಗೆ ಹೇಳುವುದೇ?

ಇಂತಹ ಎಷ್ಟೋ ಅನುಭವಗಳು ಸಂಗೀತಾಸಕ್ತರ ಜೀವನದಲ್ಲಿ. ಆದರೂ, ಗಂಗಾ ಸ್ನಾನ, ತುಂಗಾ ಪಾನ ಎಂಬಂತೆ ಅದರೊಂದಿಗೆ 'ಸಂಗೀತದಿಂದ ಜೀವನ ಪಾವನ' ಅಂತ ನನಗನಿಸುತ್ತದೆ. ನಿಮಗೆ? ■

---




ಮನೆಯಲ್ಲೇ ಸಂಗೀತ ಪ್ರಾಕ್ಟೀಸ್ ಮಾಡ್ಕೊಳ್ರೋ ಅಂದ್ರೆ ಕೇಳ್ತಿಲ್ಲ ಮಕ್ಕಳು...
ಈ 'ಹಾರ್ನ್' ಹಾಕ್ಸಿದ್ ಮೇಲೆ...

# ಎಗ್ಜಾಂ ಹಾಲ್ ತೊರೆದು ಹೋಗುವ ಜೋಗಿಗಳು

**●ಮಾಲಾ.ಮ.ಅಕ್ಕಿಶೆಟ್ಟಿ**

ದ್ವಿತೀಯ ಪಿಯುಸಿ ರೆಗ್ಯುಲರ್ ವಿದ್ಯಾರ್ಥಿಗಳು ಕೊರೊನಾದ ಕೃಪಾಕಟಾಕ್ಷದಿಂದ ಪರೀಕ್ಷೆ ಬರಿಯದೇ ಪಾಸ್ ಆದರು. ಇನ್ನೂ ಇದೆ ಕೊರೋನಾ ಎಕ್ಸನಲ್ ಅಥವಾ ಪ್ರೈವೇಟ್ ಕ್ಯಾಂಡಿಡೇಟಗಳಿಗೆ ಒಲಿದಿರಲಿಲ್ಲ. ಇವರ ಜೊತೆ ಪುಕ್ಕಟ್ಟೆ ಪಾಸಾಗುವುದು ಬೇಡ ಎಂದು ಕೆಲವರು ರಿಜಲ್ಟ್ ರಿಜೆಕ್ಟ ಮಾಡಿದ ವಿದ್ಯಾರ್ಥಿಗಳೂ ಇದ್ದರು. ಇವರೆಲ್ಲರಿಗೆ ಪರೀಕ್ಷೆಯನ್ನು ಸರ್ಕಾರ ನಿಗದಿಪಡಿಸಿತ್ತು. 10:15 ರಿಂದ 1:30ರವರೆಗೆ ಇರೋ ಪರೀಕ್ಷೆಗೆ ರೂಮ್ ಇನ್ವಿಜಿಲೇಟರ್ ಆಗಿ ಕಾರ್ಯನಿರ್ವಹಿಸುವುದು ಎಂದಿನಂತೆ ಇದ್ದೇ ಇತ್ತು. ದಿನವೂ ಐವತ್ತು ಕಿಮೀ ಅಂತರವನ್ನು ಬಸ್‌ನ ಮೂಲಕ ಪ್ರಯಾಣಿಸುವುದು ಬೆನ್ನಿಗಂಟಿದ ಕಾಡುವ ಬೇತಾಳದಂತೆ ಅನಿವಾರ್ಯ. ಕಾಲೇಜಿನವರು 9:30 ಕ್ಕೆ ಇರಬೇಕೆಂದಿದ್ದರು.ಡ್ಯೂಟಿ ಇದ್ದ ದಿನ ಪುಸು ಪುಸು ಎಂದು ತಯಾರಾಗಿ, ದಡದಡ ಓಡಿ ಬಸ್ಸಿಡಿದು ಈ ಮಳೆಗಾಲದಲ್ಲೂ ಬೆವರು ಸುರಿಸುತ್ತಾ 9:40ಕ್ಕೆ ತಲುಪುವುದರಲ್ಲಿ ಉಸ್ ಉಸ್ ಅನ್ನುತ್ತಿದ್ದೆ. ಇವರನ್ನೂ ಸರಕಾರ ಏಕೆ ಪಾಸ್ ಮಾಡಲಿಲ್ಲ ಅನ್ನೋದು ಜೊತೆಗೆ ಎಕ್ಸಾಂ ನಡೆಸೋದೇ ಆಗಿದ್ರೆ ಅವರನ್ನು ಏಕೆ ಪಾಸ್ ಮಾಡಬೇಕಿತ್ತೆಂದು ವಿಚಾರಿಸುತ್ತ, ವಾರ್ನಿಂಗ್ ಬೆಲ್ ಹಾಕಿದ್ದನ್ನು ಅನುಸರಿಸಿ, ನನಗೆ ಅಲೊಟ್ ಆದ ರೂಮ್ಗೆ ಹೋದೆ. ಸೋಷಿಯಲ್ ಡಿಸ್ಟೆನ್ಸ್ ಎಂದು 1 ಬ್ಲಾಕ್ ನಲ್ಲಿ ಬರೀ ಹತ್ತು ಮಕ್ಕಳು. ಮೊದಲು 24 ಹುಡುಗರು ಇರತಿದ್ರು. ರೂಮ್ ಹೊಕ್ಕಾಗ ಇದ್ದದ್ದು ಬರೀ 6 ವಿದ್ಯಾರ್ಥಿಗಳು. ಇನ್ನೂ ಬರಬಹುದೆಂದು ಪರೀಕ್ಷೆಯ ನಿಯಮಗಳನ್ನು ಹೇಳಿ, ಬೇಂಚ್ ಮತ್ತು ಅವರನ್ನು ಚೆಕ್ ಮಾಡಿದೆ. ಕಾಪಿ ಇದ್ದರೆ ಅಪರಾಧವೆಂದು, ಕಾರ್ಯಕ್ರಮಗಳು ಕಡಿಮೆಯಾದ ಈ ಕರೋನಾದಲ್ಲಿ ನನ್ನ ಸಣ್ಣ ಭಾಷಣವೂ ಆಯಿತು. ಸರಿಯಾಗಿ 10:15ಕ್ಕೆ ಕ್ವೆಶ್ಚನ್ ಪೇಪರ್ ಕೊಟ್ಟು ಹಾಲ್ ಟಿಕೇಟ್ಗೆ ಸಹಿ ಹಾಕಲಾರಂಭಿಸಿದೆ. ಇನ್ನೂ 4 ವಿದ್ಯಾರ್ಥಿಗಳ ಸುಳಿವಿಲ್ಲ. 10:30 ಗೆ ಆನ್ಸರ್ ಶೀಟ್ ಕೊಟ್ಟು, ನೋಂದಣಿ ಸಂಖ್ಯೆ, ಸಬ್ಜೆಕ್ಟ್, ಸಬ್ಜೆಕ್ಟ್ ಕೋಡ್ ಹಾಕುವಂತೆ ಹೇಳಿ ಬಾಗಿಲ ಕಡೆ ನೋಡಿದಾಗ ಒಬ್ಬ ಬಂದು ತನ್ನ ಬೇಂಚಿನಲ್ಲಿ ಕೂತ. ಅವನಿಗೆ ಕ್ವೆಶ್ಚನ್ ಪೇಪರ್ ಹಾಗೂ ಆನ್ಸರ್ ಶೀಟ್ ಕೊಟ್ಟೆ. ಇನ್ನೂ 3 ಇಲ್ಲ. ಹತ್ತು ವರ್ಷದ ಸರ್ವಿಸ್ ನಲ್ಲಿ ಹೀಗೆ ಆಗಿರಲಿಲ್ಲ.

10:45ಕ್ಕೆ ಒಬ್ಬ ಬಂದ. "ಯಾಕ ಲೇಟ್" ಅಂದ್ರೆ," ಬಸ್ ಬಾಳ ರಷ್ ಇತ್ತು.. ಡ್ರೈವರ್ ಲೇಟ್ ಬಂದರಿ" ಅಂದ.

"ಯಾವೂರು?" ಅಂದಾಗ "ಕಿತ್ತೂರಿಂದ ಬಂದ್ನಿ ಮೇಡಂ" ಅಂದ. ಬೈಲಹೊಂಗಲಕ್ಕೆ ಕಿತ್ತೂರಿನಿಂದ ಸ್ವಲ್ಪ ಬಸ್ ಕಡಿಮೆಯೇ. ಹೀಗಾಗಿ ಲೇಟ್ ಆಗಿರಬಹುದೆಂದೆ. ಇನ್ನೊಂದಿಷ್ಟು ನಿಮಿಷ ಅಂದ್ರೆ 10:55 ಕ್ಕೆ ಇನ್ನೊಬ್ಬ ಬಂದ. ಅವನಿಗೂ ಹೀಗೆ ಕೇಳಿದಾಗ ಕಿತ್ತೂರದಿಂದ ಅಂದ."ಇಲ್ಲೊಬ್ಬ ಈಗ ಹತ್ತು ನಿಮಿಷದ ಹಿಂದೆ ಕಿತ್ತೂರದಿಂದಲೇ ಬಂದ. ನೀನ್ಯಾಕೆ ಲೇಟ್?" ಅಂದ್ರೆ "ಇಲ್ಲ ಮೇಡಂ ಅಲ್ಲೊಬ್ರು ತೀರಕೊಂಡಿದ್ರು, ಹೋಗಿದ್ದೆ" ಅಂದ.

ಪರೀಕ್ಷೆಗೆ ಅರ್ಧಗಂಟೆವರೆಗೆ ಪರವಾನಗಿ ಇದ್ದಾಗ ಏನೂ ಅನ್ನುವಂತಿಲ್ಲ.

ಒಬ್ಬ ಗೈರ ಇದ್ದ.11:00 ಆದ್ರೂ ಬರಲಿಲ್ಲ. ಇಬ್ಬರಿಗೂ ಕ್ವೆಶ್ಚನ್ ಪೇಪರ್ ಮತ್ತು ಆನ್ಸರ್ ಪೇಪರ್ ಕೊಟ್ಟು, ನಾನು ಸಹಿ ಮಾಡುವಲ್ಲಿ ಮಾಡಿ ಅವರಿಗೂ ಸಹಿ ಮಾಡುವಂತೆ ಹೇಳಿ, ವಾಸ್ಕೋಡಿಗಾಮ್ ಸುತ್ತ ಹಾಕುವಂತೆ ಇಡೀ ರೂಮ್ ಸುತ್ತ ಹಾಕತೊಡಗಿದೆ. ನಂತರ ನೋಂದಣಿ ಸಂಖ್ಯೆ ಸರಿಯಾಗಿ ಬರೆದಿದ್ದನ್ನು ಖಚಿತ ಪಡಿಸಿಕೊಂಡು, ಹಾಳೆಯಲ್ಲಿ ಅವರ ನೋಂದಣಿ ಸಂಖ್ಯೆ,ಆನ್ಸರ್ ಪೇಪರ್ ನಂ ಬರೆದೆ, ನನ್ನ ಸಹಿ, ಅವರ ಸಹಿ ಮಾಡಿದ್ದಾಯಿತು.ಅಲ್ಲಿ ಇಲ್ಲಿ ಒಂದಿಷ್ಟು ಬಂದರುಗಳೆಂಬ ವಿರಾಮ ತೆಗೆದುಕೊಂಡು ಮತ್ತೆ ಹಡಗು ಚಲಾಯಿಸುತ್ತಿದ್ದೆ.

ರೌಂಡ್ಸ್ ತೆಗೆದುಕೊಳ್ಳುವಾಗ ಹುಡುಗರನ್ನು ಬಾಗಿಲನ್ನು, ಕಿಡಕಿಗಳನ್ನು, ಬೆಂಚುಗಳನ್ನು ಬರೆಯುವುದನ್ನು ನೋಡುತ್ತಾ ನಿಂತು ಕಾಪಿ ಮಾಡುತ್ತಿಲ್ಲವೆಂದು ಖಚಿತಪಡಿಸಿಕೊಳ್ಳುತ್ತಿದ್ದೆ. ಕೆಲವು ಸಲ ನಾವು ನಮ್ಮ ಶರ್ಲಾಕ್ ಹೋಮ್ಸನ ವ್ಯಕ್ತಿತ್ವದಿಂದ ಸಂಶಯಪಟ್ಟ ವಿದ್ಯಾರ್ಥಿಗಳಲ್ಲಿ ಕಾಪಿ ಇರೋದೇ ಇಲ್ಲ, ಅದು ಸಿಗೋದು ಮತ್ತೊಬ್ಬನ ಹತ್ತಿರ.ಆತ ನಮ್ಮ ಕಣ್ಣಲ್ಲಿ ರಾಮ್ ಆಗಿರತಾನೆ. ಕಾಪಿ ಸಿಕ್ಕಾಗ ರಾವಣನಾಗಿ ಬದಲಾವಣೆ ಆಗತಾನೆ. 12:00ಕ್ಕೆ ಹತ್ತು ನಿಮಿಷ ಉಳಿದಿತ್ತು, ಮೊದಲನೇ ಬೆಂಚಿನಲ್ಲಿ ಕುಳಿತವ ನನ್ನನ್ನೇ ನೋಡುತ್ತಿದ್ದ. ನಾನು ನೋಡಲು ಶುರುವಿಟ್ಟಾಗ ನೋಟ ಬದಲಾಯಿಸುತ್ತಿದ್ದ. ಇದು 3 ಬಾರಿ ಆಯಿತು. ಬಾಗಿಲಿಗೆ ಆಧಾರವಾಗಿ ನಿಂತು ಅವನನ್ನು ನೋಡಿದೆ. ಮುಖದಲ್ಲಿ ಬೇಸರ, ಹೇಳಲಾರದ ನೋವು. ದೃಷ್ಟಿ ಎದುರಿಸದೇ ಕೆಳಗೆ ನೋಡುವ ಆತನದು ಕುತೂಹಲ ವ್ಯಕ್ತಿತ್ವ. ಏನೋ ಹೇಳಬೇಕು ಅನ್ನುತ್ತಿದ್ದಾನೆ  ಆದರೆ ಆಗುತ್ತಿಲ್ಲ. ಸಂಪೂರ್ಣ ಧೈರ್ಯತುಂಬಿ ಕೈಯಿಂದ ಪೇಪರ್ ಎತ್ತಿ ಕೊಡುವಂತೆ ವರ್ತಿಸಿದ. "ಏನು?" ಎಂದಾಗ "ನಾನು ಹೋಗ್ತಿನಿ ಮೇಡಂ ನನ್ನನ್ನು ಬಿಡಿ" ಎಂದ. "ಅಲ್ಲಾ ಈಗ ಬರೀ 12:00 ಆಗಲಿಕ್ಕೆ ಬಂದದ. ಇನ್ನೂ ಟೈಮ್ ಅದ.ಬರಿಯಲಾ" ಎಂದು ಮೆಲ್ಲಗೆ, ಇತರ ಹುಡುಗರಿಗೆ ತೊಂದರೆ ಆಗದಂತೆ ಅಂದಾಗ, "ಮೆಡಮ್ ಏನೂ ಬರೆಯಲು ಆಗಲ್ಲ ನನ್ನನ್ನು ಬಿಟ್ಟುಬಿಡಿ" ಎಂದು ಜಗತ್ತಿನ ಎಲ್ಲರ ಸಪ್ಪೆ ಮುಖವನ್ನು ಹೊತ್ತು ಕಳಕಳಿಯಿಂದ ಕೇಳಿದ. ನಿನ್ನ ಕ್ವೆಶನ್ ಪೇಪರ್ ಇಲ್ಲೇ ಕೊಡಬೇಕಾಗುತ್ತೆ ನಿನ್ನ ಜೊತಿ ಒಯ್ಯಾಕ ಕೊಡಲ್ಲ" ಅಂದಾಗ "ಕ್ವೆಶ್ಚನ್ ಪೇಪರ್ ಬೇಡ ನನಗೆ" ಅಂದು ಕೊಟ್ಟು ಎದ್ದುನಿಂತು "ಹೋಗುತ್ತೇನೆ ಮೇಡಂ" "ಹೋಗ್ಲೇ ಬೇಕಾ?" ಅಂದಾಗ "ಹುಃ" ಅಂದ. "ಆಯ್ತು ಹೋಗು" ಎಂದು ಪೇಪರ್ ಕೊಟ್ಟಿದ್ದರ ಬಗ್ಗೆ ಸಹಿ ತೆಗೆದುಕೊಂಡು ಆನ್ಸರ್ ಪೇಪರ್ ಮತ್ತು ಕ್ವೆಶ್ಚನ್ ಪೇಪರ್ ತೆಗೆದುಕೊಂಡು ಕಳುಹಿಸಿದೆ.

ಇನ್ನೂ 5 ನಿಮಿಷವೂ ಕಳೆದಿರಲಿಲ್ಲ, ಇನ್ನೊಬ್ಬ ಅದೇ 15 ನಿಮಿಷ ಲೇಟ್ ಬಂದಿದ್ದನಲ್ಲ ಅವನೆದ್ದು ನಿಂತು "ಮೇಡಂ ನಾನೂ ಹೋಗ್ತಿನಿ. ಪೇಪರ್ ತಗೊಳ್ಳಿ" ಅಂದ." ಅಲ್ಲಾ ಇನ್ನೂ ಎಷ್ಟ ಟೈಮಿದೆ, ಬರಿಯಲಾ" ಎಂದು ಸಾವಕಾಶವಾಗಿ ನುಡಿದೆ."ಇಲ್ಲ ಮೇಡಂ, ಇನ್ನೂ ಬರಿಯಾಕ ಆಗಲ್ಲ" ಅಂದ. "ಹೌದು ನೀ ಯಾಕ್ ಪಿಯುಸಿ ಎಕ್ಸ್ಟರ್ನಲ್ ಕಟ್ಟಿದಿಯಾ" ಪ್ರಶ್ನಿಸಿದಾಗ "ಗೌರ್ಮೆಂಟ್ ಜಾಬ್ ಗೆ ಬೇಕಿತ್ತು. ತಿಳಿದಷ್ಟು ಬರೆದಿದ್ದೇನಿ" ಎಂದ. "ಓಹ! ಇನ್ನಷ್ಟು ಬರೆಯಬಹುದಿತ್ತಲ್ಲ", "ಮೇಡಂ ನಂದು ಐಟಿಐ. ಅದರ ಮ್ಯಾಲ ಡಿಗ್ರಿಗೆ ಎಡ್ಮಿಷನ್ ತಗೋಬಹುದು.ಇವತ್ತ ಎಡ್ಮಿಷನ್ ಮಾಡಿ ಹೋಗುತ್ತೇನೆ. ಅದಕ್ಕೆ ಹೋಗ್ತೀನಿ ಅಂದಿದ್ದು" ಎಂದ. "ಆಯ್ತಪ್ಪ ಇಲ್ಲಿ ಸಹಿ ಮಾಡು ಕ್ವೆಶ್ಚನ್ ಪೇಪರ್ ಬಿಟ್ಟು ಹೋಗು" ಎಂದು ಈ ಎರಡನೇಯವನನ್ನೂ ಕಳುಹಿಸಿದೆ. ಮತ್ತೆ ಅದೇ ವಾಸ್ಕೋಡಿಗಾಮನ ಹಡಗನ್ನು ತಳ್ಳುತ್ತಾ ಬಂದರುಗಳನ್ನು

ಆಗಾಗ ತಲುಪುತ್ತಿದ್ದೆ.

"ಮೇಡಂ ಟೈಮ್ ಎಷ್ಟಾತ್ ರೀ?" ಅಂತ ಒಬ್ಬ ಕೇಳಿದ."12:10 ಆಯ್ತು" ಅಂದೆ. "ಅಷ್ಟಾತಾ? ನಾನು ಹೋಗೋ ಟೈಮ್ ಆತು" ಅಂದ. ಟೈಮ್ ಆತು ಅಂದ್ರೆ ಏನು ಎಂದು ಯೋಚಿಸತೊಡಗಿದೆ. ಹಿಂದೆ 2 ದಿನ ಆಧ್ಯಾತ್ಮಿಕ ಉಪನ್ಯಾಸದ ಪ್ರಭಾವ ಜಾಸ್ತಿಯಾಗಿ, ಟೈಮ್ ಆತು ಹೋಗಬೇಕು ಅನ್ನೋದು ನನ್ನನ್ನು ಎಲ್ಲೆಲ್ಲೋ ಕರೆದೊಯ್ದಿತು. "ಹಂಗಂದ್ರ ಏನಪಾ?" ಅಂದಾಗ, "ಮೇಡಂ, ನಾನು ಪ್ರತಿ ಪೇಪರ್ 12:00ವರೆಗೆ ಅಷ್ಟೇ ಬರೀತೀನಿ. ಇವತ್ತು ಹತ್ತು ನಿಮಿಷ ಜಾಸ್ತಿ ತಗೊಂಡ್ನಿ.ಇನ್ನ ನಾ ಹೊರಗ ಹೋಗಬೇಕ್" ಅಂದ. "ಅಲ್ಲೋ, ಅವಾಗಿಂದ ನೋಡಾಕತೆನಿ ಭಾರಿ ಕಾನ್ಸಂಟ್ರೇಟ್ ಮಾಡಿ ಬರಿಯಾತಿ, ಓದಿ ಅನಸ್ತದ. ಇನ್ನಷ್ಟು ಬರೀ ಬಹುದಲ್ಲಾ" ಅಂದಾಗ, "ಮೇಡಂ ನನ್ನ ತಲ್ಯಾಗ ಇದ್ದದ್ದೆಲ್ಲಾ ಸೊಸೇನಿ. ಇನ್ನಷ್ಟ ವಿಷಯ ಇಲ್ಲ" ಅಂದಾಗ, "ಹೌದು ಹಂಗಾರ ನಾನು ಇನ್ನಷ್ಟ ಸೊಸಾಕ ತಯಾರಿಲ್ಲ ಬಿಡಪಾ. ಹೌದು ನೀ ಯಾಕ ಈ ಕರೋನಾದಾಗ ಎಕ್ಸ್ಟನಲ್ ಕಟ್ಟಿದಿ" ಅಂದ್ರ "ಮೇಡಂ ಈ ಕರೋನಾದಿಂದ ನಾ ಪಿಯುಸಿ ಫಸ್ಟ್ ಇಯರ್ ಪಾಸಾದೆ" ಅಂದ. "ಅಂದ್ರೆ ಏನೋ?"

"ಮೇಡಂ ನನ್ನ ಹತ್ತನತ್ತೆ 82% ಆಗೇತಿ ಅಂತ ಮನ್ಯಾಗಿನವರ ಒತ್ತಾಯದಿಂದ ಸೈನ್ಸಿಗೆ ಹಚ್ಚಿದ್ರ. ನಾ ಒಂದ ವಾರ ಅಗದಿ ಸಿನ್ಸೀಯರಾಗಿ ಬಂದೆ. ಒಂದೂ ಸೈನ್ಸ್ ಪದ ತಲ್ಯಾಗ ಹೊಕ್ಕಲಿಲ್ಲ. ಎಲ್ಲಾ ತೆಲಿ ಮ್ಯಾಲ ಕುಂತ, ಕುಣದ ಹೋದವು. ಎಂಟನೇ ದಿನದಿಂದ ಕಾಲೇಜು ಬರ್ಲಿಲ್ಲ. ಫೇಲ್ ಆದ್ರೆ ಆತ. ಇಂಟರೆಸ್ಟ್ ಇಲ್ಲದ ತಗೊಂಡ ಏನ್ ಮಾಡ್ಲಿ ಮೇಡಂ? ಅವಾಗ ಈ ಕೊರೊನಾ ಬಂತ ನೋಡ್ರಿ, ಎಲ್ಲಾ ಪಿಯುಸಿ ಫಸ್ಟ್ ಇಯರ್ ವಿದ್ಯಾರ್ಥಿಗಳನ್ನ ಪಾಸ್ ಮಾಡಿದ್ರ. ಇನ್ನು ಎರಡನೇ ವರ್ಷ ಸೈನ್ಸ್ ಹಚ್ಚಲಿಲ್ಲ. ಗ್ಯಾರಂಟಿ ಫೇಲ್ ಅಂತ ಗೊತ್ತಿತ್ತ. ಅದಕ್ಕೆ ಎಕ್ಸ್‌ಟರ್ನಲ್ ಆರ್ಟ್ಸ್ ಮಾಡಿದೆ. ಎಕ್ಸಾಂ ಕಟ್ಟಿದೆ. ಮನ್ಯಾಗ ಎಷ್ಟ ತಿಳಿತದೋ ಅಷ್ಟ ಅಭ್ಯಾಸ ಮಾಡಿ, ಚಾಣಗಿ ಸೊಸೆನಿ" ಅಂದ." ಹೌದಾ, ಹಂಗಾರ ನೀ ಹೋಗ್ಬೇಕಂದ್ರ ಹೋಗಪಾ. ಇಲ್ಲಿ ಸಹಿ ಮಾಡಿ, ಕ್ವೆಶ್ಚನ್ ಪೇಪರ್, ಆನ್ಸರ್ ಪೇಪರ್ ಇಡ. ಇನ್ನೊಂದಿಷ್ಟ ಬರದಿದ್ರ ಪಾಸ್ ಆಗ್ತಿದ್ದೀನೋ ಅನಿಸ್ತ" ಅಂದಾಗ, "ಮೇಡಂ ಈಗ ಏನು ಬರದೆನಲ್ಲಾ, ಅದ್ರಿಂದ ನಾ ಗ್ಯಾರಂಟಿ ಪಾಸ್ ಆಗಬೇಕ. ಅಷ್ಟ ಅಂತಿ ಕರೆಕ್ಟ ಬರದೇನಿ" ಅಂದ. ಅವನ ಆತ್ಮವಿಶ್ವಾಸವನ್ನು ನೋಡಿ ಅಷ್ಟೇ ಹೆಮ್ಮೆಪಟ್ಟು ಹೋಗಲು ಪರವಾನಿಗೆ ಕೊಟ್ಟೆ.

ವಾಸ್ಕೋಡಿಗಾಮನ ಪರ್ಯಟನೆ ಮುಂದುವರಿಯಿತು ಸ್ವಲ್ಪ ಖುಷಿಯಲ್ಲಿ. ಇನ್ನೇನು 1 ಗಂಟೆಯಷ್ಟೇ ಉಳಿದಿರೋದು ಸುಪರ್ ವಿಜನ್ ಮುಗಿಯಿತೆಂದು. ಸರಿಯಾಗಿ 12:30ಕ್ಕೆ ಕಿತ್ತೂರಿನಿಂದ ಲೇಟ್ ಬಂದವ ಯಾರೋ ತೀರಿಕೊಂಡಿದ್ದರು ಅಂದಿದ್ರಲ್ಲಾ ಅವನೂ ನನ್ನನ್ನು ಕರೆದು "ಮೇಡಂ ಪೇಪರ್ ತಗೊಳ್ರಿ, ಹೋಗ್ತೀನಿ" ಅಂದ್ರು. ಸ್ವಲ್ಪ ದೊಡ್ಡವರಂತೆ ಕಂಡರು. ದೊಡ್ಡೋರು ಅಂದಾಗ ಮೂವತ್ತು ನಲವತ್ತು ವಯಸ್ಸು ಅಲ್ಲ. ಸಾಮಾನ್ಯವಾಗಿ 18 ರಿಂದ 22 ವರೆಗೆ ಇದ್ದವರು ಹೆಚ್ಚು ಎಕ್ಸ್ಟನಲ್ ಎಗ್ಜಾಂ ಬರಿತಾರೆ.ಇವರು ಇಪ್ಪತ್ತೈದು ದಾಟಿರಬಹುದೆಂದು ಅನಿಸ್ತು. ಬೆಂಚ್ ಹತ್ತಿರಕ್ಕೆ ಹೋಗಿ, ನಿಧಾನಕ್ಕೆ"ಯಾಕೆ ಇನ್ನಷ್ಟ ಬರಿಬಹುದಲ್ಲಾ?. ಈಗ 12:30" ಅಂದೆ." ಇಲ್ಲ ಮೇಡಂ, ನಾನು ಪಾಸ್ ಆಗುವಷ್ಟು ಬರದಿನಿ. ಕೆಲವರು ಪಿಯುಸಿ ಮಾಡಕೊ ಅಂದಿದ್ರು. ಅದಕ್ಕೆ ಬ್ಯುಸಿ ಇದ್ದರೂ ಓದಿಕೊಂಡು ಬರದೆನಿ. ಪಾಸಾಗ್ತೆನಿ. ಮತ್ತೆ

ನಂದು ಎಂಟನತ್ತೆವರೆಗೂ ಸಂಸ್ಕೃತ. ಅದರ ಬೇಸ್ ಮ್ಯಾಲೆ B.A ಸಂಸ್ಕೃತ ಆಗಿದೆ. M.A. ಫಿಲೋಸಫಿ ಮುಗಿಸಿದಿನಿ. ಮೈಸೂರು ಯುನಿವರ್ಸಿಟಿಯಿಂದ ಪಿಎಚ್ ಡಿಗೆ ಪ್ರಯತ್ನ ಮಾಡ್ತಾ ಇದ್ದಿನಿ. ಅದರ ಮ್ಯಾಲ ನನಗ ಜಾಬ್ ಸಿಗಬಹುದು ಅಂತ ಆಸೆ ಅದ. ಪಿಯುಸಿ ಹಂಗ ಬರದಿನಿ. ನಾನು ಐಳಗೋಳರಾಂವ, ಸಂಸ್ಕೃತದ ಬಗ್ಗೆ ಒಲವಿತ್ತ" ಎಂದು ನಾನು ಯಾಕೆ ಸಂಸ್ಕೃತ ಓದಿದ್ರಿ ನಮ್ಮ ಕಡೆ ಇದರ ಬಗ್ಗೆ ಕಾಳಜಿಯಿಲ್ಲ ಎಂದು ಕೇಳಿದ್ದಕ್ಕೆ ಹಿಂಗ್ ಉತ್ತರ ಕೊಟ್ಟಿದ್ರು. ಅರೆ ವಾವ್!!! ಅಂದಿತ್ತು ಮನ. ನೋಡಿದ್ರೆ ಎಕ್ಸ್‌ಟರ್ನಲ್ ಇದ್ರೂ ಏನೇನ್ ಡಿಗ್ರಿ ಮಾಡಿಕೊಂಡಿದ್ದಾರೆ ಅನಿಸಿತ್ತು. ರೂಮ್ ಒಳ ಬಂದ ಕೂಡಲೇ ಯಾಕ್ ಲೇಟ್ ಅಂದಾಗ ಅಲ್ಲೊಬ್ಬ ತೀರಿಕೊಂಡಿದ್ರ ಅನ್ನೋದರ ಉತ್ತರ ನನಗ ಸಿಕ್ಕಿತ್ತು." ಆಯ್ತು ಕ್ವೆಶ್ಚನ್ ಪೇಪರ್ ಮತ್ತು ಆನ್ಸರ್ ಪೇಪರ್ ಇಡ್ರಿ" ಅಂದು ಅನುಮತಿ ಕೊಟ್ಟೆ. ಸರಸರನೆ ರೂಮ್ ನಿಂದ ಹೊರಗೆ ಹೋದರು.

12:50 ಆಗಿತ್ತು. ಇನ್ನೇನು ಬರೀ ನಲವತ್ತು ನಿಮಿಷ ಅಂದ್ರೆ ಮತ್ತೊಬ್ಬ ಎದ್ದು "ಪೇಪರ್ ತಗೊಳ್ಳಿ ಮೇಡಂ" ಅಂದ. ನಾನು ಮತ್ತದೇ ಪಲ್ಲವಿ ಇನ್ನೊಂದಿಷ್ಟು ಬರಿಯೆಂದು ಹಾಡಿದೆ." ಇಲ್ಲ ಮೇಡಂ ನನಗೆ ಸ್ವಲ್ಪ ಹುಷಾರಿಲ್ಲ.ಓದಿದ್ದ ಅಷ್ಟನ್ನೂ ಬರದೆನಿ. ಪಾಸಾಗ್ತಿನಿ" ಅಂದ. ಅವನು ಹೇಳಿದ ಹಾಗೆ ನಮಗೆಲ್ಲಾ ಸ್ವಲ್ಪ ಶೆಕೆ ಎನಿಸಿದರೆ ಆತ ಸ್ವೆಟರ್ ಹಾಕಿದ್ದ. ವೀಕ ಅನಿಸಿದ." ಯಾಕ್ ಎಕ್ಸ್ಟನಲ್ ಎಕ್ಸಾಂ"ಅಂದ್ರ," ಹತ್ತನತ್ತೆ ಆದ ನಂತರ ದೊಡ್ಡಪ್ಪನ ಅಗ್ರಿಕಲ್ಚರ್ ಆಫೀಸ್ನಲ್ಲಿ ಕುಳಿತು ಅಲ್ಲಿಯ ಎಲ್ಲಾ ವ್ಯವಹಾರ ಕಲಿತೆ. ಕೃಷಿಕರಿಗೆ ಬೇಕಾದ ಎಲ್ಲ ಸಾಮಾನುಗಳ ಮಾಹಿತಿ, ಉಪಯೋಗ ಅವರಿಗೆ ಹೇಳುವುದರಲ್ಲಿ ಬ್ಯೂಜಿ ಆದೆ. ಹೀಗಾಗಿ ಕಾಲೇಜಿಗೆ ಹಚ್ಚದೆ ನೇರವಾಗಿ ಪಿಯುಸಿ ಎಕ್ಸಾಮ್ ಕಟ್ಟಿದಿನಿ" ಅಂದ. ಅವನದು ಅವಶ್ಯಕ ಸಹಿ, ಪೇಪರ್ ಪಡೆದು ಕಳುಹಿಸಿದೆ.

3:15 ನಿಮಿಷದ ಸುಪರ್ ವಿಜನ್ ಕೆಲಸದಲ್ಲಿ ಕೊನೆಗೆ 4 ವಿದ್ಯಾರ್ಥಿಗಳು ಇದ್ದರು.ಅವರು ಸಂಪೂರ್ಣವಾಗಿ ಮುಗಿಯುವವರೆಗೂ ಬರೆದು ಪೇಪರ್ ಕೊಟ್ಟರು. ಪೇಪರ್ ಕಲೆಕ್ಟ್ ಮಾಡಿ ಹೊರ ಬರುವಾಗ ಒಬ್ಬ "ಮೇಡಮ್ ಮೊದಲ್ ಹುಡುಗ ಹೋದನಲ್ರೀ, ಆತ ಪ್ರತಿ ಎಗ್ಜಾಂ ನನ್ ಮುಂದ ಬಂದಾನ್ರೀ. ಯಾವ್ ಪೇಪರ್ರೂ ಏನೂ ಬರೆದಿಲ್ಲ. ಕರೆಕ್ಟ 11:30 ಗೆ ಹೊರಗ ಹೋಗಿದಾನ. ಯಾಕಾದ್ರೂ ರೊಕ್ಕ ಹಾಕಿ ಪೇಪರ್ ಕಟ್ಟತಾರೋ ದೇವರಿಗೇ ಗೊತ್ತ. ಎಲ್ಲಾ ವೇಸ್ಟ್ ನೋಡ್ರಿ "ಅನ್ಕೊಂತ ನನ್ನ ಜೊತೆ ಬಂದ. "ಹುಃ ,ಹೌದು ನಿಜ. ನೀವು ಏನ್ ಮಾಡ್ಕೊಂಡಿದೀರಿ?" ಅಂದಾಗ "ನಾನು ಡಿಪ್ಲೊಮಾ ಮೆಕ್ಯಾನಿಕಲ್ ಇಂಜಿನಿಯರ್, ಪುಣೆಯಲ್ಲಿ ವರ್ಕ್ ಮಾಡ್ತಿನಿ. ಮನೆಯಿಂದ ದೂರ ಇದ್ದು ಬೇಜಾರಾಗೆದ್ರಿ. ಪಿಯುಸಿ ಸೆಕೆಂಡ್ ಇಯರ್ ಮಾಡ್ಕೊಂಡು ಡಿಗ್ರಿ ಮಾಡ್ಕೊಂಡು ಇಲ್ಲೆ ಕರ್ನಾಟಕದಲ್ಲೆ ಏನಾದ್ರೂ ಕೆಲಸ ಮಾಡಬೇಕೆಂದು ಎಕ್ಸಾಂಗೆ ಬಂದೆ" ಎಂದ.ಆತ 10:15 ರಿಂದ 1:30 ರವರೆಗೆ ತಲೆ ಕೆಳ ಹಾಕಿ ಬರೆದ ವ್ಯಕ್ತಿ. ರೂಮ್ ತೆರೆದು ಹೋಗುವುದರಲ್ಲಿ ಉಳಿದಿದ್ದ ಈ 4 ಜನ ನಿಜಕ್ಕೂ ಗಂಭೀರದಿಂದ ಪೇಪರ್ ಬರೆದುಕೊಟ್ಟಿದ್ದರು. ಎಕ್ಸರ್ನಲ್ ಎಕ್ಸಾಮ್ ಕೆಲವರಿಗೆ ಶಿಕ್ಷೆಯಾಗಿದ್ದರೆ ಇನ್ನೊಬ್ಬರಿಗೆ ಗಂಭೀರ ವಿಷಯವಾಗಿದ್ದು, ಸ್ವತಃ ಓದಿ, ತಿಳಿದುಕೊಂಡು ಬರೆಯುವ ಜವಾಬ್ದಾರಿ ಅವರ ಮೇಲಿತ್ತು. ಅರಿತು ನಡೆದವರಿಗೆ ಎಲ್ಲವೂ ಸರಳ ಅನ್ನೋದು ಎಚ್ಚರಿಸಿದಂತಿತ್ತು. ■

# ವೈರಸ್ ಅಫ್ ದಿ ಇಯರ್

**●ಇ. ಆರ್. ರಾಮಚಂದ್ರನ್**

ಅವ್ರೆಲ್ಲಾ ಝೂಮ್ನಲ್ಲಿ ಅವ್ರ ಬಾಸ್ ಜೊತೆ ತಮ್ಮ ತಮ್ಮ ಎಕ್ಸ್ಪೀರಿಯೆನ್ಸ್ ಶೇರ್ ಮಾಡ್ತಿದ್ರು..

'ನಾನು ಎಲ್ರಿಗಿಂತ ಮೊದಲು ಬಂದೆ. ವೂಹಾನ್ ಲ್ಯಾಬೋನಿಂದಲೋ ಬಾವಲಿ ತಿನ್ನುತ್ತಿರುವ ಹುಡುಗಿಯಿಂದಲೊ ಅದು ಇನ್ನೂ ಸರಿಯಾಗಿ ಗೊತ್ತಿಲ್ಲ..ಅಷ್ಟು ಹೊತ್ತಿಗೆ ಎಲ್ಲಾರೂ ಲಬೋ ಲಬೋ ಅಂತ ಶುರು ಮಾಡಿದ್ರು.'

'ನೀನು ಎಲ್ಲಿಂದ ಹೇಗೆ ಬಂದೇಂತ ನಿನಗೇ ಗೊತ್ತಿಲ್ವ? ಬಂದು 2 ವರ್ಷ ಆಗ್ತಾ ಇದೆ ?'

' ಅದು ದೊಡ್ಡ ಕನ್ಫ್ಯೂಷನ್ ಸಾರ್.. ಈಗ್ಲೂ ಯಾರ್ಗೂ ಸರಿಯಾಗಿ ಗೊತ್ತಿಲ್ಲ.. ಲಟಾಲಟಿ ನಡೀತಾ ಇದೆ.'

' ಸರಿ ಬಂದ ಮೇಲೆ ಏನ್ಮಾಡ್ದೆ?'

' ಚೈನಾಲಿ ನನ್ನ ಯಾರೂ ನೋಡಕ್ಕೆ ಬರ್ಲಿಲ್ಲ. ಅಲ್ಲಿ ಏನಾಗ್ತಿದೆ ಅಂತ ನನಗೂ ಗೊತ್ತಿಲ್ಲ. ಆಮೇಲೆ ನಾನು ಯಾರೂಂತ ಗೊತ್ತಾಗಿ ಒಬ್ಬ ಅದನ್ನ ಹೇಳಿದ್ದಕ್ಕೆ ಅವನನ್ನ ಹೊಡೆದುಹಾಕಿ ಬಿಟ್ರು...ಹೂ ( ಇಂಗ್ಲಿಷ್‌ನಲ್ಲಿ ಡಬ್ಲು ಎಚ್ ಒ) ನಮ್ಮ ಫ್ಯಾಮಿಲಿಗೆ ಕೋವಿಡ್ 19 ಅಂತ ಹೆಸರು ಕೊಟ್ಟು ನನಗೆ ಆಲ್ಫ ಅಂತ ನಾಮ್ಕರಣ ಮಾಡಿದ್ರು...ನನ್ನ ಯಾರೂ ನೋಡಿಲ್ಲ. ನಾನೂ ಯಾರಿಗೆ ಅಂಟುಕೊಂಡಿದ್ನೋ ಅವ್ರನ್ನ ನೋಡಿ ಎಲ್ಲಾರೂ ಓಡಕ್ ಶುರು ಮಾಡಿದ್ರು..'.

'ಆಮೇಲೆ'?

'ನನಗೆ ಅಮೇರಿಕಾದಲ್ಲಿ ಭವ್ಯವಾದ ಸ್ವಾಗತ ಸಿಕ್ತು. ಅಲ್ಲಿನ ಪ್ರೆಸಿಡೆಂಟ್ ಟ್ರಮ್ಪ್ ಅವರೇ ಖುದ್ದಾಗಿ ನನ್ನನ್ನು ಬರಮಾಡಿಕೊಂಡರು. ಅಲ್ಲಿ ನ್ಯೂಯಾರ್ಕ್, ಕ್ಯಾಲಿಫೋರ್ನಿಯದಲ್ಲಿ ನಾ ಹೋದ ಕಡೆಯೆಲ್ಲಾ ಜನಗಳು ನನ್ನ ನೋಡಕ್ಕೆ ಬಂದ್ರು... ಜನಗಳು ಇದ್ದ ಕಡೆಯೆಲ್ಲಾ ನಾನೂ ತಪ್ಪದೆ ಹೋಗ್ತಿದ್ದೆ! ಅವರ ಪಬ್ಬಲ್ಲಿ, ಬೀಚಲ್ಲಿ, ಮಾಲಲ್ಲಿ ಎಲ್ಲಾ ಕಡೆ ಜನವೋ ಜನ! ನಾನು ಎಷ್ಟು ಫೇಮಸ್ ಆದೇ ಅಂದ್ರೆ ಒಬ್ಬ ಇಟಾಲಿಯನ್ ನನ್ನನ್ನು ತನ್ನ ದೇಶಕ್ಕೆ ಕರೆಕೊಂಡು ಹೋಗಿ ಎಲ್ಲರಿಗೂ ಗುರ್ತು ಮಾಡಿಸಿದಳು! ಇಂಗ್ಲೆಂಡಲ್ಲಿ ಪಿ ಪಿ ಇ ಕಿಟ್ ಸಿಕ್ಲಿಲ್ಲಾಂತ ಡಾಕ್ಟರ್ ಮತ್ತು ನರ್ಸಗಳು ಬಹಳ ಪರದಾಡ್ತಾ ಇದ್ರು.'

'ಇಂಡಿಯಾದಲ್ಲಿ ಹೇಗಿತ್ತು ನಿನ್ನ ಪ್ರಯಾಣ'.

' ನಾನು ಅಲ್ಲೆಲ್ಲಾ ಸುತ್ತಿ ಇಲ್ಲಿಗೆ ಬಂದೆ...ಒಬ್ಬೊಬ್ರಾಗಿ ಗಂಟಲ್ ನೋವು, ಕೆಮ್ಮು, ಮೂಗಿಗೆ ವಾಸನೆ ಬರ್ತಿಲ್ಲ ಹಿಡಿಸ್ತಿಲ್ಲ.. ಅಂತ ಶುರು ಮಾಡಿದ್ರು.'

' ಐ ಸಿ'

' ಮನೆಗೆ ಯಾರಾದ್ರೂ ಬಂದ್ರೆ ಟೆಮ್ಪರೇಚರ್ ಗನ್ ಹಣೆಗಿಟ್ಟು ಟೆಂಪರೇಚರ್ ನೋಡಿ ಮನೆಯೊಳಗೆ ಬಿಡಿ ಅಂತ ಎಚ್ಚರಿಕೆ ಕೊಟ್ಟಿದ್ರು ಡಾಕ್ಟ್ರು..ಹಾಗೇ ಸ್ಯಾನಿಟೈಜರ್

ಹಚ್ಚಿ, ಮಾಸ್ಕ್ ಹಾಕ್ಕೊಳ್ಳಿ  ಸೋಷಿಯಲ್ ಡಿಸ್ಟೆನ್ಸಿನ್ಗ್ ಅಂತ ಜನಗಳಿಗೆ ಉಪದೇಶ ಕೊಡ್ತಿದ್ರು. ಕನ್ನಡ ಕ್ವಿಝ್ ಮಾಸ್ಟರ್ ಒಬ್ರು ಅದನ್ನ ಎಲ್ಲಾರೂ ಜ್ಞಾಪಕ  ಇಟ್ಕೊಳ್ಳಲಿ ಅಂತ ಅದನ್ನು ಎಸ್ ಎಮ್ ಎಸ್ (ಇಂಗ್ಲಿಷ್ನಲ್ಲಿ) ಅಂತ ಮೊಟಕಿಸಿ ಎಲ್ರಿಗೂ ಸಲಹೆ ಕೊಟ್ರು'!

'ಓ ಐಸಿ! ಎಲ್ಲ ಅದನ್ನ ಮಾಡ್ತಿದಾರಾ?'

' ಬಹಳ ಜನ ಅದನ್ನ ಕಿವಿಗೇ ಹಾಕ್ಕೊಂಡಿಲ್ಲ!... ಮಾಸ್ಕ್ನ ಮೂಗಿನ್ ಕೆಳ್ಗೆ ಹಾಕ್ಕೊಳ್ತಾರೆ, ಮಾಸ್ಕ್ನ ಬೊ–ಟೈ ತರಾ ಮಾಡಿ ಅದನ್ನು ಕುತ್ಗೆ ಕೆಳಗೆ ಎಳ್ದು ಕಟ್ಕೋತಾರೆ!....ಅಕ್ಕಪಕ್ಕದವರ ಜೊತೆ ನಿಂತು ಯಾವ ಊರಿನಲ್ಲಿ, ಯಾವ ರೋಡಿನಲ್ಲಿ ಯಾವ ಅಪಾರ್ಟಮೆಂಟಲ್ಲಿ ಹೊಸ ಕೇಸ್ ಬಂದಿದೆ ಅಂತ ಗಂಟಗಟ್ಟಲೆ ಡಿಸ್ಕಸ್ ಮಾಡ್ತಾರೆ. ಆಯುರ್ವೇದ ಔಷದಿ, ಬಿಸಿ ಹಬೆ ತೊಗೊಂಡರೆ, ಒಂದು ಕಾಲಲ್ಲಿ ಸೂರ್ಯನ್ನ ನೋಡ್ತಾ ನಿಂತುಕೊಂಡ್ರೆ ಕೊರೊನ ಬರಲ್ಲ ಅಂತ ವಾಟ್ಸಪ್ನಲ್ಲಿ ಓದ್ತಾರೆ.. ಶೇರ್ ಮಾಡ್ತಾರೆ.. ಸ್ಯಾನಿಟೈಸರ್ ತೀರ್ಥ ತೊಗೊಳ್ಳೊ ಹಾಗೆ ಬೆಟ್ಟು ತುದೀಲಿ ತೊಗೊಂಡು ಅದನ್ನ ತಲೆ ಮೇಲೆ ಹಚ್ಕೊಳ್ತಾರೆ! ಇನ್ನೊಂದು ಆಶ್ಚರ್ಯ..'

'ಏನದು'

'ಒಂದು ಕಟ್ಟು ಕೊತ್ತೊಂಬ್ರಿ ಒಂದು ಬಿಲ್ಲೆ ಶುಂಟಿಗೆ 5 ಕಿ.ಮಿ. ಇರೋ ಮಾರ್ಕೆಟ್ಗೆ ಮಾಸ್ಕು ನೇತಾಡೋಹಾಗೆ ಕಟ್ಕೊಂಡು ಹೋಗಿ ತರ್ತಾರೆ. ಭಾನುವಾರ ನಾನ್ ವೆಜ್ಗೆ ಮಾರ್ಕೆಟ್ಗೆ ಹೋಗಿ ಬೋ–ಟೈ ಹಾಕಿಕೊಂಡು,  ಅರ್ಧ ಘಂಟೆ ಕ್ಯೂ ನಿಂತು, ಅಕ್ಕ ಪಕ್ಕದವರ ಜೊತೆ ಹರಟೆ ಹೊಡ್ದು ಕೊನೆಯ ಪೀಸ್ ಚಿಕನ್ನೋ ಮಟನ್ನೋ ಗುದ್ದಾಡಿ ಅದನ್ನು ಗೆದ್ದ ಖುಶೀಲಿ ಮನೆಗೆ ತರ್ತಾರೆ. ದಾರೀಲಿ ಎಣ್ಣೆಗೆ ಕ್ಯೂನಿಂತು ಅದೊಂದು ಕ್ವಾರ್ಟರ್ ಹಿಡಕೊಂಡು ವಿಜಯೋತ್ಸವದಿಂದ ಮನೆಗೆ ಬಂದು ಅಡುಗೆ ತಯಾರಾಗೋದ್ರಲ್ಲಿ ಪಾಪ! ಆ ಊಟ ಮಾಡಕ್ಕಾಗೋದಿಲ್ಲ. ಅಷ್ಟರಲ್ಲಿ ನಾನು 14 ದಿವಸ ಅವರ ಗೆಸ್ಟ್ ಆಗಿ ಬಂದಿರ್ತಿನಿ! ಅವರು ಆರ್–ಟಿ ಪಿ–ಸಿಅಂತ ಪಿಸಿಪಿಸೀಂತ ಮನೆಯವರ ಹತ್ರ ಗುಟ್ಟಾಗಿ ಮಾತಾಡಿ ಕೋವಿಡ್ ಸೆಂಟರ್ ಅವ್ರ ಜೊತೆ ಮಾತಾಡಿ ಆಮೇಲೆ ಅಲ್ಲಿಗೇ ಹೋಗಿ ಇರ್ತಾರೆ'.

'ಇನ್ನೇನಾಯ್ತು?'

'ಜನಗೋಳ್ಗೆ ಬಾಳ ಕನ್ಫ್ಯೂಷನ್ ಮಾಡಿ ಗೋಳಾಡಿಸಿದ್ರು. ಕರೊನ ಬರೋದಿಲ್ಲ ಅಂತ ಸಾವಿರಾರು ಜನ ಸೇರಿ ಚಪ್ಪಾಳೆ ಮತ್ತು ಜಾಗಟೆ ಹೊಡದ್ರು... ಹೊಡೆಸಿದ್ರು. ಸಾವಿರಾರು ಜನ ಪಾಪ ಬರೀಕಾಲಲ್ಲಿ ನೂರಾರು ಮೈಲಿ ಮಕ್ಕಳ್ನ ಎತ್ಕೊಂಡು ನಡೆದ್ರು. ವೀಕೆಂಡು ಲಾಕ್–ಡೌನ್ ಅಂತ ಮಾಡ್ದಾಗ ಗಾಡಿ ಕಟ್ಕೊಂಡು ಎಲ್ಲೂ ಊರಿಗೆ ಹೊರಟ್ರು..ಹೊರಗಡೆ ಇದ್ದವ್ರೆಲ್ಲಾ ಗಾಡಿ ಕಟ್ಕೊಂಡು ಇಲ್ಲಿಗ್ ಬಂದ್ರು. ಒಬ್ರು ಪಾಲಿಟೀಷಿಯನ್ ಲಾಕ್ಡೌನ್ ಅಂತ ಹೇಳಿ, 'ಹೋಗೋವ್ರೆಲ್ಲಾ ವಾಪಸ್ಸು ಬರ್ಲೇ ಬೇಡಿ, ಬರೋವ್ರೆಲ್ಲಾ ಹೋಗ್ಲೇ ಬೇಡಿ, ಮಿಕ್ಕವ್ರೆಲ್ಲಾ ನನ್ನ ತರ ಸುಮ್ನಿದ್ಬುಡಿ ಅಂದ್ರು' ಅಂತ ಹೇಳಿ ದೊಡ್ಡ ಗೊಂದಲ ಮಾಡ್ ಬಿಟ್ರು.. ಅವರಿಗೆ ಈಗ ರಜ ಕೊಟ್ಟಿದಾರೆ. ಅವ್ರ ಜಾಗಕ್ಕೆ ಬೇರೇಯವ್ರನ್ನ ತಂದಿದಾರೆ...'

'ಬೀಟ, ಗಾಮ ನಿಮ್ಮಿಬ್ರ ಕಥೆಯೇನು?'

ಬೀಟ: 'ನಾವು ಬಂದಿದ್ದು ಯಾರಿಗೂ ಗೊತ್ತೇ ಆಗ್ಲಿಲ್ಲ. ಯಾಕೆಂದ್ರೆ ನಾವು ಬಂದಿದ್ದು ಫೇಸ್ 2 ಅಂತೆ. ಎಲ್ಲಾ ಖುಶಿಯಾಗಿ ಓಡಾಡ್ಕೊಂಡಿದ್ರು.. ಮದ್ವೆ ಮುಂಜಿಗೆ 50 ಜನ ಅಂದ್ರೆ ನೂರು ಇನ್ನೂರು ಅಂತ ಹೋಗೋವ್ರು.. ಮಿನಿಷ್ಟ್ರೋಳ್ಗೆ ಲೆಕ್ಕ ಇರ್ಲಿಲ್ಲ....ಸಾವಿರಾರು ಜನಗಳನ್ನ ಕಿಶ್ಕಿಂದದ ತರಹ ಜಾಗದಲ್ಲಿ ಸೇರಿಸ್ಕೊಂಡು ಎಲೆಕ್ಷನ್ ಸ್ಪೀಚು ಹೊಡೀತಿದ್ರು.. ಜೊತೆಗೆ ಎಸ್ ಎಮ್ ಎಸ್ ಮಾಡಿ ಅಂತಾನೂ ಹೇಳ್ತಿದ್ರು! ನಾವಿಬ್ರೂ ಬೇರ್ ಬೇರೆ ವೇಶ ಹಾಕಿ ತಲೆ ಮರಸ್ಕೊಂಡು ಹೋದ್ವಿ. ಜನಗಳು ಬಹಳ ಒಳ್ಳೆವ್ರಿದಾರೆ. ಡೆಲ್ಲಿಲಿ ಯಾರೋ ತಬಲಾ ಬಾರ್ಸ್ತೋ ಗ್ರೂಪು ಇರ್ಬೇಕು.. ಒಟ್ಟೊಟ್ಟಿಗೆ ಸೇರ್ಕೊಂಡಿದ್ದರು ಒಂದು ಕಡೆ. ಅವ್ರೆಲ್ಲಾ ನನ್ನ ಚೆನ್ನಾಗಿ ನೋಡ್ಕೊಂಡ್ರು.. ನಾನೂ ಅವ್ರನ್ನೆಲ್ಲಾ ಹತ್ರ ಕರ್ದು ಮಾತಾಡ್ಸಿ ತಲೆ ನೇವರ್ಸಿ ಕಳಿಸ್ದೆ! ಸಾಯಂಕಾಲವಾಗ್ತಾನೆ ಒಬ್ಬೊಬ್ಬರಿಗೂ ದಮ್ಮು ಕಟ್ಟಕೊಂಡ್ತು. ಬೇಂಗ್ಳೂರಲ್ಲೂ ಒಂದೆರೆಡು ಏರಿಯಾದಲ್ಲಿ ಹೀಗೇ ಆಯ್ತು'.

ಗಾಮ : 'ನಾನು ತೆಪ್ಪಗೆ ಒಂದು ಕಡೆ ಕೂತಿದ್ರೂ ಮದುವೆ, ಮುಂಜಿ, ಕಾರ್ಯ ಅಂತ ಎಳಕೊಂಡೋಗೋವ್ರು ಯಾವ್ದೇ ಇದ್ರು ಮಿನಿಷ್ಟರ್ರಗೋಳು 300 ಜನ ಕರ್ಸಿ 50 ಜನದ್ ಲೆಕ್ಕ ಕೊಡೋವ್ರು! ದಿನಾ ಮದ್ವೆಗೆ ಮುಂಜಿ ಕೊನೆಗೆ ಸ್ಮಶಾನಕ್ಕೆ ಹೋಗಿ ಹೋಗಿ ಸಾಕಾಯ್ತು. ಅಷ್ಟರಲ್ಲಿ ಹರಿದ್ವಾರದಲ್ಲಿ ಕುಂಭ ಮೇಳ ಶುರುವಾಗಿ ಸಾವಿರಾರು ಋಶಿಗಳು ಅಲ್ಲಿಗೆ ಗುಂಪು ಗುಂಪಾಗಿ ಬಂದು ಒಟ್ಟಿಗೆ ಸ್ನಾನಕ್ಕಾಗಿ ಗಂಗಾ ನದಿಗೆ ಇಳಿದ್ರು...'

'ಆಮೇಲೇನಾಯ್ತು?'

'ಅದು ಡೆಲ್ಟ, ಡೆಲ್ಟ ಪ್ಲಸ್ಗೆ ಗೊತ್ತು. ನಮ್ಮ ಟರ್ಮ ಅಲ್ಲಿಗೆ ಮುಗಿದು ಹೋಯ್ತು'

'ಡೆಲ್ಟ ಎಲ್ಲಾರಿಗಿಂತ ಚಿಕ್ಕ ಮರಿ ಅಲ್ವ?'

'ಹೌದು. ಆದ್ರೆ ಚಿನಕುರುಳಿ ಪಟಾಕಿ ತರಹ ಜೋರು. ನೀವೇ ಮಾತಾಡಿ ಡೆಲ್ಟ ಹತ್ರ'.

'ಬಹಳ ಜೋರ್ ಅಂತಾರಲ್ಲಾ ನಿನ್ನ, ಡೆಲ್ಟ!'

'ಗೊತ್ತಿಲ್ಲ...ಆದ್ರೆ ನಾನು ಬಂದಾಗ ಎಲ್ಲಾ ಕಡೆ ಪ್ಯಾನಿಕ್ ಅಟಾಕ್ ಆಯ್ತು..ಬೆಂಗಾಲ್ ಎಲೆಕ್ಷನ್ ಕ್ಯಾಮ್ಪೇನ್ ಮತ್ತು ಶಾಹಿ ಸ್ನಾನ ಮುಗಿಸಿ ಬರೋಷ್ಟರಲ್ಲಿ ಎಲ್ರಿಗೂ ದಮ್ ಕಟ್ಟೋದಕ್ಕೆ ಶುರುವಾಯ್ತು.'

'ಎಲ್ಲಿ'?

'ಎಲ್ಲಾ ಕಡೆ! ನಾನು ಹೋದ ಕಡೆ ಬೆಡ್ಡಿದ್ರೆ ಆಕ್ಸಿಜನ್ ಸಿಲಿಂಡರ್ ಇಲ್ಲ... ಸಿಲಿಂಡರ್ ಇದ್ರೆ ಔಷದಿ ಹೆಕ್ಸಕ್ಲೋರೊಕ್ವಿನೈನ್ ಇರಲಿಲ್ಲ. ದಮ್ಮು ಕಟ್ಟುವಾಗ ಕಡಿಮೆ ಮಾಡೋದಕ್ಕೆ ರೆಮಿಡಿಸೀವರ್ ಇರ್ಲಿಲ್ಲ.. ಜೊತೆಗೆ ಆಕ್ಸಿಜಿನ್ ಕಾನ್ಸನ್ಟ್ರೇಟರ್ ಇರ್ಲಿಲ್ಲ. ಕೊನೆಗೆ ಹೋದವರ್ನ ಅಂತ್ಯ ಸಂಸ್ಕಾರಕ್ಕೆ ಕಟ್ಟಗೆನೂ ಇರ್ಲಿಲ್ಲ. ಯಾವುದೂ ರೆಡಿ ಮಾಡ್ಕೊಂಡಿರ್ಲಿಲ್ಲ. ಆಲ್ ಕ್ಲಿಯರ್ ಅಂತ ಮದುವೆ, ಮುಂಜಿ, ಕ್ರಿಕೆಟ್ ಮ್ಯಾಚು, ನಂದಿ ಹಿಲ್ಸ್, ಗೋವ ಅಂತ ಎಲ್ಲಾಕಡೆ ಹೊರಟಿದ್ರು. ಸಿನಿಮಾದಲ್ಲಿ ಯಾರೋ ಪವರ್‌ಫುಲ್ ಸ್ಟಾರ್ ಹೇಳ್ದಾಂತ ದಿನಾ ಎಸಿ ಹಾಕಿಕೊಂಡು ಮೂರು ನಾಲ್ಕು ಶೋ ಶುರು ಮಾಡಿದ್ರು.. ಬಹಳ ಜನ ಹೊರಟು ಹೋದ್ರು.. ಕರೊನ ಸೆಂಟರ್ನವರು

ಸರಿಯಾಗಿ ಕೂಡಕ್ಕೆ ಬರ್ದೆ ತಪ್ಪು ತಪ್ಪು ಕೂಡಿ ಏನೋ ಒಂದು ಫಿಗರ್ ಕೊಡೋವ್ರು'.

'ಡೆಲ್ಟಾ ಪ್ಲಸ್ ಏನದು'.

'ಅದೂ ನಾನೇ! ಬೋರ್ ಆಗಿ ಬೇರೆ ಡ್ರೆಸ್ ಹಾಕಿ ಕೊಂಡು ಓಡಾಡ್ತಿದ್ದೆ ಅಷ್ಟೆ! ಅಷ್ಟರಲ್ಲಿ ವಾಕ್ಸಿನೇಷನ್ ಶುರುವಾಯ್ತು.. ಅದರಲ್ಲೂ ನೊವಾಕ್ಸಿನ್ ಒಳ್ಳೆದು, ಕೊವಿಶೀಲ್ಡ್ ಒಳ್ಳೆದು ಅಂತ ಜಗಳ ಶುರುವಾಯ್ತು. ಹಾಗೆ ನೋಡಿದ್ರೆ ಆವಾಗ ಎರಡೂ ಇರ್ಲಿಲ್ಲ! ಅವುಗಳು ಬಂದಾಗ ಸ್ವಲ್ಪ ಜನ ಏನೇನೋ ಕಾರಣ ಹೇಳಿ ಯಾವುದೂ ಹಾಕಿಸ್ಕೊಳ್ಳಿಲ್ಲ!'

'ನೀನು ಇಷ್ಟು ಬೇಗ ವರ್ಲ್ಡ್ ಟೂರ್ ಹೋಗ್ತಿಯಾಂತ ನನಗೆ ಅನ್ಸಿರಲಿಲ್ಲ!'

'ನನಗೂ ಕೂಡ ಇದು ಶಾಕ್! ಎಲ್ಲಾ ತಮ್ಮ ದಯ ಸಾರ್. ಮುಖ್ಯವಾಗಿ ಯಾರೂ ಎಸ್ ಎಮ್ ಎಸ್ ಮಾಡ್ತಿಲ್ಲ. ಈಗ್ಲೂ ಅದೇ ಕಾರಣ ಸಾರ್.'

'ಒಳ್ಳೇದು. ಮೀಟಿಂಗ್ ಆಯ್ತು. ತಿರುಗ ನೆಕ್ಸ್ಟ್ ಮನ್ತ್ ಮೀಟ್ ಮಾಡೋಣ'.

'ಹೋದ ವರ್ಷ, ಈ ವರ್ಷ ವೈರಸ್ ಅಫ್ ದ ಇಯರ್ ಯಾರಾಗ್ತಾರೆ ಸಾರ್?' ಎಲ್ರೂ ಕೋರಸ್ನಲ್ಲಿ.

' ನನಗ್ಗೊತ್ತಿಲ್ಲ? ಅದನ್ನು ಡಿಸೈಡ್ ಮಾಡೋದು ಕಮಿಟಿಯವರಲ್ವೆ?'

'ಈ ಸರ್ತಿ ಕಮಿಟಿಲಿ ಮೆಂಬರ್ಸ್ ಯಾರು ಇರ್ತಾರೆ ಸಾರ್?

' ಯಾವಾಗಿನ ತರಹ.. ಮೆಂಬರ್ರ್ಸು.... ಎಬೊಲ, ಸ್ಮಾಲ್ಪಾಕ್ಸ್, ಇನ್ಫ್ಲುಎನ್ಝಾ, ಡೆಂಗು, ಈ ವರ್ಷ ನೆಫಾನ ಸೇರಿಸ್ಕೋಬಹುದು'.


' ಪ್ರೈಝು ಆಲ್ಫಾ, ಇಲ್ದಿದ್ರೆ ಡೆಲ್ಟಾಗೆ ಬರಬಹುದಲ್ಲಾ ಸಾರ್?

' ಹೇಳಕ್ಕಾಗಲ್ಲ... ಇನ್ನೂ ವರ್ಷ ಕಳೆದಿಲ್ಲ. ಜ್ಞಾಪಕ ಇರ್ಲಿ!

'ಯಾರು ಕೊಡ್ತಾರೆ ಸಾರ್ ಪ್ರೈಝು?'

'ಇನ್ಯಾರು.. ಚೈನಾದ ಕ್ಸೈ ನೇ ಕರೀಬೇಕು. ಇಂಥಾದಿಕ್ಕೆಲ್ಲಾ ಅವರೆ ಸರಿ'!

***




●ದಂನಆ

- ಎಲ್ಲರೂ ನನ್ನಂತೆಯೇ ಇದ್ದಿದ್ದರೆ ದೇಶದ ಪರಿಸ್ಥಿತಿ ಹೇಗಿರಬಹುದಿತ್ತು ಎಂದು ಯಾರಾದರೂ ತಮ್ಮನ್ನು ತಾವೇ ಪ್ರಶ್ನಿಸಿಕೊಂಡಿದ್ದಾರೆಯೆ?
- ರೋಗಿ ವೈದ್ಯನಿಗೆ: ನಿಮ್ಮ ಡಯಾಗ್ನಸಿಸ್ ಒಪ್ಪಿಕೊಳ್ಳುವ ಮೊದಲು ನಾನು ನಿಮ್ಮ ಇನ್ನೊಂದು ರೋಗಿಯನ್ನು ಕನ್‌ಸಲ್ಟ್ ಮಾಡಲು ಬಯಸುತ್ತೇನೆ.
- ಟ್ರು ಲವ್ ಮೀನ್ಸ್ ಯು ಲವ್ ಎ ಪರ್ಸನ್ ಫಾರ್ ವಾಟ್ ಹಿ/ಶಿ ಈಸ್ ದ್ಯಾನ್ ವಾಟ್ ಯು ಥಿಂಕ್ ಹಿ/ಶಿ ಶುಡ್ ಬಿ.
- ಇಂದಿನ ಪೀಳಿಗೆಯ ಯುವಕರು ತಮ್ಮ ತಂದೆಯ ಹೆಜ್ಜೆ ಗುರುತುಗಳಿಗಿಂತಲೂ ಅವರ ಕಾರಿನ ಚಕ್ರಗಳನ್ನು ಅನುಸರಿಸಲು ಬಯಸುತ್ತಾರೆ.
- ಮಗುವನ್ನು ಮಲಗಿಸಲು ಜೋಗುಳ ಹಾಡಲು ತಾಯಿ ಹೊರಟಾಗ ಅದು ಹೇಳಿತಂತೆ: 'ಅಮ್ಮಾ! ನೀನು ಹಾಡಲೇ ಬೇಕೆ? ನನಗೆ ತುಂಬಾ ಸುಸ್ತಾಗಿದೆ.'
- ಒಬ್ಬ ಸೈಕೊಅನಲಿಸ್ಟ್ ಇನ್ನೊಬ್ಬ ಸೈಕೊಅನಲಿಸ್ಟ್‌ಗೆ: 'ಹಲೊ, ನೀನು ಚೆನ್ನಾಗಿದ್ದೀಯ. ನಾನು ಹೇಗಿದ್ದೀನಿ?'
- ಮನೆಗೆ ಬಂದ ಅತಿಥಿಗಳಿಗೆ ಈಗ ಉಪಚಾರ ಹೀಗೆ: 'ಅಂಕಲ್/ಆಂಟಿ ಏನು ಬೇಕು? ಪವರ್ ಬ್ಯಾಂಕ್, ಮೊಬೈಲ್ ಚಾರ್ಜರ್, ವೈಫೈ ಪಾಸ್‌ವರ್ಡ್...'
- ಪರಪೆಚುಯಲ್ ಮೋಷನ್ ವಾಸ್ ಡಿಸ್‌ಕವರ್ಡ್ ಲಾಂಗ್ ಎಗೊ – ಎ ಹೌಸ್ ವೈಫ್ ವಿತ್ ಸಿಕ್ಸ್ ಚಿಲ್ಡ್ರನ್.
- ಅವಕಾಶಗಳು ಬಾಗಿಲು ತಟ್ಟಿದರೆ ಪ್ರಲೋಭನೆಗಳು ಸೀದಾ ಒಳಗೆ ನುಗ್ಗಲು ಏನು ಕಾರಣ?
- ಕಿರೀಟ ಧರಿಸಿದರೂ ಮಳೆಯಲ್ಲಿ ನೆನೆಯುವುದು ಇದ್ದದ್ದೇ.
- ನಿಮ್ಮ ಕನಸು ನನಸಾಗಲು ಇರುವ ಅತ್ಯುತ್ತಮ ಮಾರ್ಗ ಎಂದರೆ ನೀವು ಎಚ್ಚರಗೊಳ್ಳುವುದು.
- ವಿವಿಧ ಕ್ಷೇತ್ರಗಳಲ್ಲಿ ಇಷ್ಟೆಲ್ಲ ಪ್ರಗತಿ ಆಗಿದ್ದರೂ ಸಹ ಕೆಲವೊಮ್ಮೆ ಅನೇಕರು ಹಿಂದಿನ ಕಾಲವೇ ಚೆನ್ನಾಗಿತ್ತು ಎಂದು ಪರಿತಪಿಸುವುದು ಏಕೆ?
- ಬದುಕಿನಲ್ಲಿ ಮೂರು ಹಂತಗಳಿವೆ: 1. ನೀವು ನಿದ್ರಿಸಬೇಕಾಗಿದೆ ಆದರೆ ನಿದ್ರಿಸುವುದಿಲ್ಲ. 2. ನೀವು ನಿದ್ರಿಸಬೇಕಾಗಿದೆ ಆದರೆ ನಿದ್ರಿಸಲು ಸಮಯವಿಲ್ಲ. 3. ನೀವು ನಿದ್ರಿಸಬೇಕಾಗಿದೆ, ನಿದ್ರಿಸಲು ಸಮಯವಿದೆ ಆದರೆ ನಿದ್ದೆ ಬರುತ್ತಿಲ್ಲ.
- ನೀವು ನಿಮ್ಮ ಮಗನಿಗೆ ಏನಾದರು ಹೇಳಿಕೊಟ್ಟರೆ ಅದು ಅವನ ಮಗನಿಗೂ ಹೇಳಿಕೊಟ್ಟಂತೆ. ■

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.




ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ

# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**
**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**
ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ಒಬ್ಬಟ್ಟಿನ ಬೊಂಬಾಯಿ ಪಯಣ

**●ಕೆ. ಎನ್. ಸುಬ್ಬರಾವ್**

ನಾನು ನನ್ನ ಅಕ್ಕ ಇಬ್ಬರೇ ನಮ್ಮ ತಂದೆ ತಾಯಿಗೆ ಮಕ್ಕಳು. ಚಿಕ್ಕಂದಿನಲ್ಲೇ ನಮಗೆ ಪ್ರಪಂಚ ಅನ್ನುವುದು ಏನೂ ಎಂದು ತಿಳಿಯುವ ಮೊದಲೇ ನಮ್ಮ ತಂದೆ ಅನಾರೋಗ್ಯದಿಂದ ನರಳಿ ನಮ್ಮನ್ನು ಅಗಲಿದರು. ನನಗೆ ಆಗ ಆರು ವರ್ಷ ಅಕ್ಕನಿಗೆ ಒಂಬತ್ತು ವರ್ಷ ಅಷ್ಟೆ. ನಾವಿದ್ದ ಸ್ವಂತ ಮನೆಯನ್ನು ಬಾಡಿಗೆಗೆ ಕೊಟ್ಟು ನಾನು ನನ್ನ ತಾಯಿ ಅಕ್ಕ ಗಾಂಧಿಬಜ಼ಾರ್‌ನಲ್ಲಿರುವ (ವಿದ್ಯಾರ್ಥಿ ಭವನ್ ಎದುರಿಗೆ) ನಮ್ಮ ತಾತನ ಮನೆಗೆ ಹೋದ್ವಿ. ಅಲ್ಲಿ ನಮ್ಮ ತಾತನ ಜೊತೆ ಮತ್ತು ನಮ್ಮ ದೊಡ್ಡಮ್ಮನ ಮಕ್ಕಳ ಒಟ್ಟುಸಂಸಾರದಲ್ಲಿ ಜೀವನ ಸಾಗಿಸಬೇಕಾಯಿತು. ನಮ್ಮ ತಂದೆಯವರು ಅಲ್ಪಸ್ವಲ್ಪ ಉಳಿತಾಯ ಮಾಡಿದ್ದ ಹಣವನ್ನು ಬ್ಯಾಂಕಿನಲ್ಲಿ ಇಟ್ಟು ಬರುವ ಬಡ್ಡಿ ಮತ್ತು ಬಾಡಿಗೆಯಿಂದ ಬರುವ ಹಣದಿಂದ ನಮ್ಮ ಸಂಸಾರ ತಾತನ ಮಾರ್ಗದರ್ಶನದಲ್ಲಿ ಸುಮಾರು ಎಂಟೊಂಬತ್ತು ವ಼ರ್ಷಗಳು ಕಳೆದ ಮೇಲೆ ನಮ್ಮ ತಾತನವರೂ ತೀರಿಕೊಂಡರು. ನಮ್ಮ ತಾಯಿ ಧೃತಿಗೆಡದೆ ನಮ್ಮನ್ನು ಸಾಕಿ ಸಲಹಿ ಒಳ್ಳೆಯ ವಿದ್ಯಾಭ್ಯಾಸವನ್ನೂ ಕೊಡಿಸಿದರು. ಕಾಲಕ್ರಮೇಣ ನನ್ನ ಅಕ್ಕನ ಮದುವೆಯ ನಂತರ ನಾನು ಮತ್ತು ನನ್ನ ತಾಯಿ ಅಲ್ಲೇ ಉಳಿದೆವು.

ನಾನು ಬಿ,ಎಸ್ಸಿ. ಡಿಗ್ರಿ ಪಡೆದು, ನನಗೆ ಚಿಕ್ಕಂದಿನಿಂದ ಇದ್ದ ಎಂಜಿನಿಯರ್ ಆಗಬೇಕೆಂಬ ಹಂಬಲ ಸಾಕಾರಗೊಳಿಸಲು ಎ.ಎಂ.ಐ.ಇ. ಮಾಡಲು ಒಂದು ಖಾಸಗಿ ವಿದ್ಯಾಸಂಸ್ಥೆಯಲ್ಲಿ ದಾಖಲಾದೆ. ಸುಮಾರು ಹದಿನೈದು ದಿನಗಳು ತರಗತಿಗೆ ಹೋಗಿದ್ದೆ ಅಂತ ನೆನಪು. ಇದ್ದಕ್ಕಿದ್ದ ಹಾಗೆ ತಾಂತ್ರಿಕ ವಿಭಾಗದ ಕಚೇರಿಯಿಂದ ಸಂದರ್ಶನಕ್ಕೆ ಕರೆ ಬಂತು. ಆ ಪತ್ರ ಓದಿದ ಕೂಡಲೇ ನನ್ನ ಮಹದಾಶಯ ನೆರವೇರುವ ಸಮಯ ಬಂದೇಬಿಡ್ತು ಅಂತ ಬಹಳ ಸಂತೋಷಪಟ್ಟೆ. ಸಂದರ್ಶನವೂ ಸಫಲವಾಗಿ ಬೆಂಗಳೂರಿನಿಂದ ಸುಮಾರು ಇನ್ನೂರೈವತ್ತು ಕಿ.ಮೀ, ದೂರದಲ್ಲಿರುವ ಧಾವಣಗೆರೆಯಲ್ಲಿರುವ ಸರ್ಕಾರಿ ಎಂಜಿನಿಯರಿಂಗ ಕಾಲೇಜಿಗೆ ಸೇರಲು ಪ್ರವೇಶ ಪತ್ರವೂ ನನ್ನ ಕೈ ಸೇರಿತು, ನನಗೆ ಬಹಳ ಖುಷಿ ಆಯಿತು. ಆಷ್ಟೇ ಅಲ್ಲದೆ ಪಂಜರದೊಳಗಿದ್ದ ಗಿಣಿಯನ್ನು ಆಕಾಶದಲ್ಲಿ ಸ್ವೇಚ್ಛೆಯಾಗಿ ಹಾರಾಡಲು ಬಿಟ್ಟಂತೆ ನನ್ನ ಮನದಲ್ಲೂ ಆಸೆಗಳು ಚಿಗುರಿತು.

ಎಲ್ಲರಿಗೂ ಈ ಶುಭ ಸಮಾಚಾರವನ್ನು ತಿಳಿಸಿ ದಾವಣಗೆರೆಗೆ ಹೊರಡಲು ಸನ್ನದ್ಧನಾದೆ. ಡಿಗ್ರಿ ಪದವಿ ಪಡೆಯುವವರೆಗೂ ಬೆಂಗಳೂರಿನಲ್ಲೇ ವ್ಯಾಸಂಗ ಮಾಡಿ ಬೇರೊಂದು ಊರಲ್ಲಿ ಓದಲು ಅವಕಾಶ ಸಿಕ್ಕಿದ್ದು ನನಗೆ ಒಂದು ತರಹ ಹೊಸ ಜೀವನ ಆರಂಭವಾಗುತ್ತದೆ ಎಂಬ ಪುಳಕ ಮನಸ್ಸಿಗೆ ಮುದ ನೀಡಿತು. ಸರಿ, ದಾವಣಗೆರೆಗೆ ಹೊರಡುವ ತಯಾರಿಯೂ ಆಯಿತು. ದಾವಣಗೆರೆಯಲ್ಲೇ ಓದಿದ್ದ ನನ್ನ ಕಸಿನ್ ಅಲ್ಲಿನ ಸಮಗ್ರ ಚಿತ್ತಣವನ್ನು ಕೊಟ್ಟು ನನ್ನನ್ನು ಹುರಿದುಂಬಿಸಿದ. ನನ್ನ ಪ್ರಯಾಣದ ದಿನವೂ ನಿಗದಿಯಾಗಿ ನನ್ನಂತೆಯೇ ಸೀಟು ಗಿಟ್ಟಿಸಿದ್ದ ಬಿ.ಎಸ್ಸಿ. ಕ್ಲಾಸ್‌ಮೇಟ್ ಜೊತೆ ದಾವಣಗೆರೆಗೆ ಹೊರಟೇಬಿಟ್ಟೆ.

ದಾವಣಗೆರೆಯಲ್ಲಿ ಪ್ರತಿಯೊಂದು ಪಂಗಡಕ್ಕೂ ಬೇರೆ ಬೇರೆ ವಿದ್ಯಾರ್ಥಿನಿಲಯಗಳಿವೆ ಎಂಬ ಮಾಹಿತಿ ಪಡೆದಿದ್ದರಿಂದ ನಾನು ಬ್ರಹ್ಮ ಚೈತನ್ಯ ಹಾಸ್ಟೆಲಿಗೆ ದಾಖಲಾದೆ. ಅಲ್ಲಿ ಮೊದಲನೆಯ ದಿನ ಗೋಪಿನಾಥ್, ಸುಧೀಂದ್ರ, ಸೂರ್ಯಪ್ರಕಾಶ್, ರಾಘವನ್, ನಾರಾಯಣ ಮುಂತಾದವರ ಪರಿಚಯವಾಯಿತು. ಹಾಸ್ಟೆಲಲ್ಲಿ ಬಿಸಿ ನೀರಿನ ವ್ಯವಸ್ಥೆ ಇರಲಿಲ್ಲ ತಣ್ಣೀರಲ್ಲೇ ಜಳಕ. ಊಟ, ತಿಂಡಿ ವ್ಯವಸ್ಥೆ ಇಲ್ಲದ್ದರಿಂದ ಹೋಟೆಲಲ್ಲಿ ತಿಂಡಿ ಊಟ ಮಾಡಬೇಕಾಯಿತು. ಮೊದಲನೆಯ ದಿನ ಕಾಲೇಜಲ್ಲಿ ಇನ್ನೂ ಕೆಲವರು ಹೊಸಬರು ಸ್ನೇಹಿತರಾದರು. ಹೀಗೆ ಎರಡು ವರ್ಷಗಳು ಕಳೆದ ಮೇಲೆ ಕಾಲೇಜಿನ ವಾತಾವರಣ, ತರಗತಿಗಳು, ಹಾಸ್ಟೆಲ್ ಜೀವನ ಎಲ್ಲವೂ ನನಗೆ ಅಡ್ಜೆಸ್ಟ್ ಆಯಿತು.

ನಮ್ಮ ಹಾಸ್ಟೆಲ್‌ನಲ್ಲಿ ಬೇರೆ ಬೇರೆ ಊರುಗಳಿಂದ ಬಂದವರ ನಡೆನುಡಿ, ಹವ್ಯಾಸ ಎಲ್ಲವನ್ನೂ ಸರಿಹೊಂದಿಸಿಕೊಂಡು ಹೋಗುವುದು ರೂಢಿಯಾಯಿತು. ಪರೀಕ್ಷೆಗಳು ನಡೆಯುತ್ತಿದ್ದ ದಿನಗಳಲ್ಲಿ ರಾತ್ರಿಯಲ್ಲಿ ಹೆಚ್ಚಿಗೆ ಓದುವುದು, ಬೆಳಗ್ಗೆ ಹೊತ್ತು ಬೇಜಾರು ಕಳೆಯಲು ಗುಂಪುಗುಂಪಾಗಿ ಹೊಸದಾಗಿ ಶುರುವಾಗಿದ್ದ ಇಂಡಿಯನ್ ಕಾಫಿ ಹೌಸ್‌ಗೆ ಹೋಗಿ ರುಚಿರುಚಿಯಾದ ಕಾಫಿ ಕುಡಿಯುವುದು ವಾಡಿಕೆಯಾಗಿತ್ತು.

ಹಾಸ್ಟೆಲ್‌ನಲ್ಲಿದ್ದ ಎಲ್ಲರಿಗೂ ಹೋಟೆಲ್ ತಿಂಡಿ ಊಟ ಮಾಡಿಮಾಡಿ ನಾಲಿಗೆ ಜಡ್ಡುಹಿಡಿದು ಹೋಗಿತ್ತು. ಆಗಾಗ ಕೆಲವರಿಗೆ ಹತ್ತಿರವಿದ್ದ ಊರಿನಿಂದ ಕುರುಕಲು ತಿಂಡಿ ಚಕ್ಕುಲಿ ಕೋಡುಬಳೆ ಮುಂತಾದ ತಿನಿಸುಗಳು ಸರಬರಾಜಾಗುತ್ತಿದ್ದವು. ಯಾವುದೇ ರೂಮಿಗೆ ಇಂತಹ ಖಾದ್ಯಗಳು ಬರುತ್ತವೆ ಎಂದು ತಿಳಿದರೆ ಅಂದು ಕೆಲವರು ಮುತ್ತಿಗೆ ಹಾಕಿಬಿಡುತ್ತಿದ್ದರು. ಹೀಗೆ ನನಗೂ ನಮ್ಮ ತಾಯಿಯವರು ಯಾರಾದರು ದಾವಣಗೆರೆಗೆ ಹೋಗುತ್ತಿದ್ದಾರೆ ಎಂದು ತಿಳಿದರೆ ತಾವೆ ತಯಾರಿಸಿದ ತಿಂಡಿಗಳನ್ನು ಕಳುಹಿಸುತ್ತಿದ್ದರು.

ಹೀಗೆ ಒಂದು ಸಾರಿ ನನ್ನ ಆಪ್ತ ಸ್ನೇಹಿತ ಶ್ರೀನಿವಾಸಮೂರ್ತಿ ಬೊಂಬಾಯಿಗೆ ಹೋಗುತ್ತಿದ್ದಾನೆ ಎಂಬ ವಿಷಯ ನನ್ನ ತಾಯಿಗೆ ಹೇಗೋ ತಿಳಿಯಿತು. ಪಾಪ, ಮಗ ದೂರದ ಊರಲ್ಲಿ ಹೋಟೆಲ್ ತಿನಿಸುಗಳನ್ನು ತಿಂದು ಬೇಜಾರಾಗಿರಬೇಕು ಅಂತ ಪ್ರೀತಿಯಿಂದ ತಾವೇ ಕಾಯಿ ಒಬ್ಬಟ್ಟು ಮಾಡಿ ನನ್ನ ಸ್ನೇಹಿತನೊಂದಿಗೆ ಕಳುಹಿಸುವ ಏರ್ಪಾಡುಮಾಡಿ ನನಗೆ ಓಂದು ಪೋಸ್ಟ್‌ಕಾರ್ಡ್‌ನಲ್ಲಿ ಇಂತಹ ದಿನ ಇಂತಹ ರೈಲಿನಲ್ಲಿ ಬರುತ್ತಿದ್ದಾನೆ, ಅವನ ಜೊತೆಯಲ್ಲಿ ಒಂದು ಪ್ಯಾಕೆಟ್ ಕಳುಹಿಸುತ್ತೇನೆ ಎಂಬ ವಿಷಯ ತಿಳಿಸಿದರು. ಆ ಕಾಗದ ಓದಿದ ಕೂಡಲೇ ನನಗೆ ಬಹಳ ಆಶ್ಚರ್ಯ ಮತ್ತು ಖುಷಿ ಆಯಿತು. ಈ ಸಮಾಚಾರವನ್ನು ಕೆಲವು ಸ್ನೇಹಿತರೊಡನೆ ಹಂಚಿಕೊಂಡೆ. ಆಗಿನ ದಿನಗಳಲ್ಲಿ ಬೊಂಬಾಯಿಗೆ ಹೋಗುವ ರೈಲು ದಾವಣಗೆರೆಯ ಮೂಲಕ ಹೋಗಬೇಕಿತ್ತು ಮತ್ತು ದಾವಣಗೆರೆಗೆ ರಾತ್ರಿ ಸುಮಾರು 10.30ಕ್ಕೆ ಬರುತ್ತಿತ್ತು. ಸರಿ ನಾನು ನನ್ನ ಸ್ನೇಹಿತ ನಾಗರಾಜ್ ರೈಲ್ವೆಸ್ಟೇಷನ್‌ಗೆ ಹತ್ತು ಗಂಟೆಗೇ ಹೋಗಿ ಇನ್ನೇನು ಒಬ್ಬಟ್ಟು ನನ್ನ ಕೈ ಸೇರುತ್ತೆ ಎಂಬ ಕುತೂಹಲದಿಂದ ರೈಲು ಬರುವುದನ್ನೇ ಕಾಯ್ತಾ ಇದ್ದೆವು. ನಮ್ಮ ದುರದೃಷ್ಟವೋ ಏನೋ ಅಂದು ರೈಲು ತಡವಾಗಿ ಬರುತ್ತಿದೆ, ಸುಮಾರು ಮಧ್ಯರಾತ್ರಿ 12.30ಗಂಟೆಗೆ ಬರಬಹುದು ಎಂದು ನೋಟೀಸ್‌ಬೋರ್ಡ್‌ನಲ್ಲಿ ಬರೆದಿದ್ದರು.


ಅದನ್ನು ಓದಿ ನಾವಿಬ್ಬರು ಹಾಸ್ಟೆಲ್‌ಗೆ ವಾಪಸ್ ಬಂದ್ವಿ. ಪುನಃ ರಾತ್ರಿ 12ಗಂಟೆಗೆ ಸ್ಟೇಷನ್‌ಗೆ ಹೋದ್ವಿ. ರೈಲು 11.30ಗಂಟೆಗೆ ಬಂದು ಹೋಯಿತು ಅಂತ ಗೊತ್ತಾಯಿತು. ಇನ್ನೇನು ಮಾಡುವುದು ಪೆಚ್ಚು ಮುಖ ಹಾಕ್ಕೊಂಡು ವಾಪಸ್ ಬಂದ್ವಿ. ರಾತ್ರಿಯಲ್ಲಾ ನಿದ್ರೆ ಬರದೆ ಕನಸಿನಲ್ಲೇ ಒಬ್ಬಟ್ಟನ್ನು ನೋಡ್ಕೊಂಡು, ಬೆಳಗಾದಮೇಲೆ ಎಂದಿನಂತೆ ಕಾಲೇಜಿಗೆ ಹೊರಟೆ.

ನನ್ನ ಸ್ನೇಹಿತ ನಾರಾಯಣ್‌ಗೆ ಒಂದು ಅಭ್ಯಾಸ (ದುರಭ್ಯಾಸ) ಇತ್ತು. ಯಾರಿಗೆ ಏನಾದರೂ ಊರಿಂದ ತಿಂಡಿ ಬರತ್ತೆ ಅಂತ ಗೊತ್ತಾದ ತಕ್ಷಣ ಹಾಸ್ಟೆಲ್‌ನ ಪ್ರಾಂಗಣದಲ್ಲಿ ನಿಂತ್ಕೊಂಡು ಎಲ್ಲರಿಗೂ ಕೇಳಿಸುವಂತೆ ಜೋರಾಗಿ ಸಾಯಂಕಾಲ ಇಂತಹ ರೂಮಿಗೆ ಬನ್ನಿ ತಿಂಡಿ ಸಿಗತ್ತೆ ಅಂತ ಧ್ವನಿವರ್ಧಕ ಇಲ್ಲದೇನೆ ಅನೌನ್ಸ್ ಮಾಡುವುದು. ಅದರಂತೆ ಮರುದಿನ ಸಾಯಂಕಾಲ ಕೆಲವರು ನಾಲಿಗೆ ಚಪಲ ತಾಳದೆ ನನ್ನ ರೂಮಿಗೆ ಬಂದ್ರು. ನನ್ನ ನಿರಾಸೆಯ ವಿಷಯ ತಿಳಿದು ಬಂದ ದಾರಿಗೆ ಸುಂಕವಿಲ್ಲ ಅಂತ ನನಗೆ ಸಾಂತ್ವನ ಹೇಳಿ ಅಲ್ಲಿಂದ ವಿರಮಿಸಿದ್ರು.

ಈಗ ನೋಡಿ ತಮಾಷೆ, ನನ್ನ ಸ್ನೇಹಿತ ಆ ಒಬ್ಬಟ್ಟಿನ ಪ್ಯಾಕೆಟ್ಟನ್ನು ಜೋಪಾನವಾಗಿ ಕಾಪಾಡಿ, ಬೊಂಬಾಯಿಯ ವಡಾಲದಲ್ಲಿರುವ ನನ್ನ ಸೋದರಮಾವನ ಮಗಳು ಪ್ರೇಮಲತ ಅವರಿಗೆ ಕೊಟ್ಟ. ಅವರು ಇದೇನಿದು ಸುಶೀಲ ಅತ್ತೆ (ನನ್ನತಾಯಿ) ಇದ್ದಕ್ಕಿದ್ದ ಹಾಗೆ ಒಬ್ಬಟ್ಟು ಕಳಿಸಿದಾರೆ ಅಂತ ಆಶ್ಚರ್ಯದಿಂದ ಪ್ಯಾಕೆಟ್ಟನ್ನು ತೊಗೊಂಡು ನನ್ನ ಸ್ನೇಹಿತನಿಗೆ ಥ್ಯಾಂಕ್ಸ್ ಹೇಳಿ, ಅವರ ಯಜಮಾನ್ರಿಗೂ ಕೊಟ್ಟು ಮನಸ್ಸಲ್ಲೇ ನನ್ನ ಅಮ್ಮಂಗೆ ವಂದಿಸಿ ಭದ್ರಾವತಿಯಲ್ಲಿರುವ ಅವರ ತಂದೆಗೆ ಕಾಗದ ಬರೆದು ವಿಷಯವೆಲ್ಲಾ ವಿವರಿಸಿದ್ರು. ಪ್ರೇಮಲತಳಿಗೆ ಹಿಂದಿ ಭಾಷೆಯಲ್ಲಿರುವ ನಾಣ್ಣುಡಿ "ಖಾನೆವಾಲೇಕಾ ನಾಮ್ ಧಾನೇಧಾನೇಪೆ ಲಿಖ್ಖಾ ಹೈ" ಜ್ಞಾಪಕ ಬಂದಿರಬೇಕು.

ಎರಡು ದಿನಗಳು ಕಳೆದಿರಬಹುದು, ನನಗೆ ಒಂದು ಪೋಸ್ಟ್‌ಕಾರ್ಡ್ ಬಂತು. ಅದು ನನ್ನ ಸೋದರಮಾವನ ಕಾಗದ. ಅವರಿಗೂ ಸ್ವಲ್ಪ ಆಶ್ಚರ್ಯ ಆಯಿತು ಅಂತ ಕಾಣಿಸುತ್ತೆ, ಏನಿದು, ನಿನ್ನ ಅಮ್ಮ ಪ್ರೀತಿಯಿಂದ ಕಳುಹಿಸಿದ ಒಬ್ಬಟ್ಟು ನಿನಗೆ ಸಿಗಲಿಲ್ಲ. ಹೋಗಲಿ ಬಿಡು ಅಂತ ಹೇಳಿ, ಅಷ್ಟಕ್ಕೇ ನಿಲ್ಲಿಸದೆ ತುಸು ಖಾರವಾಗಿಯೇ, ಅಯ್ಯೋ ಪೆದ್ದೆ, "ಯು ಹ್ಯಾವ್ ಟು ವೈಟ್ ಫಾರ್ ದಿ ಟ್ರೈನ್, ಟ್ರೈನ್ ವಿಲ್ ನಾಟ್ ವೈಟ್ ಫಾರ್ ಯು" ಅಂತ ಎಚ್ಚರಿಸಿದ್ರು. ಅಂದಿನಿಂದ ನಾನು ಯಾವತ್ತೂ ಯಾವ ರೈಲನ್ನು ಮಿಸ್ ಮಾಡ್ಕೊಂಡಿಲ್ಲ. ■

---



# ನೀನೂ ಅವನ ಹಾಗಾಗಬೇಡ

**●ಸುಕೇಶವ**

ದಿನಾಗಲೂ ಮೊಮ್ಮಗ ಅಜ್ಜಿನ ಒಂದು ಕಥೆ ಹೇಳು ಅಂತ ಪೀಡಿಸ್ತಾ ಇದ್ದ. ಅಜ್ಜಿಗೆ ದಿನಾ ಕಥೆ ಹೇಳೀ ಹೇಳೀ ಸಾಕಾಯಿತು. ಅವಳ ಬಳಿ ಇನ್ನು ಸ್ಟಾಕ್ ಇಲ್ಲ. ಮೊಮ್ಮಗ ಬಿಡ್ತಿಲ್ಲ. ಅವತ್ತೂ ಹಾಗೆ ಮೊಮ್ಮಗ ಬಂದು ಪೀಡಿಸಿದಾಗ ಅಜ್ಜಿ ಬಾ ಇಲ್ಲಿ ಕೂತ್ಕೊ ಇವತ್ತು ನಿನಗೊಂದು ಕುತೂಹಲ ಇರೋ ಕಥೆ ಹೇಳ್ತೀನಿ ಅಂದು ಷುರು ಮಾಡಿದಳು. ಮೊಮ್ಮಗ ಪಿಳಿ ಪಿಳಿ ಕಣ್ಣು ಬಿಟ್ಟುಕೊಂಡು ಕೂತ.

ಒಂದೂರಿನಲ್ಲಿ ಒಬ್ಬ ಇದ್ನಂತೆ. ಅವನು ಯಾರ ಮಾತೂ ಕೇಳ್ತಿರಲಿಲ್ಲವಂತೆ. ಊರಿಗೇ ಒಂದು ದಾರಿ ಆದರೆ ಊಸರವಳ್ಳಿಗೇ ಒಂದು ದಾರಿ ಅನ್ನುವಂತೆ ಕಾಗೆ ಕಪ್ಪಗಿದೆ ಅಂತ ಯಾರಾದರೂ ಅಂದರೆ ಏ ಕಪ್ಪಗೆಲ್ಲಿದೆ ಒಂದು ತರಹ ಕಂದು ಬಣ್ಣ ಅಂತಿದ್ದ. ಊಟ ಮಾಡ್ತೀಯೋ ತಿಂಡಿ ತಿನ್ತಿಯೋ ಅಂತ ಕೇಳಿದರೆ ಯಾವುದಾದರೊಂದು ಹೇಳಬೇಕಲ್ಲ, ಆದರೆ ಅವನು ಅಡಿಗೆ ಆಗೋವರೆಗೂ ತಿಂಡಿ ತಿನ್ತಾ ಇರ್ತೀನಿ ಅಂತಿದ್ದ. ಏನಯ್ಯಾ ಸ್ವಲ್ಪ ಹಣ ಉಳಿತಾಯ ಮಾಡು ಹೀಗೆ ಖರ್ಚು ಮಾಡಿದರೆ ಹೇಗೆ ಅಂದರೆ ಖರ್ಚು ಮಾಡಿದರೆ ತಾನೇ ಹಣ ಬರೋದು ಅನ್ತಿದ್ದ. ಅವನನ್ನು ಮಾತ್ರ ಮಾತಿನಲ್ಲಿ ಯಾರೂ ಸೋಲಿಸಲು ಆಗುತ್ತಿರಲಿಲ್ಲ. ಅವನನ್ನು ಎಲ್ಲರೂ ವಿತಂಡವಾದಿ ಎನ್ನುತ್ತಿದ್ದರು. ಆಫೀಸಿನಲ್ಲಿಯೂ ನೋಡ್ರೀ ಈ ಕೆಲಸ ಇವತ್ತು ಸಾಯಂಕಾಲದವರೆಗೆ ಮುಗಿದುಹೋಗಬೇಕು ಅಂದರೆ ಇವತ್ತು ಸಾಯಂಕಾಲವೇ ಯಾಕೆ ಸರ್, ನಾಳೆ ಸಾಯಂಕಾಲ ಆದರೆ ಆಗದೇ ಅನ್ತಿದ್ದ. ಎಷ್ಟೋ ಜನ ಅವನ ಹತ್ತಿರ ವಾದ ಮಾಡೋರು ಯಾರು ಅಂತ ಅಪ್ಪಾ ನೀನು ಹೇಳಿದ ಹಾಗೇ ಆಗಲಿ ಅಂದರೆ ಅದಕ್ಕೂ ಅವನು ಅದ್ಯಾಕಯ್ಯಾ ನಾನು ಹೇಳಿದ ಹಾಗೆ ಆಗಬೇಕು, ನೀನು ಹೇಳಿದ ಹಾಗೆ ಆಗಬಾರದಾ ಅಂತಿದ್ದ. ಒಟ್ಟಿನಲ್ಲಿ ಅವನು ಸುಮ್ಮನಿದ್ದರೂ ಸಮಸ್ಯೆ ಮಾತಾಡುತ್ತಿದ್ದರು ಸಮಸ್ಯೆ ಅನ್ನುವ ಹಾಗಾಗಿದ್ದ ಅಂತ ಹೇಳಿ ಅಜ್ಜಿ ಆಕಳಿಸಿದಾಗ ಮೊಮ್ಮಗ ಅಜ್ಜೀ ಅವನಿಗೆ ಮದುವೆ ಆಗಿತ್ತಾ ಅಜ್ಜಿ ಅಂತ ಕೇಳಿದ. ಬೊಚ್ಚು ಬಾಯಿ ಬಿಟ್ಟು ನಕ್ಕ ಅಜ್ಜಿ ಅದೊಂದು ಕಥೆ. ಮದುವೆ ಮಾಡ್ಕೋಪ್ಪಾ ಅಂತ ಅವರಮ್ಮ ಅಂದರೆ ಯಾಕಮ್ಮಾ ಹುಟ್ಟಿದೋರೆಲ್ಲಾ ಮದುವೆ ಮಾಡ್ಕೊಳ್ಳೇ ಬೇಕಾ. ಹಾಗೇ ಇರಬಾರದಾ ಅಂತ ಕೇಳಿದ್ದ. ಆಯ್ತಪ್ಪ ನಿನಗೆ ಯಾವಾಗ ಬೇಕೋ ಆಗಲೇ ಮದುವೆ ಮಾಡ್ಕೊ ಅಂದರೆ ಯಾಕಮಾ ನಾನು ನಿನಗೆ ಬೇಕಾದಾಗ ಮದುವೆ ಮಾಡ್ಕೊಬಾರದಾ. ನಿನಗೆ ಯಾವಾಗ ಸೊಸೆ ಬೇಕು ಹೇಳು ಆಗ ಮದುವೆ ಮಾಡ್ಕೊತೀನಿ ಅಂದಿದ್ದ. ಮದುವೆಗೆ ಹುಡುಗಿ ನೋಡೋಕೆ ಹೋದಾಗ ಹುಡಿಗೀ ಹತ್ರ ಮಾತಾಡಬೇಕು ಅಂತ ಹೇಳಿ ಹುಡುಗೀನ ನಾನು ಇಷ್ಟಾನಾ ಇಲ್ವಾ ಅಂತ ಕೇಳೋದು ಬಿಟ್ಟು ನೀವು ಇವಾಗ ಯಾಕೆ ಮದುವೆ ಮಾಡ್ಕೊಬೇಕು, ಮದುವೆ ಯೋಚನೆ ಬಿಟ್ಟು ಏನಾದರೂ ಸಾಧನೆ ಮಾಡಬಾರದಾ ಅಂತ ಕೇಳಿದ್ದ. ಅಂತೂ ಇಂತೂ ಅವನಿಗೆ ಯಾವುದೋ ಒಂದು ಹುಡುಗಿ ಗಂಟು ಹಾಕೋ ಹೊತ್ತಿಗೆ ಅವರಮ್ಮನಿಗೆ ಸಾಕು ಬೇಕಾಯಿತು. ಮದುವೆ ಆದ ಮೇಲೆ ಹೆಂಡತಿ ಏನ್ರೀ ಇವತ್ತು ಆಫೀಸಿಗೆ ಹೋಗಲ್ವಾ ಅಂತ ಕೇಳಿದರೆ ಯಾಕೆ ಮನೇಲಿ ಇದ್ರೆ ನಿನಗೆ ತೊಂದರೇನಾ ಅಂತ ಕೇಳ್ತಿದ್ದ. ಇವತ್ತು ಆಫೀಸಿಗೆ ಹೋಗಬೇಡಿ ಮನೇಲೇ ಇರಿ ಅಂದರೆ ಯಾಕೆ ನಾನು ಆಫೀಸರ್ ಹತ್ತಿರ ಉಗಿಸ್ಕೊಬೇಕಾ

ಅಂತಿದ್ದ. ರೀ ಕನ್ನಡ ಸಿನಿಮಾಕ್ಕೆ ಕರ್ಕೊಂಡು ಹೋಗ್ರೀ ಅಂದರೆ ಬೇಡ ಕಣೆ ಒಂದು ಒಳ್ಳೆ ಇಂಗ್ಲಿಷ್ ಸಿನಿಮಾ ನೋಡೋಣ ಅಂತಿದ್ದ. ಸಿನಿಮಾಕ್ಕೆ ಹೋಗಿ ಅಚ್ಚುಕಟ್ಟಾಗಿ ನಿದ್ದೆ ಮಾಡಿಬಿಡ್ತಿದ್ದ ಅಂದಳು.

ಮೊಮ್ಮಗ ಮತ್ತೂ ಕುತೂಹಲದಿಂದ ಅವನು ಸುಧಾರಣೆ ಆಗಲೇ ಇಲ್ಲವಾ ಅಜ್ಜಿ ಅಂತ ಕೇಳಿದ. ಅದಕ್ಕೆ ಅಜ್ಜಿ ಸುಧಾರಣೆ ಆದ ಕಣಪ್ಪ. ಅಷ್ಟೊತ್ತಿಗೆ ಅವರಮ್ಮನಿಗೆ ಸಾಕಾಗಿಹೋಗಿತ್ತು. ಆಮೇಲೆ ಅವನು ಸ್ವಲ್ಪ ಸ್ವಲ್ಪ ಬದಲಾವಣೆ ಆದ ಅಂದ್ರೂ ಮೊದಲಿಗೆ ಚಾಳಿ ಪೂರ್ತಿ ಹೋಗಿಲ್ಲ. ನೀನೂ ಅವನ ಹಾಗಾಗಬೇಡ. ಬುದ್ಧಿವಂತನಾಗು ಹೋಗು ಓದ್ಕೋ ಅಂದು ಅಜ್ಜಿ ಮೊಮ್ಮಗನನ್ನು ಕಳಿಸಿದಳು. ಮೊಮ್ಮಗ ಐದು ನಿಮಿಷ ಬಿಟ್ಟು ಬಂದು ಅಜ್ಜಿ ನೀನು ಹೇಳಿದ ಕಥೆ ತುಂಬಾ ಚನ್ನಾಗಿದೆ. ಆ ವ್ಯಕ್ತಿನ ನೀನು ನೋಡಿದೀಯ ಅಜ್ಜೀ ಅಂತ ಕೇಳಿದ. ಅಜ್ಜಿ ನಕ್ಕು ನಾನು ನೋಡಿದೀನಿ ನೀನೂ ನೊಡಿದೀಯ ಅಂದಳು. ಮೊಮ್ಮಗ ಯಾರಜ್ಜೀ ಅಂತ ಕೇಳಿದರೆ ಅಜ್ಜಿ ಮೊಮ್ಮಗನನ್ನು ಒಂದು ಮೂಲೆಗೆ ಕರ್ಕೊಂಡು ಹೋಗಿ ನಾನು ಹೇಳ್ದೆ ಅಂತ ಯಾರ ಹತ್ರನೂ ಬಾಯಿ ಬಿಡಬೇಡ. ಅವನು ಯಾರು ಗೊತ್ತಾ ಅಂತ ಕೇಳಿದಳು. ಮೊಮ್ಮಗ ಕಣ್ಣರಳಿ ಯಾರಜ್ಜೀ ಅಂತ ಕೇಳಿದರೆ ಅಜ್ಜಿ ಮೊಮ್ಮಗನ ಕಿವೀಲಿ ಅವನು ನಿಮ್ಮಪ್ಪ ಅಂದು ಅಲ್ಲಿಂದ ಜಾಗ ಖಾಲಿ ಮಾಡಿದಳು. ಮೊಮ್ಮಗ ಒಮ್ಮೆ ಕೋಣೆಯಲ್ಲಿರುವ ಅಪ್ಪನ ಕಡೆ ಇನ್ನೊಮ್ಮೆ ಅಜ್ಜಿ ಹೋದ ಕಡೆ ನೋಡಿ ತನ್ನ ಓದು ಮುಂದುವರಿಸಿದ.



# ಪ್ರಯಾಣ ಪ್ರಸಂಗಗಳು

**●ರವಿ ಶಿವರಾಯಗೊಳ**

'ಹೆಲ್ಲೋ ಸರ್ರ್, ಹಿಂದಕ್ಕ ಹೋಗ್ರೀ, ಒಂದ ಸಲ ಹೇಳಿದ್ರ ತಿಳ್ಯಾಂಗಿಲ್ಲ ನಿಮಗ, ಇಲ್ಲಿ ಬಾಗಲೊಳಗ ಜೋಕಾಲಿ ಆಡ್ತಿರೋದು ನಾವು' ಕುರಿಗಳ ತುಂಬಿಕೊಂಡು ಸಂತೆಗೆ ಹೋಗುವ ಟೆಂಪೋದಂತೆ ಬಂದವರನೆಲ್ಲಾ ತುಂಬಿಕೊಂಡ ಬಸ್ಸು ಥೇಟು ಕುರಿ ತುಂಬಿದ ಟೆಂಪೋಗಳಂತೆಯೇ ಆಗಿತ್ತು. ಅಲ್ಲಿ ಕುರಿಗಳು– ಇಲ್ಲಿ ಜನಗಳು. ಕಂಡಕ್ಟರ್ ಮಹಾಶಯರಿಗೆ ಇದೇನು ಹೊಸತಲ್ಲ! ಪ್ರತಿ ದಿನ ಹತ್ತಾರು ಮುಖಗಳನ್ನ ನೋಡಿ, ಹತ್ತಾರು ಬೈಗುಳಗಳಿಗೆ ತುತ್ತಾಗಿ, ಅವರ ತರುವ ಚೀಲಗಳನ್ನು, ಸಾಮಾಗ್ರಿಗಳನ್ನು, ಸಾಮಾನುಗಳನ್ನೂ, ಬಸ್ಸಿನ ಮೇಲ್ಬಾಗದಲ್ಲಿ ಇಟ್ಟು ಅವರು ಇಳಿಯುವಾಗ ನಾಜೂಕಾಗಿ ಅವರ ವಸ್ತುಗಳನ್ನೆಲ್ಲಾ ಅವರವರ ಕೈಗೊಪ್ಪಿಸಿ ಸಂಜೆ ಮನೆ ಮುಟ್ಟೊದ್ರೊಳಗೆ ಹೈರಾಣಾಗದೆ ಅವರ ಅವತ್ತಿನ ದಿನ ಮುಗಿಯುವುದಿಲ್ಲ. ಸಾಮಾನ್ಯವಾಗಿ ಈ ಬಸ್ಸೊಳಗೆ ಪ್ರಯಾಣಿಕರ ಇರುಸು– ಮುರುಸು, ತಮಾಷೆ, ಸಣ್ಣ ಪುಟ್ಟ ಜಗಳ, ಟಿಕೆಟು ದರ ವಿಪರೀತ ಅಂತ ತಕರಾರುಗಳು ನಡೆಯುತ್ತಲೇ ಇರುತ್ತದೆ. ಆದರೆ ಕಂಡಕ್ಟರ್ ಮಹಾಶಯನಿಗೆ ಇರುವಷ್ಟು ತಾಳ್ಮೆ ಸಹನೆ ಪ್ರಯಾಣಿಕರಲ್ಲಿ ಕಡಿಮೆ. ಬೈಸಿಕೊಳ್ಳುವುದಕ್ಕೂ ಶಪಿಸಿಕೊಳ್ಳುವದಕ್ಕೂ ಅವನನ್ನೂ ಬಿಟ್ಟರೇ ಮತ್ಯಾರಿಗೆ ಆದೀತೆ! ಆದರೆ ಪ್ರಯಾಣ ಮಾಡುವಾಗ ನಮ್ಮೂರಿನ ಖಾಸಗಿ ಬಸ್ಸುಗಳಲ್ಲಿ ನಡೆಯುವ ತಮಾಷೆ ಪ್ರಸಂಗಗಳು ಬಹುಶಃ ವಿಮಾನ ಪ್ರಯಾಣದಲ್ಲಿ ಸಿಗಲಿಕ್ಕಿಲ್ಲ.

'ಅಲ್ರೀ, ಹಿಂದಕ್ಕೋಗಿ ಹಿಂದಕ್ಕೋಗಿ ಅಂತಿರಲ್ಲ ಇನ್ನೊಂಚೂರು ಹಿಂದಕ್ಕೆ ಹೋದ್ರೆ ಬಸ್ಸಿಂದಾಚೇ ಹೋಗ್ಬೇಕು. ಇದಕ್ಕಿಂತಾ ಸರ್ಕಾರಿ ಬಸ್ಸು ಎಷ್ಟೋ ಚಲೋ! ರೊಕ್ಕ ಕೊಟ್ರು ನಿಂತ್ಕೊಂಡ ಹೋಗ್ಬೇಕು ಇದ್ರಲ್ಲಿ.' ಬಸ್ಸಿನ ಕೊನೆಯ ಸೀಟಿನ ಸಲಾಕೆಯ ಆಧಾರವಾಗಿ ಹಿಡಿದುಕೊಂಡ ನಿಂತಿದ್ದವರು ಶತಪಥ ಕುದಿಯುತ್ತ ಕಂಡಕ್ಟರ್‌ನಿಗೆ ಮಾತಿನ ಬಾಣ ಬಿಟ್ಟಿದ್ದರು. ಯಾರು ಅಂದವರು? ತಿರುಗಿ ನೋಡ್ಬೇಕು ಅಂದುಕೊಂಡರು ನಾನು ಸಣ್ಣದಾಗಿ ಅಲುಗಾಡುವಂತೆಯೂ ಇರಲಿಲ್ಲ. ಹೆಗಲಿಗೊಂದು ಕಾಲೇಜ್ ಬ್ಯಾಗು ಅಗಾಗ ಅವರಿವರ ಮುಖಕ್ಕೆ ಪರಚುತಿತ್ತು. ನಾನು ನಿಂತುಕೊಂಡಿದ್ದ ಪಕ್ಕದಲ್ಲೆ ಕುಳಿತ ನಲವತ್ತರ ಆಂಟಿಯೊಬ್ಬರು ನನ್ನ ಬ್ಯಾಗು ಅವರ ಮೈಗೆ ತಾಗಿದರೂ ವಟವಟ ಅಂತ ಒಳಗೊಳಗೆ ಶಾಪ ಹಾಕುತಿದ್ದರು. ಹಾಗಾಗಿ ನನಗೆ ತಿರುಗಿ ನೋಡುವ ಭಾಗ್ಯವಿರಲಿಲ್ಲ. ಆದರೆ ಕಂಡೆಕ್ಟರ್ ಮಾತ್ರ ಸುಮ್ಮನಿರದೆ...

'ಓ... ಕಾಕಾರ, ನಮ್ಮ ಬಸ್ಸಿಗೆ ಬರ್ರೀ ಅಂತ ನಾವೇನು ಕರೆದಿಲ್ಲ. ಅಷ್ಟಕ್ಕೂ ನೀವು ಹೇಳ್ತೀರಲ್ಲ ಸರ್ಕಾರಿ ಬಸ್ಸು ಚಲೋ ಅಂತ; ನೀವಿನ್ನೂ ಚರಗಿ ತಗೊಂಡ ಹಳ್ಳಕ್ಕ ಹೊಂಟಾಗ ಅದು ಬಿಜಾಪುರ ತಲುಪಿರತೈತಿ ಗೊತ್ತೈತಿ ಏನ ನಿಮಗ'

ಕಾಕಾರ ಮುಖ ಪೆಚ್ಚಾಗಿ ಹೋಗಿತ್ತು.ಮುಂದೆ ಅವರು ಮಾತಾಡಲಿಲ್ಲ ಆದರೆ ಅವರು ಒಳಗೊಳಗೆ ಶಪಿಸುವವಾಗೆ ಕಾಣುತಿತ್ತು.

ಬಸ್ಸಿನ ಬಾಗಿಲಲ್ಲಿ ಜೋತಾಡುತ್ತ ಯುದ್ದಕ್ಕೆ ಸಿದ್ಧನಾದ ಸೈನಿಕನಂತೆ ತಿರುಗುಬಾಣ ಬಿಟ್ಟಿದ್ದ ಕಂಡಕ್ಟರ್ ಮಹಾಶಯ. ಕೆ ಎಸ್ ಆರ್ ಟಿ ಸಿ ಬಸ್ಸು ದಿನಾಲು ನಮ್ಮೂರಿಂದ ಮುಂಜಾನೆಯ ಆರು ಗಂಟೆಗೆ ಹಾಯ್ದು ಹೋಗುತಿತ್ತು ಅದನ್ನೇ ಈತ ಉಪಮೆ

ಬಳಸಿ ಹೇಳಿದ್ದ. ಬಸ್ನೊಳಗೆ ಆರಾಮಾಗಿ ಸೀಟಿನಲ್ಲಿ ಕುಳಿತಿದ್ದವರು ಮುಸಿಮುಸಿ ನಗಲಾರಂಭಿಸಿದರು.. 'ನೀವಿನ್ನೂ ಚರಗಿ ತಗೊಂಡ ಹಳ್ಳಕ್ಕ ಹೊಂಟಾಗ ಬಸ್ಸು ಬಿಜಾಪುರ ತಲುಪಿರತೈತಿ' ಅನ್ನೋ ಮಾತು ನಗು ತರಸಿತ್ತು ಅವರಿಗೆ. ಆದರೆ ನಿಂತವರಲ್ಲಿ ಯಾರಿಗೂ ನಗು ಬಂದಿರಲಿಲ್ಲ ಯಾಕೆಂದ್ರೆ ಅವರಿಗೆ ಬಿಜಾಪುರ ತಲುಪುವವರೆಗೂ ಯಾರಿಗೂ ಮೈ ತಾಗಿಸದೆ, ಕಾಲುತುಳಿಯದೆ ನಿಲ್ಲುವುದೇ ಪರಮ ಗುರಿ ಆಗಿತ್ತು. ಕುಂತವರದು ಹಾಗಲ್ಲ! ಚುನಾವಣೆಯ ಪ್ರಚಾರ, ಕೈಮುಗಿದು, ಕಾಲು ಬಿದ್ದು, ಸೀರೆ ಕೊಟ್ಟು, ಎಣ್ಣೇ ಕೊಟ್ಟು ಕೊನೆಗೂ ಗೆದ್ದು ಐದು ವರ್ಷದ ಖಾಯಂ ಕುರ್ಚಿಗೆ ವಾರಸುದಾರರಾಗುವ ರಾಜಕಾರಣಿಗಳಂತೆ ಇವರು ಆಗಲೇ ತಮ್ಮತಮ್ಮ ಸೀಟಿಗೆ ವಾರಸುದಾರರಾಗಿದ್ದರು.

ನಿಂತವರ ಸಂಕಟ ಕುಳಿತವರಿಗೆ ತಮಾಷೆ ಅನ್ನಿಸುತಿತ್ತು.

ಇದು ನಡೆಯುವಾಗಲೇ ಮತ್ತೊಂದು ನಿಲ್ದಾಣವು ಬಂತು. ಖಾಸಗಿ ಬಸ್ಸುಗಳಿಗೆ ನಿರ್ದಿಷ್ಟ ನಿಲ್ದಾಣಗಳು ಬೇಕಿಲ್ಲ ನೋಡಿ ಜನ ಹತ್ತಿದಲ್ಲೊಂದು ನಿಲ್ದಾಣ – ಜನ ಇಳಿದು ಹೋದಲ್ಲೊಂದು ನಿಲ್ದಾಣ. ಆದರೆ ಪರಮ ಸಂಕಟ ಏನಂದ್ರೆ ಒಬ್ಬ ಇಳಿದುಹೋದ ಖುಷಿಗೆ ಮೈ ಅಗಲಿಸಿ ನಿಲುವ ಹೊತ್ತಿಗೆ ಮೂರ್ನಾರು ಜನ ಹತ್ತಿರುತ್ತಾರೆ. ಮತ್ತದೇ ತನ್ನ ದಾಟಿಯಲ್ಲಿ ಕಂಡಕ್ಟರ್ ಒದರುತಿರುತ್ತಾನೆ 'ಹಿಂದಿನವರು ಸ್ವಲ್ಪ ಹಿಂದೆ ಹೋಗ್ರಪ್ಪ' ಅಂತ. 'ಏ ಮಾರಯ್ಯ ಮುಂದಿನವರಿಗೆ ಹಿಂದ ಹೋಗಂತ ಹೇಳು, ಹಿಂದಿನವರ ಹಿಂದೆಲ್ಲಿಗೇ ಹೋಗುದು? ಅಂತ ಕೇಳ್ಬೇಕು ಅನ್ನಿಸಿದ್ರು ಕೇಳಂಗಿಲ್ಲ. ಯಾಕಂದ್ರ ಅಷ್ಟೊತ್ತಿಗೆ ಆಗತಾನೇ ಹತ್ತಿದವ್ರು ಮಂದಿ ಕಾಲು ತುಳಿಯುತ್ತಾ ಬೈಸಿಕೊಳ್ಳುತ್ತಾ ಪಕ್ಕಕ್ಕೆ ಬಂದಿರುತ್ತಾರೆ. ಅಷ್ಟೊತ್ತೂ ಮಲಗಿದ ಕೂಸು ಜನರ ಗದ್ದಲಕ್ಕೆ ಎದ್ದು ಕುಂಯ್ಯಿ.. ಅಂತ ಅಳುವದಕ್ಕೆ ಶುರು ಮಾಡಿರುತ್ತದೆ. ಅಲ್ಲೊಬ್ಬ ಕಾಕಾ ಎಲೆ ಅಡಿಕೆ ತಿಂದು ಶೇಖರಣೆ ಮಾಡಿ ಇಟ್ಟುಕೊಂಡ ಉಗುಳನ್ನು ಕೆರೆ ಕಟ್ಟೆ ಒಡೆದಂತೆ ಕಿಟಕಿಗಳಿಂದ ಉಗಳಿರುತ್ತಾನೆ ಅದೆಲ್ಲಿಂದಲೋ ಹಾರಿ ಬಂದ ಹನಿಯೊಂದು ಮುಖದೊಳಗೇ ಬೀಳುತ್ತದೆ ಆಗ ಆತನ ಮೇಲೆ ಇಡೀ ಪ್ರಯಾಣಿಕರ ಸೈನ್ಯವೇ ಯುದ್ಧಕ್ಕೆ ಇಳಿಯುತ್ತದೆ. ಆತ ಉಗುಳಿದ ಕೆಂಪು ಬಣ್ಣದ ಉಗಳು ಬಸ್ಸಿನ ಒಂದು ಮಗ್ಗುಲಲ್ಲಿ ಪಿಕಾಸೋನ ಕುಂಚದಿಂದ ಬಿಡಿಸಿದ ಚಿತ್ರದಂತಿರುತ್ತದೆ. ಮಾರನೇಯ ದಿನ ಕಂಡಕ್ಟರ್ ತೊಳೆಯುವಾಗ ಮಾತ್ರ ಉಗುಳಿದವನ ಮನೆಯವರೆಲ್ಲರು ಕಂಡಕ್ಟರ್ ನ ಬಾಯಲ್ಲಿ ಬಂದು ಹೋಗುತ್ತಾರೆನ್ನುವುದು ಅಲ್ಲಗಳೆಯುವಂತಿಲ್ಲ.

ಹೊರಟ ಬಸ್ಸಿನೊಳಗೆ ನಿಂತು ನಿಂತು ಸಾಕಾಗಿತ್ತು. 'ಈ ಖಾಸಗಿ ಬಸ್ಸಿನ ಸಹವಾಸವೇ ಸಾಕು ಇನ್ನೇಲೆ ಬರೋದೆ ಇಲ್ಲ ಈ ಬಸ್ನೊಳಗೆ' ಈ ಮಾತನ್ನ ಅದೆಷ್ಟು ಬಾರಿ ಹೇಳಿದ್ದೇನೋ! ಮತ್ತೆ ಮತ್ತೆ ಇದೆ ಬಸ್ಸು ಹತ್ತಿದ್ದೇನೆ – ಅದೆ ಮಾತು ಹೇಳಿದ್ದೇನೆ. ನನಗೆ ಅಷ್ಟೊತ್ತೂ ನಿಂತ ಕಾಲುಗಳೂ ಜೂಮ್ ಹಿಡುಕೊಂಡಂತಾಗಿತ್ತು ನನಗರಿಯದಂತೇ ಮಿಸುಕಾಡಿದ್ದರಿಂದ ನನ್ನ ಪಕ್ಕದಲ್ಲಿದ್ದ ನಲವತ್ತರ ಆಂಟೀ....

'ಎಯ್ ಹುಡ್ಗ, ಸ್ವಲ್ಪ ನೋಡ್ಕೊಂಡು ನಿಲ್ಲು. ನಿನ್ನ ಬ್ಯಾಗ ಮುಖಕ್ಕ ಬಂದ ಬಡ್ಯಾತೈತಿ' ಆಮೇಲೆ ತುಸು ಹೊತ್ತು ಅವಳು ಒಳಗೊಳಗೇ ವಟವಟ ಅಂತ ವಟಗುಡುತ್ತಲೇ ಇದ್ದಳು ಅದು ಮಾತ್ರ ಅರ್ಥವೂ ಆಗ್ಲಿಲ್ಲ ನನಗೆ.

ನಾನೆಂದೆ–

'ಆಂಟಿ ಇದು ಬಸ್ಸ ಐತ್ರಿ, ಮನೆ ಅಲ್ಲ! ಒಬ್ಬರಿಗೊಬ್ಬರದು ಮೈ ಹತ್ತೂದ, ಬ್ಯಾಗ ತಾಗೂದ, ಕಾಲು ತುಳಿಯೂದ....ನಡೆಯೋದೆ. ನಿಮಗ ನನ್ನ ಬ್ಯಾಗ ಕಿರಿಕಿರಿ ಕೊಡಾತೈತಿ ಹೌದಿಲ್ಲೋ!? ಹಂಗಾದ್ರ ಒಂದ ಕೆಲ್ಸ ಮಾಡ್ರಿ; ಹೆಂಗೂ ಖಾಲಿ ಕುಂತೀರಿ ನಂದೊಂದು ಬ್ಯಾಗ ಒಜ್ಜಿ ಆಗೋದಿಲ್ಲ ನಿಮಗ. ನನ್ನ ಬ್ಯಾಗ ಹಿಡುಕೊಂಡು ಕೂತ್ಕಂಕೊಳ್ರೀ....' ಆಂಟಿ ಕಡೆಗೆ ಬ್ಯಾಗು ಹಿಡಿದು ನಿಂತುಬಿಟ್ಟೆ; ಅವರು ನೋಡಿಯೂ ನೋಡದಂತೆ ಕಿಟಕಿಯಿಂದಾಚೆ ನೋಡುತ್ತಾ ಕುಳಿತುಕೊಂಡರು.

ಅಷ್ಟರಲ್ಲಾಗಲೇ ಇನ್ನೊಂದು ಪ್ರಸಂಗವೂ ನಡೆಯಿತು. ಅಷ್ಟೊತ್ತೂ ಚೆನ್ನಾಗಿಯೆ ಕುರ್ರಕುರ್ರಿ ತಿನ್ನೂತ್ತ ಕುಳಿತದ್ದ ಕಾಲೇಜ್ ಹುಡುಗಿಯೊಬ್ಬಳು ಇದ್ದಕ್ಕಿದ್ದಂತೆ ತನ್ನ ತಲೆಯನ್ನು ಕಿಟಕಿಯೊಳಗೆ ತುರುಕಿಸಿ ವಾಯ್ಕ್... ವಾಯ್ಕ್.... ಅಂತೇಳಿ ವಾಂತಿ ಮಾಡಿಕೊಂಡಳು. ಸುತ್ತಲಾಗಿ ಕುಳಿತವರೆಲ್ಲರೂ 'ಪಾಪ, ಬಸ್ಸು ಪ್ರಯಾಣ ಆಗಿ ಬರಲ್ಲ ಅಂತ ಕಾಣುತ್ತೆ ಹುಡುಗಿಗೆ; ತಿಂದಿದ್ದೆಲ್ಲ ಕಕ್ಕಿಬಿಟ್ಟು ನೋಡ್ರಿ' ಅಂತ ಮಾತಾಡತೋಡಗಿದರು. ಆಗ ಹುಡಗಿ ತಲೆ ಒಳಗೆ ತಕ್ಕೊಂಡು ಪಕ್ಕದಲ್ಲೆ ಮಗುವೊಂದನ್ನು ಹೊತ್ತುಕೊಂಡು ಕುಳಿತಿರುವ ಹೆಣ್ಣುಮಗಳನ್ನು ನೋಡಿ...

'ಓ ಅಕ್ಕಾರ, ಆ ಮಗೂನ ಮೂಗಲ್ಲಿ ಸಿಂಬಳ ಬರ್ತಿದೆ – ಅದು ಅದನ್ನೆ? ನಾಲಿಗಯಿಂದ ತಿಂತಿದೆ ನೋಡ್ರೀ ಸ್ವಲ್ಪ ನನಗೆ ನೋಡೋಕೆ ಆಗದೆ ವಾಂತಿ ಮಾಡ್ಕಂಡೆ' ಅಂದ್ಳು...

ಅದಕ್ಕೆ ಆ ಹೆಣ್ಣುಮಗಳು ' ಐಯ್ ನೀ ಏನ ಸಣ್ಣಾಕಿ ಇದ್ದಾಗ ಸಿಂಬಳ ಇಲ್ದೆ ಇದ್ದೇನು? ಮಗೂ ಅದು ತಿಂದಿರ್ಬೇಕು; ನೀನಗೇನು ತಿನ್ನು ಅಂತ ಹೇಳ್ತಾ?

ಅದನ್ನು ಕೇಳಿಸಿಕೊಂಡ ಆ ಹುಡಗಿ ಮತ್ತು ಉಳಿದವರೆಲ್ಲಾ ಒಂದೂ ಮಾತಾಡದೇ ಕುಳಿತುಕೊಂಡರು. ಆ ಹುಡಗಿ ಮಾತ್ರ ಕಣ್ಣು ಕಾಣುವಷ್ಟು ಬಿಟ್ಟು ತನ್ನ ಇಡೀ ಮುಖವನ್ನೆಲ್ಲಾ ಬಟ್ಟೆಯಿಂದ ಕಟ್ಟಿಕೊಂಡಳು. ಬಟ್ಟೆಯೊಳಗೆ ಅವಳ ಮುಖಭಾವವೇ ಕಾಣಲಿಲ್ಲ ಯಾರಿಗೂ.

ದಟ್ಟ ಕಾಡಿನೊಳಗಿಂದ ಕಾಲು ದಾರಿಯಿಂದ ಬರುವ ಸಿಂಹದಂತೆ ಕಂಡಕ್ಟರ್ ಮಹಾಶಯರು ಜನಗಳೊಳಗಿಂದ ನುಗ್ಗಿಕೊಂಡು ಬರುತ್ತಿದ್ದರು.ಟಿಕೆಟು? ಟಿಕೆಟು? ಅನ್ನುತ್ತಾ ಬಂದ. ಓ ವೈನಿ ಟಿಕೆಟ ತಗೊಳ್ಳಿ ಅಂದ. ಅವರು ತಮ್ಮದೊಂದು ಟಿಕೆಟು ತಗೆದುಕೊಂಡರು.

'ಆ ಹುಡ್ಗ ಯಾರು?' ಕಂಡಕ್ಟರ್ ಕೇಳಿದ.

'ನಮ್ಮವ್ನೇ..'

'ಅವ್ನ ಟಿಕಟ ಯಾರ ತಗೋತಾರ?'

'ಸಣ್ಣಂವ ಅದಾನ್ರೀ ಇನ್ನೂ....'

'ಓ ವೈನಿ ಮದುವಿ ಮಾಡ್ಸಿದ್ರ ನಾಲ್ಕ ಮಕ್ಕಳ ತಂದೆ ಆಗ್ತಾನ್ರೀ ಅಂವ ಸಣ್ಣವ ಅಂತಿರಲ್ಲ!'

'ಅದ್ಕ ಮದುವಿ ಮಾಡಿಲ್ಲ! ಹೋಗಪ್ಪ ಮುಂದ...'

ಕಂಡಕ್ಟರ್ ನಕ್ಕೊಂತ ಮುಂದೆ ಸಾಗಿದ. ಬಸ್ಸಿನ ಕೊನೆಯ ಸೀಟನಿಂದ ಮೂರನೇ ಸೀಟಿಗೆ ವೃದ್ದರೊಬ್ಬರು ಕುಳಿತಿದ್ದರು. ಅವರ ಬಳಿಗೆ ಹೋದ ಕಂಡಕ್ಟರ್ ಮಹಾಶಯರು 'ಅಜ್ಜ, ಟಿಕೆಟ್ಟು?' ಅಂದ್ರು .ಬಹುಶಃ ಆ ಅಜ್ಜನಿಗೆ ಕಿವಿ ಕೇಳಿಸದೇ ಇರಬಹುದು ಅನ್ಸುತ್ತೆ. ಮತ್ತೊಂದು ಸಲ ತುಸು ಜೋರಾಗಿಯೇ 'ಅಜ್ಜ ಟಿಕೆಟು!? 'ಎಂದ ಕಂಡಕ್ಟರ್; ಈಗ ಕೇಳಿಸಿತ್ತು ಅಜ್ಜನಿಗೆ.

'ಎಷ್ಟಪ್ಪ?'

'ಅಜ್ಜ ಐವತ್ರೂಪಾಯಿ '

'ಹತ್ರೂಪಾಯಿ!?'


'ಅಜ್ಜ ಐವತ್ರೂಪಾಯಿ–ಐವತ್ರೂಪಾಯಿ'

ಅಜ್ಜನಿಂದ ಟಿಕೆಟು ಪಡೆಯುವ ಹೊತ್ತಿಗೆ ಕಂಡಕ್ಟರ್ ಮಹಾಶಯನಿಗೆ ಸಾಕು ಸಾಕಾಗಿ ಹೋಗಿತ್ತು. ಕಂಡಕ್ಟರ್ ಒಂದು ಕೇಳಿದರೆ– ಅಜ್ಜ ಇಂದು ಹೇಳುತಿದ್ದ. ಬಹಳ ವರ್ಷದ ನಂತರ ಬಸ್ಸಿನ ಪ್ರಯಾಣ ಮಾಡಿದಂತಿದ್ದ ಅಜ್ಜ 'ಬಿಜಾಪುರಕ ಐವತ್ತು ರೂಪಾಯಿ ಬಾಳ ಆಯ್ತಿ ಟಿಕೆಟ' ಅಂತಿದ್ದ. ಕಂಡಕ್ಟರ್ ಜೊತೆಗೆ ವಾದ ಮಾಡಿ 'ಇನ್ನೊಮ್ಮೆ ನಿನ್ನ ಬಸ್ಸೊಳಗ ಬರಾಂಗಿಲ್ಲ ನಾ ನಡ್ಕೊಂಡ ಬಿಜಾಪುರ ಹೋಗ್ತೀನಿ ಕಾಲ ಗಟ್ಟಿ ಅದಾವ ಇನ್ನೂ... ನಿನ್ನ ವಯಸ್ಸನ್ಯಾಗ ನಾ ನಡ್ಕೊಂಡ ಹೋಗೀನಿ ಅವಾಗ ಬಸ್ಸು ಇರಲಿ ಸೈಕಲ್ಲು ಇರಲಿಲ್ಲ ಈಗಲೂ ಹಂಗ ಮಾಡ್ತೀನಿ ' ಅಜ್ಜ ಈಗಿನವರ ಆಗಿನವರ ವ್ಯತ್ಯಾಸ ತಿಳಿಸಿದರೆ... ' ಅಜ್ಜ ನೀ ನಡಕೊಂಡು ಹೋಗಿ ಬಿಜಾಪುರ ಹೋಗುದರೊಳಗ ನನ್ನ ಬಸ್ಸು ಎರಡ ಸಲ ಹೋಗಿ ಬರ್ತೈತಿ' ಅಂತ ಈಗೀನ ತಂತ್ರಜ್ಞಾನದ ಬಗ್ಗೆ ಮಾತಾಡುತಿದ್ದ ಕಂಡಕ್ಟರ್. ಬಸ್ಸು ಮಾತ್ರ ಬರುವವರನ್ನು ಬರಮಾಡಿ– ಹೋಗುವವರನ್ನು ಬೀಳ್ಕೊಟ್ಟು ಸಾಗುತ್ತಲೇ ಇತ್ತು. ■

***



## ಪುಸ್ತಕ ಪರಿಚಯ ●ಆರತಿ ಘಟಿಕಾರ್




**ಪುಸ್ತಕ – ಒಂದು ಕಪ್ ಕಾಫೀ (ಹರಟೆಗಳ ಗುಟುಕು )**
**ಲೇಖಕರು : ನಳಿನಿ ಭೀಮಪ್ಪ**
**ಭಾವಸಿಂಚನ ಪ್ರಕಾಶನ**
**ಬೆಲೆ –175**

ದಿನ ಪತ್ರಿಕೆ /ವಾರ ಪತ್ರಿಕೆಗಳಲ್ಲಿ ತಮ್ಮ ಹಾಸ್ಯ ಲೇಖನ, ಕಥೆ ಪ್ರಬಂಧ,ವೈಚಾರಿಕ ಲೇಖನಗಳು ಹೇಗೆ ನಾನಾ ಸಾಹಿತ್ಯ ಪ್ರಕಾರದಲ್ಲಿ ತೊಡಗಿಸಿಕೊಂಡು ಚಿರಪರಿಚಿತರಾಗಿರುವ ನಳಿನಿ ಭೀಮಪ್ಪ ಅವರ ಹರಟೆಗಳ ಸಂಕಲನ "ಒಂದು ಕಪ್ ಕಾಫೀ "ಯನ್ನು ಕೈಯಲ್ಲಿ ಹಿಡಿದಾಗ ಗುಟುಕು ಗುಟುಕಿನಲ್ಲೂ ಸ್ವಾದ ತುಂಬಿಕೊಂಡು, ನಿಧಾನವಾಗಿ ಅಸ್ವಾದಿಸುತ್ತ ಕಾಫೀ ಕಪ್ ಖಾಲಿ ಮಾಡುವ ಮನಸ್ಸಾಗುತ್ತದೆ. ಜೀವಂತಿಕೆ ಯಿಂದ ನಳನಳಿಸುವ ಪ್ರಬಂಧಗಳು ತುಟಿಯನಗೆ ಮಾಸದಂತೆ ಓದಿಸಿಕೊಳ್ಳುತ್ತವೆ.

ನಳಿನಿಯವರು ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ತಮ್ಮ ಕಾಲಡಿಯಲ್ಲಿ ಅಡಗಿದ ಸಣ್ಣ ಸಣ್ಣ ಸಂಗತಿಗಳನ್ನೂ ಲಘು ಪ್ರಬಂಧವಾಗಿಸಿ ರಸವತ್ತಾಗಿ ಕಟ್ಟಿಕೊಡಬಲ್ಲರು. ಆಸ್ಥೆಯಿಂದ ಹೆಣೆದ ಅವರ ಪ್ರತಿ ಲೇಖನಗಳಲ್ಲಿ ಲವಲವಿಕೆಯಿದೆ, ನಾವೀನ್ಯತೆ ಇದೆ, ನೇರ ನುಡಿಯಿಂದಲೇ ವಾಸ್ತವದ ಆಗುಹೋಗುಗಳತ್ತ ಸಮಾಜದ ಒರೆಕೊರೆಗಳತ್ತ ತಮ್ಮ ಹಾಸ್ಯದ ಮನೋಭಾವದಿಂದಲೇ ಕುಟುಕುತ್ತ ನಮ್ಮ ಗಮನ ಸೆಳೆಯುವ ಗಟ್ಟಿಯಾದ ಬರವಣಿಗೆಯ ಕಲೆ ಇವರಿಗೆ ಸಿದ್ಧಿಸಿದೆ ಎನ್ನಬಹುದು.

ಈ ಸಂಕಲನದಲ್ಲಿ ಮೂವತ್ತೆರಡು ಹರಟೆಗಳ ಗುಚ್ಛ ಓದುಗರನ್ನು ವಿಪುಲವಾಗಿ ರಂಜಿಸುತ್ತದೆ. ಅವರ ಆರಂಭಿಕ ಪ್ರಬಂಧ "ಕಾರು ಕೊಳ್ಳುವ ಸಡಗರ" ತಾವು ಮನೆಮಂದಿಯೆಲ್ಲ ನಡೆಸುವ ಹೊಸ ಕಾರುಗಳ ಬೇಟೆಯನ್ನು ಮನೆಗೆ ತಕ್ಕಂತೆ ಕನ್ಯಾಮಣಿ ಆರಿಸುವಷ್ಟೇ ಕಠಿಣ ಕ್ರಿಯೆ ಎನ್ನುವ ಹೋಲಿಕೆ ಹರಿಬಿಡುತ್ತಾರೆ " ಕರ ಮುರಿದ ಶುಭ ವೇಳೆ "ಈ ಲೇಖನದ ಶೀರ್ಷಿಕೆಯೆ ಹಾಸ್ಯಮಯವಾಗಿದ್ದು, ಓದುವಾಗ ಹಿಂದೊಮ್ಮೆ ನನ್ನ ಕಾಲಿನ ಮೂಳೆ ಮುರಿದಾಗ ಮನೆಯವರಷ್ಟೇ ಅಲ್ಲದೆ ನೆರೆಮನೆಯವರೂ ಸಹ ನನಗೆ ಕೂಡಿಸಿ ಮಾಡಿದ ರಾಜೋಪಚಾರ ನೆನಪಾಯಿತು. ಇವರ ಕರ ಮುರಿದು ಯಜಮಾನರ 'ಕನಿ'ಕರ ಸಿಕ್ಕಾಪಟ್ಟೆ ಜಾಗೃತವಾಗಿದ್ದರ ಪರಿಣಾಮ ಮನೆಗೆಲಸಕ್ಕೆ ನಲುಗಿ ಒಂದೇ ವಾರಕ್ಕೆ ಯಜಮಾನರ ತೂಕವಿಳಿಯುವ ಪರಿ ನಗು ಉಕ್ಕಿಸುತ್ತದೆ. ಆದರೆ ಗಂಡ ಮಕ್ಕಳು ಕೈಯ್ಯಿಗೆ ಹಾಕಿದ ಬ್ಯಾಂಡೇಜ್ ಬಿಚ್ಚುವವರೆಗೂ ಗಣೇಶನನ್ನು ಇಪ್ಪತ್ತೊಂದು ದಿನ ಕೂಡಿಸಿ ದಿನಕ್ಕೊಂದು ನೈವೇದ್ಯ ಮಾಡಿ ಬಡಿಸುವಂತೆಯೇ ತಮಗಾದ ಕೂತಲ್ಲೇ ಊಟ ತಿಂಡಿಯ ರಾಜೋಪಚಾರದ ವ್ಯಾಖ್ಯಾನಗಳು ನಗೆಗಡಲಿನಲ್ಲಿ ಮುಳುಗಿಸುತ್ತದೆ "ರವರವಿಕೆ" ಲೇಖನ ಈಗಿನ ಕಾಲದಲ್ಲಿ ಮಹಿಳಾಮಣಿಗಳು ಟೈಲರಪ್ಪನ ಅಂಗಡಿಗೆ ಎಡತಾಕುತ್ತಾ ನಾನಾ ವಿನ್ಯಾಸದ ಡಿಸೈನರ್ ಬ್ಲೌಸುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಪರಿಪಾಟಲು ರಂಜಿಸುತ್ತದೆ.

ಒಟ್ಟಿನಲ್ಲಿ ಈ ಸಂಕಲನದ ಲೇಖನಗಳು ನಳಿನಿಯವರ ಸರಳವಾದರೂ ವಿಶಿಷ್ಟ ಶೈಲಿಯ ಬರವಣಿಗೆ, ಕ್ರಿಯಾತ್ಮಕವಾದ ಚಿಂತನೆಗಳಿಂದ ಒಂದೇ ಗುಕ್ಕಿಗೆ ಓದುಗರ ಮನಸೆಳೆದುಬಿಡುತ್ತವೆ. ಅವರ ಈ ಚೊಚ್ಚಲ ಹರಟೆಗಳ ಸಂಕಲನಕ್ಕೆ ಹಾರ್ದಿಕ ಅಭಿನಂದನೆಗಳನ್ನು ಹೇಳುತ್ತಾ ಅವರ ಸಾಹಿತ್ಯ ಯಾನ ಇನ್ನು ಹೆಚ್ಚಿನ ಯಶಸ್ಸಿನಿಂದ ಸಾಗಲಿ ಎಂದು ಹಾರೈಸುತ್ತೇನೆ. ■